## ಅಧ್ಯಾಯ 2

# ಯೆಹೂದ್ಯರು ವಿಷಯವೇನು?

ಈ ಅಧ್ಯಾಯದಲ್ಲಿ, ಪೌಲನು ತನ್ನ ಗಮನವನ್ನು ಅನ್ಯಜನರಂತೆಯೇ ಯೆಹೂದ್ಯರು ಸಹ ತಮ್ಮ ಪಾಪದಲ್ಲಿ ಕಳೆದುಹೋಗಿದ್ದಾರೆಂಬುದನ್ನು ತೋರ್ಪಡಿಸುವದರ ಕಡೆಗೆ ತಿರುಗಿಸುತ್ತಾನೆ. 1ನೇ ಅಧ್ಯಾಯವು ಭಕ್ತಹೀನರ ವಿರುದ್ಧವಾಗಿ ತೋರಿ ಬಂದ ದೇವರ ಕೋಪಾಗ್ನಿಯ ಬಗ್ಗೆ ಪ್ರಕಟಗೊಳಿಸಿತು (1:18), ಆದರೆ 2ನೇ ಅಧ್ಯಾಯವು ಬರಲಿರುವ ಕೋಪಾಗ್ನಿಯ ವಿಷಯವಾಗಿ ಒತ್ತಿಹೇಳುತ್ತದೆ (2:5)—". . . ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ" (2:16).

ಪೌಲನು ಅನ್ಯಜನಾಂಗದವರ ಪಾಪಗಳ ಬಗ್ಗೆ ಚರ್ಚಿಸುತ್ತಿದ್ದರೆ, ಯೆಹೂದ್ಯರು ಬಹಳ ಹುರುಪಿನಿಂದ ಹೌದು ಸರಿಯಾಗಿದೆ ಎಂದು ತಮ್ಮ ತಲೆಗಳನ್ನು ಅಲ್ಲಾಡಿಸುತ್ತಿದ್ದರೆಂಬುದನ್ನು ಊಹಿಸಿಕೊಳ್ಳುವದು ಕಷ್ಟಕರವೇನಲ್ಲ: "ಸರಿಯಾಗಿಯೇ ಹೇಳಿದಿ! ಆಮೆನ್! ಸಹೋದರನೇ, ಬೋಧಿಸು!" ಈಗ ಪೌಲನು ಒಮ್ಮೆಲೇ ತನ್ನ ಪೂರ್ಣ ಗಮನವನ್ನು ಅನ್ಯಜನರಿಂದ ತೆಗೆದು ಅವರ ಕಡೆಗೇ ತಿರುಗಿಸಿದಾಗ ಅವರಿಗಾದ ಆಘಾತವನ್ನು ಊಹಿಸಿಕೊಳ್ಳಿರಿ: "ಆದದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗೆಂದರೆ ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪು ಮಾಡಿಕೊಂಡ ಹಾಗಾಯಿತು" (2:1).

ಪೌಲನು 2:1-16 ವಚನಗಳಲ್ಲಿ ಯೆಹೂದ್ಯರನ್ನು ಉದ್ದೇಶಿಸಿ ಮಾತಾಡುತ್ತಿದ್ದಾನೋ ಅಥವಾ ಯೆಹೂದ್ಯರ ಕುರಿತಾಗಿ ಆತನ ಆ ನಿರ್ದಿಷ್ಟವಾದ ಹೇಳಿಕೆಗಳು 17ನೇ ವಚನದಿಂದಲೇ ಆರಂಭವಾಗುತ್ತವೋ ಎಂಬ ವಿಷಯದಲ್ಲಿ ಸ್ವಲ್ಪ ಪ್ರಶ್ನಾರ್ಥಕ ಚಿಹ್ನೆಯಿರುತ್ತದೆ. 1-16 ವಚನಗಳನ್ನು ರಕ್ಷಣೆಗಾಗಿ ತಮ್ಮ ನೈತಿಕ ಸಭ್ಯತೆಯ ಮೇಲೆ ಆಧಾರಗೊಳ್ಳುವ ಯಾವದೇ ವ್ಯಕ್ತಿಗಳಿಗೆ *ಅನ್ವಯಿಸಬಹುದಾಗಿದೆ.* ಹೇಗೂ, 2ನೇ ಅಧ್ಯಾಯದ ಕಡೇ ಭಾಗದಲ್ಲಿ ಹೇಗಿತ್ತೋ ಹಾಗೆಯೇ ಮೊದಲ ಭಾಗದಲ್ಲಿ ಸಹ ಪೌಲನ ಪ್ರಮುಖ ಗುರಿಯು ಒಬ್ಬರೇ ಆಗಿರುವಂತೆ ತೋರುತ್ತದೆ-ಯೆಹೂದ್ಯರು. ಆ ನಿರ್ಧಾರಕ್ಕೆ ಬರಲು ಐದು ಕಾರಣಗಳು ಇಲ್ಲಿವೆ:

1. ಪೌಲನ ಪತ್ರಿಕೆಯ ಮುಖ್ಯಭಾಗದಲ್ಲಿ ಆತನ ಪ್ರಮುಖ ಗುರಿಯು, "ಯೆಹೂದ್ಯರೇ ಆಗಲಿ, ಗ್ರೀಕರೇ ಆಗಲಿ ಎಲ್ಲರೂ ಪಾಪಕ್ಕೆ ಒಳ ಬಿದ್ದವರು" ಎಂಬದನ್ನು ತೋರಿಸಿಕೊಡುವದಾಗಿತ್ತು (3:9). ಅನ್ಯಜನರು ಪಾಪಿಗಳಾಗಿದ್ದಾರೆಂಬುದನ್ನು ಸ್ಥಾಪಿಸಿದ ಬಳಿಕ, ಆತನು ಮುಂದೆ ತನ್ನ ಗಮನವನ್ನು ಯೆಹೂದ್ಯರ ಕಡೆಗೆ ತಿರುಗಿಸುವದು

ಸಹಜವಾಗಿತ್ತು-ಅವರು ಸಹ ಪಾಪಿಗಳಾಗಿದ್ದಾರೆಂದು ತೋರಿಸುವದಾಗಿತ್ತು.

2. ಪೌಲನು 1ನೇ ಅಧ್ಯಾಯದ ಕಡೇ ಭಾಗದಲ್ಲಿ ಮೂರನೆಯ ವ್ಯಕ್ತಿಯನ್ನು ("ಅವರು" ಮತ್ತು "ಅವರಿಗೆ") ಉಪಯೋಗಿಸುತ್ತಾನೆ. ಆತನು 2:1ರಲ್ಲಿ, ಎರಡನೆಯ ವ್ಯಕ್ತಿಗೆ ("ನೀನು") ತಿರುಗುತ್ತಾನೆ: "ಆದುದರಿಂದ . . . ಉತ್ತರಹೇಳುವದಕ್ಕೆ ನಿನಗೆ ಮಾರ್ಗವಿಲ್ಲ." 17ನೇ ವಚನವು ಸಹ ಅದೇ ದಾರಿಯನ್ನು ಅನುಸರಿಸುತ್ತದೆ: "ನೀನು 'ಯೆಹೂದ್ಯನೆನಿಸಿಕೊಂಡವನು.'" 17ನೇ ವಚನದಲ್ಲಿ: "ಯೆಹೂದ್ಯನು" ಎಂದು ಹೆಸರಿಸುವದು 1ನೇ ವಚನದಲ್ಲಿ ಹೇಳಲಾದ "ನೀನು" ಎಂಬವರು ಯಾರು ಎಂಬದನ್ನು ಗುರುತಿಸುವಂತೆ ತೋರುತ್ತದೆ.

3. ರೋಮಾ 2:1-16 ರಲ್ಲಿ, ಅನ್ಯಜನರ ಬಗ್ಗೆ ಉಲ್ಲೇಖಿಸಲ್ಪಟ್ಟಿದೆಯಾದರೂ ಅವರನ್ನು ಬಣ್ಣಿಸಲಾಗಿದೆಯೇ ಹೊರತು ಸಂಭೋದಿಸಿರುವದಿಲ್ಲ. ಅವರನ್ನು ವಿವಿಧವಾಗಿ "ಗ್ರೀಕರು" (2:9, 10), "ಧರ್ಮಶಾಸ್ತ್ರವಿಲ್ಲದವರು" (2:12) ಮತ್ತು "ಅನ್ಯಜನರು" (2:14, 15) ಎಂದು ಕರೆಯಲಾಗಿದೆ. ಹೇಗೂ, ಅವರನ್ನು ಎಂದಿಗೂ ಎರಡನೆ ವ್ಯಕ್ತಿಯ ಹೆಸರಿನಿಂದ ಸಂಭೋದಿಸಲಿಲ್ಲ ("ನೀನು").

4. 2:1 ರಲ್ಲಿ, ಪೌಲನು ತಾನು ಉದ್ದೇಶಿಸಿ ಮಾತಾಡಿದವರ ಮೇಲೆ ಅವರು ಖಂಡನೆ ಮಾಡುತ್ತಿದ್ದ ಎಲ್ಲಾ ಕೃತ್ಯಗಳನ್ನು ಸ್ವತಃ ಮಾಡುವವರು ಎಂದು ಆರೋಪ ಮಾಡಿದನು. 2:21-23 ರಲ್ಲಿ, ಪೌಲನು ಆ ರೀತಿಯ ಸಾಮರಸ್ಯವಿಲ್ಲದಿರುವಿಕೆಗೆ ನಿಖರವಾದ ಉದಾಹರಣೆಗಳನ್ನು ನೀಡುತ್ತಾನೆ-ಯೆಹೂದ್ಯರ ವಿಷಯವಾಗಿ. ಇಲ್ಲಿ, ಪುನಃ 2:1-16ರಲ್ಲಿ ಸಂಭೋದಿಸಿದವರ ಹಾಗೂ 2:17-29ರಲ್ಲಿನ ಯೆಹೂದ್ಯರ ನಡುವೆ ಹೊಂದಾಣಿಕೆಯಿರುವದು ಕಂಡುಬರುತ್ತದೆ.

5. 2:1-16 ರಲ್ಲಿ ಪಟ್ಟಿ ಮಾಡಲಾಗಿರುವ ಪಾಪಗಳು ಕೇವಲ ಯೆಹೂದ್ಯರಿಗೆ ಸಿಮೀತವಾದವುಗಳಲ್ಲ, ಆದರೆ ಆ ಪಾಪಗಳಿಂದ ಯೆಹೂದ್ಯರು ಗುರುತಿಸಲ್ಪಟ್ಟಿದ್ದರು. ಯೆಹೂದ್ಯರು ಸುಲಭವಾಗಿ ಮತ್ತೊಬ್ಬರ ಮೇಲೆ ತೀರ್ಪುಮಾಡುತ್ತಿದ್ದರು (2:1, 3; ಮತ್ತಾಯ 7:1, 2). ತಾವು ಸ್ವತಃ ಮಾಡಿದ ಪಾಪಗಳನ್ನು ಮತ್ತೊಬ್ಬರು ಮಾಡಿದಾಗ ಅದನ್ನು ಇವರು ಖಂಡಿಸುತ್ತಿದ್ದರು (2:1, 3; ಮತ್ತಾಯ 7:3-5). ತಾವು ಅಬ್ರಹಾಮನ ಸಂತಿಯವರಾದ್ದರಿಂದ ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳಬಹುದೆಂದು ಭಾವಿಸಿಕೊಂಡಿದ್ದರು (2:3; ಮತ್ತಾಯ 3:9). ಅವರ ಮೇಲೆ ಕಠಿಣ ಹಾಗೂ ಪಶ್ಚಾತ್ತಾಪವಿಲ್ಲದ ಹೃದಯವುಳ್ಳವರೆಂಬ ಆರೋಪವಿತ್ತು (2:5; ಮಾರ್ಕ 3:5).

ಅಧ್ಯಾಯ 2ರ ಆರಂಭದಿಂದಲೂ ಪೌಲನ ಮನಸ್ಸಿನಲ್ಲಿ ಯೆಹೂದ್ಯರು ಇದ್ದಿರುವದಾದರೆ, ಆತನು ಅವರನ್ನು ಗುರುತಿಸುವದಕ್ಕೆ 17ನೇ ವಚನದ ವರೆಗೆ ಏಕೆ ಕಾಯಬೇಕಾಗಿತ್ತು? ಬಹುಶಃ ಅಪೊಸ್ತಲನು ಅವರ ವಿಷಯದಲ್ಲಿ ಅರಸನಾದ ದಾವೀದನ ವಿಷಯವಾಗಿ ನಾತಾನನು ಅನುಸರಿಸಿದ ದಾರಿಯನ್ನೇ ಪಾಲಿಸುವಂತೆ ತೋರುತ್ತದೆ. ನಾತಾನನು ಮೊದಲು ದಾವೀದನಲ್ಲಿ ನ್ಯಾಯದ ಭಾವನೆಯನ್ನು ಬಡಿದೆಬ್ಬಿಸಿದನು ಮತ್ತು ನಂತರ, "ನೀನೇ ಆ ಮನುಷ್ಯನು!" ಎಂದು ಹೇಳಿದನು (2 ಸಮುವೇಲ 12:1-7).

ನಂತರದಲ್ಲಿ ಹೇಳಿಕೆಗಳನ್ನು ನೋಡುವಾಗ, ಇಡೀ ಅಧ್ಯಾಯದಲ್ಲಿ ಪೌಲನು ಯೆಹೂದ್ಯರನ್ನೇ ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಿದ್ದಾನೆಂದು ಅನ್ನಿಸುತ್ತದೆ.

# ಯೆಹೂದ್ಯರು ಬಯಲಿಗೆಳೆಯಲ್ಪಟ್ಟಿದ್ದು (2:1-11)

1ಆದದರಿಂದ ಎಲೈ ಮನುಷ್ಯನೇ, ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು
ಯಾವನಾದರೂ ಸರಿಯೇ, ಉತ್ತರ ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ. ಹೇಗೆಂದರೆ
ಮತ್ತೊಬ್ಬರಲ್ಲಿ ದೋಷವೆಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು
ತೀರ್ಪುಮಾಡಿಕೊಂಡ ಹಾಗಾಯಿತು. ಮತ್ತೊಬ್ಬರಲ್ಲಿ ದೋಷವೆಣಿಸುವ ನೀನು ಆ
ದೋಷಗಳನ್ನೇ ನಡಿಸುತ್ತೀಯಲ್ಲಾ. 2ಆದರೆ ಅಂಥವುಗಳನ್ನು ನಡೆಸುವವರ ವಿಷಯದಲ್ಲಿ
ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು. 3ಎಲೈ
ಮನುಷ್ಯನೇ, ಅಂಥವುಗಳನ್ನು ನಡಿಸುವವರಲ್ಲಿ ದೋಷವೆಣಿಸಿ ಅವುಗಳನ್ನೇ
ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು
ಯೋಚಿಸುತ್ತೀಯಾ? 4ಆತನ ಅಪಾರವಾದ ದಯಾ ಸಹನ ದೀರ್ಘಶಾಂತಿಗಳನ್ನು
ಅಸಡ್ಡೆಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು
ನಿನ್ನನ್ನು ಪ್ರೇರಿಸುತ್ತದೆಂಬುದು ನಿನಗೆ ಗೊತ್ತಿಲ್ಲವೇ? 5ನೀನು ನಿನ್ನ ಮೊಂಡತನವನ್ನೂ
ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ
ಕೋಪವನ್ನು ಕೂಡಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪೂ
ಪ್ರಕಟವಾಗುವ ದಿವಸ ಬರುತ್ತದಷ್ಟೆ. 6ಆತನು ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ
ಪ್ರತಿಫಲವನ್ನು ಕೊಡುವನು. 7ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು
ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ
ನಿತ್ಯಜೀವವನ್ನು ಕೊಡುವನು. 8ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ
ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ, ರೌದ್ರಗಳು ಬರುವವು. 9ಕೆಟ್ಟದ್ದನ್ನು
ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು-ಯೆಹೂದ್ಯರಿಗೆ
ಮೊದಲು, ಅನಂತರ ಗ್ರೀಕರಿಗೆ ಸಹ. 10ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ
ಪ್ರಭಾವವೂ ಮಾನವೂ ಮನಶ್ಯಾಂತಿಯೂ ಉಂಟಾಗುವವು-ಯೆಹೂದ್ಯರಿಗೆ ಮೊದಲು,
ಅನಂತರ ಗ್ರೀಕರಿಗೆ ಸಹ. 11ದೇವರಿಗೆ ಪಕ್ಷಪಾತವಿಲ್ಲ.

**ವಚನ 1.** ಅಧ್ಯಾಯ 2ರ ಆರಂಭಿದ ಮಾತು (**ಆದದರಿಂದ**) ಎಂಬದು ಎರಡೂ ಅಧ್ಯಾಯಗಳು ಒಂದಕ್ಕೊಂದು ಜೋಡಣೆಯಾಗಿವೆ ಎಂದು ತೋರಿಸುತ್ತದೆ. 1ನೇ ಅಧ್ಯಾಯವು ಅನ್ಯಜನರ ಪಾಪದ ಪರಾಕಾಷ್ಠೆಯನ್ನು ಎತ್ತಿತೋರಿಸುವ ಮೂಲಕ ಅಂತ್ಯವಾಯಿತು: ಅವರು ಪಾಪಕೃತ್ಯಗಳನ್ನು ನಡಿಸುವವರಿಗೆ "ಹೃದಯಪೂರ್ವಕವಾದ ಅನುಮೋದನೆ" ನೀಡಿದರು (1:32). ಬಹಳಷ್ಟು ಯೆಹೂದ್ಯರ ವಿಷಯದಲ್ಲಿ ಇದು ಸತ್ಯವಾಗಿರಲಿಕ್ಕೆ ಸಾಧ್ಯವಿರಲಿಲ್ಲ. ಅವರು ಎಲ್ಲರ ಮುಂದೆ ಅನೈತಿಕತೆಗೆ ಚಪ್ಪಾಳೆತಟ್ಟಿ ಹುರದುಂಬಿಸುವದಕ್ಕಿಂತ ಅದನ್ನು ಅಪಹಾಸ್ಯಮಾಡುತ್ತಿದ್ದರೆನೋ ಎಂದನ್ನಿಸುತ್ತದೆ. ಹೇಗೂ, ಹೀಗೆಂದ ಮಾತ್ರಕ್ಕೆ ಅವರು ದೋಷವಿಲ್ಲದವರಾಗಲಿಲ್ಲ. ಪೌಲನು ಅನ್ಯಜನರಿಗೆ ಅವರು "ಉತ್ತರವಿಲ್ಲದವರಾಗಿದ್ದಾರೆ" ಎಂದು ಹೇಳಿದ್ದನು (1:20); ಈಗ, ಆತನು ಯೆಹೂದ್ಯರಿಗೆ ಸಹ ಅದನ್ನೇ ಹೇಳುತ್ತಾನೆ, ಉತ್ತರ **ಹೇಳುವದಕ್ಕೆ ನಿನಗೆ ಮಾರ್ಗವಿಲ್ಲ.** ಎರಡೂ ಗುಂಪುಗಳು ಸಹ ಒಂದೇ ರೀತಿಯ ಆತ್ಮೀಕ ದಾರಿಯಲ್ಲಿ ಸಾಗಿದ್ದವು. ಇಬ್ಬರಿಗೂ

ದೇವರಿಂದ ಒಂದು ಪ್ರಕಟಣೆ ದೊರಕಿತ್ತು (1:18-20; 2:15, 17, 20). ಇಬ್ಬರೂ ದೇವರ ಚಿತ್ತಕ್ಕೆ ಅವಿಧೇಯರಾಗಿದ್ದರು (1:21-31; 2:8, 23). ಅವಿಧೇಯತೆಗೆ ದಂಡನೆ ಸಿಕ್ಕುತ್ತದೆಂದು ಇಬ್ಬರಿಗೂ ಗೊತ್ತಿತ್ತು (1:32; 2:2). ಆದುದರಿಂದ, ಇಬ್ಬರಿಗೂ ಉತ್ತರ ಹೇಳುವದಕ್ಕೆ ಮಾರ್ಗವಿರಲಿಲ್ಲ (1:20; 2:1).

ಪೌಲನು "ತೀವ್ರ ವಿಮರ್ಶೆ" ("diatribe") ಎಂಬ ಪ್ರಾಚೀನ ಸಾಹಿತ್ಯ ರೂಪವನ್ನು ಉಪಯೋಗಿಸಲಾರಂಭಿಸಿದನು, ಅದು ಹೇಗೆಂದರೆ ಪ್ರಸಂಗಿ ಅಥವಾ ಲೇಖಕನು ತನ್ನ ಹಾಗೂ ಒಂದು ಕಾಲ್ಪನಿಕ ಎದುರಾಳಿಯ ನಡುವಿನ ಒಂದು "ಚರ್ಚೆ" ಯನ್ನು "ಆಲಿಸುವಂತೆ" ಮಾಡುವ ಮೂಲಕ ತನ್ನ ಪ್ರೇಕ್ಷಕರಿಗೆ ಉಪದೇಶ ಮಾಡುವ ವಿಧಾನವಾಗಿತ್ತು. **ಯಾವನಾದರೂ ಸರಿಯೇ** ಎಂಬ ಪದಗುಚ್ಛವು ಅಕ್ಷರಶಃ "ಎಲೈ ಮನುಷ್ಯನೇ, ಯಾವನಾದರೂ" ಎಂದು ಅನುವಾದಿಸಲಾಗಿದೆ (ನೋಡಿರಿ KJV). 3ನೇ ವಚನದಲ್ಲಿ ಸಹ ಸಂಬೋಧಿಸಲ್ಪಟ್ಟಿರುವ, ಈ "ಮನುಷ್ಯ," ಎಂಬದು ಪೌಲನ "ಕಾಲ್ಪನಿಕ ಎದುರಾಳಿ" ಆಗಿರುತ್ತಾನೆ.

ಯೆಹೂದ್ಯರ ಬಲಹೀನತೆಗಳಲ್ಲೊಂದೆಂದರೆ ಕಠೋರವಾಗಿ ಮತ್ತೊಬ್ಬರಿಗೆ ತೀರ್ಪುಮಾಡುವ ಮನೋವೃತ್ತಿ (ನೋಡಿರಿ ಮತ್ತಾಯ 7:1-5). ಮತ್ತೊಬ್ಬರಲ್ಲಿ ದೋಷವಣಿಸುವ ಪ್ರತಿಯೊಬ್ಬನು ತನ್ನನ್ನೇ ದೋಷಿಯೆಂದು ತೀರ್ಪು ಮಾಡಿಕೊಂಡ **ಹಾಗಾಯಿತು** ಎಂದು ಪೌಲನು ಹೇಳಿದನು. "ದೋಷವಣಿಸುವವನು" ಎಂಬ ಅನುವಾದಿತ ಪದಗಳು (κρίνω, *krinō*) 1ನೇ ವಚನದಲ್ಲಿ ನಾಲ್ಕು ಸಾರಿ ಉಪಯೋಗಿಸಲ್ಪಟ್ಟಿವೆ. ಅ ಪದದ ಪ್ರಾಥಮಿಕ ಅರ್ಥವು "ಒಂದು ತೀರ್ಮಾನ ಅಥವಾ ತೀರ್ಪು ಮಾಡು." *Krinō* ಯಾವಾಗಲೂ ಕೆಟ್ಟ ಅರ್ಥದಲ್ಲಿ ಉಪಯೋಗಿಸಲ್ಪಡುವದಿಲ್ಲ (ನೋಡಿರಿ ಯೋಹಾನ 7:24). ನಾವು ಜೀವನದಲ್ಲಿ ಹಾದು ಹೋಗುವಾಗ, ತೀರ್ಮಾನ ಹಾಗೂ ತೀರ್ಪುಗಳನ್ನು ಮಾಡಿಕೊಳ್ಳುವದು ಅವಶ್ಯಕವಾಗಿರುತ್ತದೆ. (ರೋಮಾ 14:5 ರಲ್ಲಿ ಅನುವಾದಿಸಲ್ಪಟ್ಟ "ಎಣಿಸುತ್ತಾನೆ" ಎಂಬದು *krinō* ಆಗಿರುತ್ತದೆ.) ಹೇಗೂ, *ಕೆಲವು* ರೀತಿಯ ತೀರ್ಪುಮಾಡುವಿಕೆಗಳು ತಪ್ಪು. ಈ ವಿಷಯದಲ್ಲಿ, ಪೌಲನು ಇಲ್ಲಿ *ಹೊಂದಾಣಿಕೆಯೇ ಇಲ್ಲದ* ತೀರ್ಪುಮಾಡುವಿಕೆಯನ್ನು ಖಂಡಿಸುತ್ತಿದ್ದಾನೆ. ಆತನು ಹೇಳಿದ್ದೇನೆಂದರೆ, **ಮತ್ತೊಬ್ಬರಲ್ಲಿ ದೋಷವಣಿಸುವದರಿಂದ ನಿನ್ನನ್ನು ನೀನೇ ದೋಷಿಯೆಂದು ತೀರ್ಪುಮಾಡಿಕೊಂಡ ಹಾಗಾಯಿತು.** "ದೋಷಿಯೆಂದೆಣಿಸು" ಎಂಬದಕ್ಕೆ ಇರುವ ಪದವು κατακρίνω (*katakrinō*) ಎಂಬದರಿಂದ ಬಂದಿದೆ, "*krinō*" ಎಂಬದರ "ಒಂದು ಬಲಗೊಂಡ ಪದವಾಗಿದೆ."[1]

ಪೌಲನು, **ಮತ್ತೊಬ್ಬರಲ್ಲಿ ದೋಷವಣಿಸುವ ನೀನು ಆ ದೋಷಗಳನ್ನೇ ನಡಿಸುತ್ತೀಯಲ್ಲಾ** ಎಂದು ಹೇಳಿದಾಗ, ಅಧ್ಯಾಯ 1ರಲ್ಲಿ ಪಟ್ಟಿಮಾಡಲಾಗಿರುವ ನಿಖರವಾದ ಪಾಪಗಳನ್ನೇ ಯೆಹೂದ್ಯರು ಮಾಡಿದ್ದಾರೆಂಬ ಅರ್ಥದಲ್ಲಿ ಆತನು ಹೇಳಲಿಲ್ಲ. ಹೇಗೂ, ಅವರು ಅದೇ ರೀತಿಯ ಪಾಪಗಳನ್ನು ಮಾಡಿದ ದೋಷಕ್ಕೊಳಗಾಗಿದ್ದರು. ಒಬ್ಬ ಕೊಳಲನ್ನು ನುಡಿಸುವವನು ಮತ್ತೊಬ್ಬನು ನುಡಿಸಿದ ಅದೇ ರೀತಿಯ ಸಂಯೋಜನೆಗಳನ್ನು ನುಡಿಸದೇ ಇರಬಹುದು ಆದರೆ ಆತನು ಒಂದೇ ಸ್ವರಚಿಹ್ನೆಗಳನ್ನಂತೂ ನುಡಿಸಿರುತ್ತಾನೆ. ಪೌಲನು ಅನ್ಯಜನರ ಮೇಲೆ ವಿಗ್ರಹಾರಾಧನೆ (1:21-23, 25), ಅನೈತಿಕತೆ (1:24, 26, 27),

ಮತ್ತು ಅಧರ್ಮತನ (1:28-32) ಮಾಡಿದ ದೋಷ ಹೊರಿಸಿದ್ದನು. ಈ ಅಧ್ಯಾಯದ ನಂತರ ಭಾಗದಲ್ಲಿ, ಇದೇ ಮೂರು ವಿಭಾಗಗಳನ್ನು ಉಪಯೋಗಿಸಿ ಯೆಹೂದ್ಯರು ಪಾಪಮಾಡಿದ್ದಾರೆಂದು ಹೇಳುತ್ತಾನೆ (2:21, 22).

**ವಚನ 2.** ಈ ಮುಂಚೆ ಪೌಲನು, ಅನ್ಯಜನರಿಗೆ "ಇಂಥವುಗಳನ್ನು ನಡಿಸುವವರು ಮರಣಕ್ಕೆ ಪಾತ್ರರಾಗಿದ್ದಾರೆಂಬ ದೇವವಿಧಿಯು ಅವರಿಗೆ ತಿಳಿದಿದ್ದರು" ಎಂದು ಹೇಳಿದನು (1:32). ಇಲ್ಲಿ ಆತನು ಹೇಳಿದ್ದೇನೆಂದರೆ, **ಅಂಥವುಗಳನ್ನು ನಡಿಸುವವರ ವಿಷಯದಲ್ಲಿ ದೇವರು ಮಾಡುವ ತೀರ್ಪು ಸತ್ಯಕ್ಕನುಸಾರವಾಗಿಯೇ ಇರುವದೆಂದು ಬಲ್ಲೆವು** (ಯೆಹೂದ್ಯರು). ಪೌಲನು ಇಲ್ಲಿ ಎಲ್ಲರೂ ಅಲ್ಲದಿದ್ದರೂ ತನ್ನ ಬಹಳಷ್ಟು ವಾಚಕರು ಅವನೊಂದಿಗೆ ಒಪ್ಪುವರೆಂದು ಊಹಿಸಿಕೊಂಡು "ಬಲ್ಲೆವು" ಎಂಬ ಪದವನ್ನು ಬಳಸುತ್ತಾನೆ. "ಸರಿಯಾಗಿಯೇ ಇದೆ" ಎಂಬದರ ಬದಲಾಗಿ ಇಲ್ಲಿ ಗ್ರೀಕ್.ನ ಮೂಲ ವಾಕ್ಯದ (κατά ἀλήθειαν, *kata alētheian*) ಅಕ್ಷರಶಃ ಅರ್ಥವು "ಸತ್ಯಕ್ಕನುಸಾರವಾಗಿಯೇ" ಎಂದಿರುತ್ತದೆ) ನೋಡಿರಿ KJV). ದೇವರ ನ್ಯಾಯತೀರ್ಪು ನ್ಯಾಯವಾಗಿಯೇ ಇರುವದೆಂಬದನ್ನು ಈ ಪದವು ಬಹುಮಟ್ಟಿಗೆ ಸೂಚಿಸುವದಾಗಿದೆ. ಯೆಹೂದ್ಯರು ಜನಾಂಗಗಳ ಅನುಸಾರವಾಗಿ ತೀರ್ಪು ಮಾಡುತ್ತಿದ್ದರು, ಆದರೆ ದೇವರು ಸತ್ಯಕ್ಕನುಸಾರವಾಗಿ ತೀರ್ಪು ಮಾಡುವನು. ಆತನು ನ್ಯಾಯೋಚಿತವಾಗಿರುವನು; ಆತನು ನಿಷ್ಪಕ್ಷಪಾತಿಯಾಗಿರುವನು. ನಾವು ಒಂದು ನ್ಯಾಯೋಚಿತವಾದ ವಿಚಾರಣೆಯ ಬಗ್ಗೆ ನಿಶ್ಚಯತೆಯಿಂದಿರಬಹುದು ಎಂದು D. Stuart Briscoe ಜ್ಞಾಪಿಸುತ್ತಾನೆ:

> ದೇವರ ನ್ಯಾಯತೀರ್ಪು ಸತ್ಯಕ್ಕೆ ಸಂಬಂಧಿಸಿರುತ್ತದೆಂಬುದರ ಮೊದಲ ಅರ್ಥವು ಏನೆಂದರೆ, ದೇವರು ಸ್ವತಃ ಸತ್ಯವಾಗಿದ್ದಾನೆ, ಮತ್ತು ಈ ಕಾರಣದಿಂದ ಆತನು ಸಂಪೂರ್ಣವಾಗಿ ಪಕ್ಷಪಾತವಿಲ್ಲದವನಾಗಿರುವನು, ಮತ್ತು ಎರಡನೆಯದಾಗಿ, ಸಾಕ್ಷ್ಯಾಧಾರವು ನಿಜವಾಗಿರುವದು, ಆದುದರಿಂದ ತಪ್ಪಾದ ವಿಚಾರಣೆ ನಡೆಯುವದಕ್ಕೆ ಆಸ್ಪದವಿಲ್ಲ.
>
> . . . [ಮನುಷ್ಯರ ನ್ಯಾಯಲಯಗಳಂತಲ್ಲದೆ] ದೇವರ ನ್ಯಾಯಲಯದಲ್ಲಿ ಯಾವದೇ ಅಪಾರ್ಥಗಳು, ನ್ಯಾಯದ ದುರುಪಯೋಗ ಇತ್ಯಾದಿಗೆ ಅವಕಾಶವಿರುವದಿಲ್ಲ, . . . ಮತ್ತು ತಪ್ಪುಗಳಿಗೆ ಅವಕಾಶವಿಲ್ಲ-ಎಲ್ಲವೂ ಸತ್ಯಕ್ಕೆ ಅನುಸಾರವಾಗಿಯೇ ನಡೆಯುವದು.[2]

**ವಚನ 3.** ಪೌಲನು ಮುಂದುವರೆಯುತ್ತಾನೆ, **ಎಲೈ ಮನುಷ್ಯನೇ, ಅಂಥವುಗಳನ್ನು ಮಾಡುವವರಲ್ಲಿ ದೋಷವೆಣಿಸಿ ಅವುಗಳನ್ನೇ ಮಾಡುತ್ತಿರುವ ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ?** "ಮನುಷ್ಯನೇ" ಎಂಬ ಅನುವಾದಿತ ಪದವು (ἄνθρωος, *anthrōpos*) ಎಂಬುದು "ಸಾಮಾನ್ಯವಾಗಿ 'ಒಬ್ಬ ಮಾನವ ಜೀವಿಯನ್ನು'" ಸೂಚಿಸಿ ಉಪಯೋಗಿಸಲಾಗಿದೆ.[3] CJB ಯಲ್ಲಿ "ಒಬ್ಬ ಮನುಷ್ಯ ಮಾತ್ರದವನು" ಎಂದಿದೆ; NIRVಯಲ್ಲಿ "ಕೇವಲ ಮನುಷ್ಯ ಜೀವಿ" ಎಂದಿದೆ. ಪೌಲನು ಇಲ್ಲಿ ಮಾನವನ ದೋಷಭರಿತ ತೀರ್ಪುಮಾಡುವಿಕೆಯು ದೇವರ ದೋಷಾತೀತ ತೀರ್ಪುಮಾಡುವಿಕೆಗೆ ತದ್ವಿರುದ್ಧವಾಗಿದೆ ಎಂಬದನ್ನು ತೋರಿಸಿಕೊಡುತ್ತಿದ್ದಾನೆ. ಇಲ್ಲಿ ಆತನು ಇದನ್ನೇ ಮನಸ್ಸಿನಲ್ಲಿಟ್ಟುಕೊಂಡು ಹೇಳಿದನೋ ಇಲ್ಲವೋ, ಆದರೆ ಎದುರಾದ

ಪ್ರಶ್ನೆಗೆ ಅಪೊಸ್ತಲನು ನೀಡಿದ ಉತ್ತರವು ಸ್ಪಷ್ಟವಾಗಿರುತ್ತದೆ: ದೇವರ ನ್ಯಾಯತೀರ್ಪಿನಿಂದ ಒಬ್ಬನೂ ತಪ್ಪಿಸಿಕೊಳ್ಳಲಾರನು!

ಅನೇಕ ಯೆಹೂದ್ಯರು "ತಾವು ದೇವರಿಂದ ಆರಿಸಿಕೊಳ್ಳಲ್ಪಟ್ಟ ಜನಾಂಗ" ವಾದ್ದರಿಂದ "ದೇವರ ನ್ಯಾಯತೀರ್ಪಿನಿಂದ" ತಪ್ಪಿಸಿಕೊಳ್ಳುವರೆಂದು ಯೋಚಿಸಿಕೊಂಡ ದ್ದಂತೂ ನಿಜವಾಗಿತ್ತು. ಅವರು ಭಾವಿಸಿಕೊಂಡದ್ದೇನೆಂದರೆ "ದೇವರು ಅನ್ಯಜನರ ನ್ಯಾಯಾಧಿಪತಿ, ಆದರೆ ಆತನು ಯೆಹೂದ್ಯರಿಗೆ ವಿಶೇಷ ರಕ್ಷಣೆಯಾಗಿದ್ದಾನೆ."[4] ಯೆಹೂದಿ ನಾಯಕರು ಹೇಳುತ್ತಿದ್ದರು, "ಯೆಹೋವನು ನಮ್ಮ ಮಧ್ಯದಲ್ಲಿ ಇದ್ದಾನಲ್ಲಾ, ನಮಗೆ ಯಾವ ಕೇಡೂ ಸಂಭವಿಸುವದಿಲ್ಲಾ ಅಂದುಕೊಳ್ಳುತ್ತಾರೆ" (ಮೀಕ 3:11). ಸ್ನಾನಿಕನಾದ ಯೋಹಾನನು ದೇವರ ನ್ಯಾಯತೀರ್ಪಿನ ಬಗ್ಗೆ ಮಾತಾಡುತ್ತಾ ತನ್ನ ಪ್ರೇಕ್ಷಕರಿಗೆ "ಅಬ್ರಹಾಮನು ನಮಗೆ ತಂದೆಯಾಗಿದ್ದಾನೆ ಎಂದು ನಿಮ್ಮ ನಿಮ್ಮೊಳಗೆ ಅಂದು ಕೊಳ್ಳಬೇಡಿರಿ" ಎಂದು ಬುದ್ಧಿ ಹೇಳಿದನು (ಮತ್ತಾಯ 3:9). ಕೆಲವು ಯೆಹೂದ್ಯರ ಮನೋಭಾವ ಹೇಗಿತ್ತೆಂಬದಕ್ಕೆ ಒಂದು ಉದಾಹರಣೆ ಇಲ್ಲಿದೆ, ಇದು ಪ್ರಾಚೀನ, ಪ್ರೇರಣೆಗೊಳ್ಳದ ಯೆಹೂದಿ ಮೂಲದ ಬರಹಗಳಲ್ಲಿ ವ್ಯಕ್ತಗೊಳಿಸಲ್ಪಟ್ಟಿದೆ:

> "ಭೂಮಿಯ ಎಲ್ಲಾ ದೇಶಗಳೊಳಗಿಂದ ದೇವರು ಇಸ್ರಾಯೇಲನ್ನು ಮಾತ್ರವೇ ಪ್ರೀತಿಸುತ್ತಾನೆ."[5]
>
> "ದೇವರು ಅನ್ಯಜನರನ್ನು ಒಂದು ಅಳತೆಯಿಂದಲೂ ಯೆಹೂದ್ಯರನ್ನು ಮತ್ತೊಂದು ಅಳತೆಯಿಂದಲೂ ನ್ಯಾಯ ವಿಚಾರಿಸುವನು."[6]
>
> "ಬರಲಿರುವ ಲೋಕದಲ್ಲಿ ಎಲ್ಲಾ ಇಸ್ರಾಯೇಲರಿಗೆ ಪಾತ್ರವಿರುವದು."[7]
>
> "ಅಬ್ರಹಾಮನು ನರಕದ ದ್ವಾರದ ಮುಂದೆ ಕೂತುಕೊಳ್ಳುವನು ಮತ್ತು ಸುನ್ನತಿ ಮಾಡಲ್ಪಟ್ಟ ಯಾವ ಇಸ್ರಾಯೇಲನನ್ನೂ ಒಳಗೆ ಹೋಗಲು ಬಿಡುವದಿಲ್ಲ."[8]

ಪೌಲನ ಪ್ರಕಾರವಾಗಿ, ಅಂಥ ತರ್ಕವು ಸುಳ್ಳು ಆಗಿತ್ತು. ಕೇವಲ ಅವರು ಯೆಹೂದ್ಯರೆಂಬ ಒಂದೇ ಕಾರಣಕ್ಕೆ "ದೇವರ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವರು" ಎಂದಾಗಿರಲಿಲ್ಲ. ಅವರು ನೈತಿಕವಾಗಿ ಅನ್ಯಜನರಿಗಿಂತ ಉನ್ನತದಲ್ಲಿದ್ದಿರಬಹುದು; ಹಾಗಿದ್ದರೂ, ಅವರು ಈಗಲೂ ದೇವರ ಕೃಪೆಯ ಅಗತ್ಯತೆಯಿರುವಂಥ ಪಾಪಿಗಳಾಗಿದ್ದರು.

**ವಚನ 4.** ಪೌಲನು ತನ್ನ ದೋಷಾರೋಪಣೆಯನ್ನು ಮುಂದುವರೆಸುತ್ತಾನೆ: ಆತನ ಅಪಾರವಾದ ದಯಾ ಸಹನ ದೀರ್ಘ ಶಾಂತಿಗಳನ್ನು ಅಸಡ್ಡೆಮಾಡುತ್ತೀಯಾ? ಮನಸ್ಸನ್ನು ಬೇರೆಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸುತ್ತದೆಂಬದು ನಿನಗೆ ಗೊತ್ತಿಲ್ಲವೇ? ಆತನು ಯೆಹೂದ್ಯರಿಗೆ ಅವರ ಕಡೆಗೆ ಇರುವ ದೇವರ "ದಯೆಯ" (χρηστότης, *chrēstotēs*) "ಅಪಾರತೆ" (πλούτος, *ploutos*)ಯನ್ನು ಜ್ಞಾಪಿಸುತ್ತಾನೆ. ದೇವರು ತಾನು ಯೆಹೂದ್ಯರೊಂದಿಗೆ ಮಾಡಿದ ಒಡಂಬಡಿಕೆಯಲ್ಲಿನ ತನ್ನ ಪಾತ್ರವನ್ನು ನೆರವೇರಿಸುವದಕ್ಕೋಸ್ಕರ ಆತನು ಅವರ ಮೇಲೆ ಆತ್ಮೀಕ ಹಾಗೂ ಭೌತಿಕ

ಆಶೀರ್ವಾದಗಳನ್ನು ಸುರಿಸಿದನು. ಅದೇ ವೇಳೆಯಲ್ಲಿ, ಅವರು ಒಡಂಬಡಿಕೆಯಲ್ಲಿನ ತಮ್ಮ ಭಾಗವನ್ನು ನೆರವೇರಿಸುವದಕ್ಕೆ ವಿಫಲರಾದಾಗ ಅವರ ಕಡೆಗೆ ಆತನು ಸಹನೆ (ἀνοχή, *anochē*) ಮತ್ತು ದೀರ್ಘಶಾಂತಿ (μακροθυμία, *makrothumia*) ತೋರಿಸಿದನು.

ಯೆಹೂದ್ಯರ ಪಾಪಗಳಿಗಾಗಿ ಅವರನ್ನು ಶೀಘ್ರವಾಗಿ ಆಗಲೇ ಶಿಕ್ಷಿಸುವದರ ಬದಲಾಗಿ, ದೇವರು ಅವರಿಗೆ ಕಾಲಾವಕಾಶವನ್ನು ಕೊಟ್ಟು ತನ್ನ ದಯೆಯು ಅವರನ್ನು "ಪಶ್ಚಾತ್ತಾಪ" ಕ್ಕೆ (μετάνοια, *metanoia*) ನಡಿಸುವದೆನೋ ಎಂದು ಎದುರು ನೋಡಿದನು. ದುಃಖಕರವೆಂದರೆ, ಅವರು ಆತನ ಒಡಂಬಡಿಕೆಯ ಜನರಾದ್ದರಿಂದ ಅವರ ಪಾಪಗಳನ್ನು ಆತನು ಗಣನೆಗೆ ತೆಗೆದುಕೊಳ್ಳಲಿಲ್ಲವೆಂದು ಭಾವಿಸಿಕೊಂಡು ದೇವರ ದಯೆಯನ್ನು ಕಡೆಗಣಿಸಿದ್ದರು. ಪಶ್ಚಾತ್ತಾಪಪಡುವದರ ಬದಲಾಗಿ, ಅವರು ಹೆಚ್ಚೆಚ್ಚು ಬಂಡಾಯಗಾರರಾಗಿದ್ದರು.

**ವಚನ 5.** ಯೆಹೂದ್ಯರು ದೇವರ ದಯೆಯ ಬಗ್ಗೆ ಭಾವನೆಗಳನ್ನು ಮಾಡಿಕೊಂಡಾಗ ಅದರ ಪರಿಣಾಮವೇನಾಗಿತ್ತು? ಪೌಲನು ಅವರಿಗೆ ಹೇಳಿದನು, ನೀನು ನಿನ್ನ ಮೊಂಡತನವನ್ನೂ ಪಶ್ಚಾತ್ತಾಪವಿಲ್ಲದ ಮನಸ್ಸನ್ನೂ ಅನುಸರಿಸುವದರಿಂದ ನಿನಗೋಸ್ಕರ ದೇವರ ಕೋಪವನ್ನು ಕೂಡಿಸಿಟ್ಟುಕೊಳ್ಳುತ್ತಾ ಇದ್ದೀ. ದೇವರ ಕೋಪವೂ ನ್ಯಾಯವಾದ ತೀರ್ಪೂ ಪ್ರಕಟವಾಗುವ ದಿವಸ ಬರುತ್ತದಷ್ಟೇ. "ಮೊಂಡುತನ" (σκληρότης, *sklērotēs*) ಎಂಬ ಪದವು ಹೆಚ್ಚು ಅಕ್ಷರಶಃವಾಗಿ "ಕಾಠಿಣ್ಯತೆ" ಎಂದು ಆನುವಾದಿಸಲ್ಪಟ್ಟಿದೆ (ನೋಡಿರಿ KJV). John MacArthur, Jr., ಈ ವಿಷಯದೆಡೆಗೆ ಗಮನವನ್ನು ಸೆಳೆಯುತ್ತಾನೆ, "ಈ ಪದದಿಂದಲೇ ನಮಗೆ ವೈದ್ಯಕೀಯ ಪದವಾದ *sclerosis* (*ಸ್ಕ್ಲೆರೊಸಿಸ್*) ಎಂಬ ಪದ ಸಿಕ್ಕುತ್ತದೆ. Arteriosclerosis (ಆರ್ಟೆರಿಯೊಸ್ಕ್ಲೆರೊಸಿಸ್) ಎಂಬದು ರಕ್ತನಾಳಗಳು ಕಠಿಣ (ಗಟ್ಟಿ) ಗೊಳ್ಳುವದನ್ನು ಸೂಚಿಸುತ್ತದೆ."[9] "ನ್ಯಾಯವಾದ ತೀರ್ಪು" ಎಂಬದು ಒಂದು ಅಸಹಜವಾದ ಪದದಿಂದ (δικαιοκρισία, *dikaiokrisia*) ಅನುವಾದಿಸಲ್ಪಟ್ಟಿದೆ, ಅದು "ನೀತಿ" ಎಂಬುದ ಕ್ಕಿರುವ ಗ್ರೀಕ್ ಪದ ಮತ್ತು "ನ್ಯಾಯತೀರ್ಪು" ಎಂಬ ಎರಡು ಪದಗಳನ್ನು ವಿಲೀನಗೊಳಿಸುತ್ತದೆ.

ಮೊಂಡುಮನಸ್ಸು ಮತ್ತು ಪಶ್ಚಾತ್ತಾಪವಿಲ್ಲದ ಮನಸ್ಸಿನಿಂದಾಗಿ ಏನು ಕಾದಿತ್ತು? ಪೌಲನು ಗಮನಾರ್ಹವಾದ ಸಾಂಕೇತಿಕ ಭಾಷೆಯನ್ನು ಉಪಯೋಗಿಸಿ ಅವರು "ಕೋಪದ ದಿನಕ್ಕಾಗಿ" "ಕೋಪವನ್ನು ಕೂಡಿಟ್ಟುಕೊಳ್ಳುತ್ತಾ" ಇದ್ದಾರೆ ಎಂದು ಹೇಳುತ್ತಾನೆ. ಅನುವಾದಿಸಲ್ಪಟ್ಟ "ಕೂಡಿಟ್ಟುಕೊಳ್ಳುತ್ತಾ ಇದ್ದೀ" (θησαυρίζω, *thēsaurizō*) ಎಂಬ ಪದವು ಸಾಮಾನ್ಯವಾಗಿ ಬೊಕ್ಕಸಕ್ಕೆ ಸಂಬಂಧಿಸಿದ್ದಾಗಿದೆ (KJV ನೋಡಿರಿ), ಅಂದರೆ, ಭವಿಷ್ಯದ ಅಗತ್ಯತೆಗಳಿಗಾಗಿ ಬೊಕ್ಕಸವನ್ನು ಕೂಡಿಟ್ಟುಕೊಳ್ಳುವದು. ಹೇಗೂ, ಈ ವಿಷಯದಲ್ಲಿ ನೋಡುವದಾದರೆ, ಪಶ್ಚಾತ್ತಾಪವಿಲ್ಲದವರು ಕೋಪದ ದಿನಕ್ಕಾಗಿ ಇನ್ನಷ್ಟು ಹೆಚ್ಚು ಕೋಪವನ್ನು ಕೂಡಿಟ್ಟುಕೊಳ್ಳುತ್ತಿದ್ದಾರೆ.

**ವಚನ 6.** "ದೇವರ ನ್ಯಾಯವಾದ ತೀರ್ಪು" ಕುರಿತು ಮಾತಾಡಿದ ಬಳಿಕ, ಪೌಲನು ಹೇಳಿದ್ದೇನೆಂದರೆ ದೇವರು **ಪ್ರತಿಯೊಬ್ಬನಿಗೆ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವನು.** ಅನುವಾದಿಸಲ್ಪಟ್ಟ "ಕೃತ್ಯಗಳು" ಎಂಬದು "ಕೆಲಸ" (ἔργον, *ergon*) ಎಂಬದರ ಬಹುವಚನವಾಗಿದೆ, ಒಬ್ಬ ವ್ಯಕ್ತಿಯು ಮಾಡುವಂತಹ ಯಾವದೇ ಕೃತ್ಯವನ್ನು

ಸೂಚಿಸುವದಕ್ಕೆ ಉಪಯೋಗಿಸುವ ಸಾಮಾನ್ಯ ಪದವಾಗಿದೆ. ಪೌಲನು ಹಳೆ ಒಡಂಬಡಿಕೆಯಿಂದ, ಬಹುಶಃ ಕೀರ್ತನೆ 62:12ರಿಂದ ಉಲ್ಲೇಖಿಸುತ್ತಿದ್ದಾನೆ. ಜ್ಞಾನೋಕ್ತಿ 24:12 ಸಹ ಅದೇ ಸಂಗತಿಯನ್ನು ತಿಳಿಸುತ್ತದೆ, ಆದರೆ ಪ್ರಶ್ನೆಯ ರೂಪದಲ್ಲಿ ತಿಳಿಸುತ್ತದೆ.

ಈ ವಾಕ್ಯಭಾಗದಲ್ಲಿನ ಅತ್ಯಂಥ ವಿವಾದಾತ್ಮಕ ಭಾಗವೆಂದರೆ ನ್ಯಾಯತೀರ್ಪು ನಮ್ಮ "ಕೃತ್ಯಗಳಿಗೆ" ತಕ್ಕ ಹಾಗಿರುತ್ತದೆಂದು ಪೌಲನು ದೃಢವಾಗಿ ಪ್ರತಿಪಾದಿಸುತ್ತಾನೆ. ಹೇಗೂ, ಬೈಬಲಿನ ಇತರೆ ಸ್ಥಳಗಳಲ್ಲಿ ಕಲಿಸಲ್ಪಡದ ಯಾವದನ್ನೂ ಈ ವಾಕ್ಯಭಾಗದಲ್ಲಿ ಕಲಿಸಲಾಗಿರುವದಿಲ್ಲ (ಉದಾಹರಣೆಗೆ, ನೋಡಿರಿ ಯೆರೆ 32:19; ಹೋಶೆಯ 12:1), ಪೌಲನಿಂದ ಸಹ ಕಲಿಸಲ್ಪಟ್ಟಿರುವದಿಲ್ಲ (ನೋಡಿರಿ 2 ಕೊರಿಂಥ 5:10).

ನಾವು ನಮ್ಮ ಕೃತ್ಯಗಳಿಕೆ ತಕ್ಕಂತೆ ನ್ಯಾಯತೀರಿಸಲ್ಪಡುವೆವು ಎಂಬುದು ಎರಡೂ ಒಡಂಬಡಿಕೆಗಳಲ್ಲಿ ಕಂಡುಬರುವಂಥ ವಿಷಯವಾಗಿರುತ್ತದೆ. ಯೇಸು ಹೊಸ ಒಡಂಬಡಿಕೆಯಲ್ಲಿ ಹೇಳಿದ್ದೇನಂದರೆ, ಆತನು ತಿರಿಗಿ ಬಂದಾಗ "ಪ್ರತಿಯೊಬ್ಬನಿಗೂ ಅವನವನ ಕೆಲಸಗಳಿಗೆ ತಕ್ಕಂತೆ ಪ್ರತಿಫಲ ಕೊಡುವನು" (ಮತ್ತಾಯ 16:27). ಪೌಲನು ಬರೆಯುತ್ತಾನೆ, "ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ ಒಳ್ಳೆಯದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಲೇಬೇಕು" (2 ಕೊರಿಂಥ 5:10). ನ್ಯಾಯತೀರ್ಪಿನ ದೃಶ್ಯವನ್ನು ಬಣ್ಣಿಸುವ ವೇಳೆ, ಯೋಹಾನನು ತಿಳಿಸಿದ್ದೇ ನೆಂದರೆ, "ಆ ಪುಸ್ತಕಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು" (ಪ್ರಕಟಣೆ 20:12). ಹೀಗೊಂದು ಮಾತಿರುತ್ತದೆ, "ಕೃತ್ಯಗಳು ಬೀಜಗಳಿದ್ದಂತೆ: ನೀವು ಅವುಗಳನ್ನು ಈಗ ನೆಡುವಿರಿ ಮತ್ತು ಮುಂದೆ ಫಲವನ್ನು ಕೊಯ್ಯುವಿರಿ."

ವಚನ **7.** ವಚನ 7 ಮತ್ತು 8ರಲ್ಲಿ ಪೌಲನು 2:6 ರಲ್ಲಿನ ಪ್ರಾಥಮಿಕ ನಿಯಮವನ್ನು ವಿವರಿಸುತ್ತಾನೆ. ವಚನ 7ರಲ್ಲಿ ಆತನು ದೇವರು ಸತ್ಕ್ರಿಯೆಗಳುಳ್ಳವರಿಗೆ ನ್ಯಾಯತೀರಿಸುವ ಬಗ್ಗೆ ಮಾತಾಡಿದನು: **ಯಾರು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಬೇಕೆಂದು ಒಳ್ಳೇದನ್ನು ಬೇಸರಗೊಳ್ಳದೆ ಮಾಡುತ್ತಾರೋ ಅವರಿಗೆ** (ದೇವರು) ನಿತ್ಯಜೀವವನ್ನು **ಕೊಡುವನು.**[10] ಇಲ್ಲಿ ಉಲ್ಲೇಖಿಸಲ್ಪಟ್ಟಿರುವಂಥ ಜನರು ಮೂರು ಸಂಗತಿಗಳನ್ನು ಹುಡುಕುತ್ತಾರೆ: "ಪ್ರಭಾವ," (δόξα, *doxa*) "ಮಾನ" (τιμή, *timē*), ಮತ್ತು "ನಿರ್ಲಯತ್ವ" (ἀφθαρσία, *aphtharsia*). ಪೌಲನು ಅಂಥ ಜನರು ವಚನ 8 ರಲ್ಲಿನ ಸ್ವಾರ್ಥಚಿಂತಕ ಜನರಿಗಿಂದ ವಿರುದ್ಧವಾದವರೆಂದು ತಿಳಿಸಿದನಾದ್ದರಿಂದ, ಇಲ್ಲಿ ಆತನ ತಾತ್ಪರ್ಯವು ಇವರು *ವೈಯಕ್ತಿಕ* ಪ್ರಭಾವ ಮತ್ತು ಮಾನಗಳನ್ನು ಹುಡುಕುವವರೆಂದಾಗಿರಲಿಲ್ಲ, ಬದಲಾಗಿ ಅವರು ದೇವರೊಂದಿಗೆ ಒಂದು ವಿಶೇಷ ಸಂಬಂಧವನ್ನು ಹುಡುಕುವವರೆಂದಾಗಿದೆ.[11] ಅವರು ದೇವರ ಪ್ರಭಾವವನ್ನು ("ಮಹಿಮೆ") ನೋಡಲು ಹಂಬಲಿಸುತ್ತಾರೆ; ಅವರು ದೇವರಿಂದ ಮನ್ನಣೆ ("ಮಾನ") ಯನ್ನು ಬಯಸುತ್ತಾರೆ; ಅವರು ದೇವರ ಪ್ರಸನ್ನತೆಯನ್ನು ("ನಿರ್ಲಯತ್ವ"; ನೋಡಿರಿ ಯೋಹಾನ 17:3) ಅಪೇಕ್ಷಿಸುತ್ತಾರೆ. ಅವರಿಗೆ ನಿಜವಾಗಿಯೂ ಪ್ರಾಮುಖ್ಯವಾದದ್ದು ಯಾವದೆಂಬ ಅರಿವು ಇರುತ್ತದೆ.

ಅಂಥ ಜನರು ಕೇವಲ ಸುಮ್ಮನೆ ಒಳ್ಳೇದನ್ನು ಮಾಡುವವರಲ್ಲ; ಅವರು ಒಳ್ಳೆದನ್ನು

*ಮಾಡುವದರಲ್ಲಿ ಬೇಸರಗೊಳ್ಳುವದಿಲ್ಲ.* ಅನುವಾದಿಸಲ್ಪಟ್ಟ "ಬೇಸರಗೊಳ್ಳದೆ" ಎಂಬದು ಒಂದು ಸಂಯುಕ್ತ ಪದದಿಂದ (ὑπομονή, *hupomonē*) ಬಂದದ್ದು, ಅದು "ಅಡಿಯಲ್ಲಿ" (ὑπό, *hupo*) ಎಂಬ ಉಪಸರ್ಗ ಹಾಗೂ "ನೆಲೆಗೊಳ್ಳು" (μένω, *menō*) ಎಂಬದರಿಂದ ಕೂಡಿದೆ.[12] ಇದು ಒತ್ತಡವಿದ್ದಾಗ್ಯೂ ಉಳಿಯುವ ("ದೃಢವಾಗಿ ನಿಲ್ಲುವ") ಸಾಮರ್ಥ್ಯವನ್ನು ಸೂಚಿಸುತ್ತದೆ. ಇದನ್ನು "ಕಠಿಣ ಯುದ್ಧದ ಮಧ್ಯದಲ್ಲಿಯೂ . . . ಬೀಳುವ ಹೊಡೆತಗಳಿಂದ ವಿಚಲಿತನಾಗದೆ ಕಡೇ ತನಕ ಯುದ್ಧವನ್ನು ಮಾಡುವ ಸೈನಿಕನನ್ನು" ಸೂಚಿಸುವದಕ್ಕೆ ಉಪಯೋಗಿಸಬಹುದು.[13]

**ವಚನ 8.** ಪೌಲನು ಮುಂದೆ ಕೆಟ್ಟಕೃತ್ಯಗಳುಳ್ಳವರ ಬಗ್ಗೆ ಮಾತಾಡುತ್ತಾನೆ: **ಯಾರು ಸ್ವೇಚ್ಛೆಯುಳ್ಳವರಾಗಿ ಸತ್ಯವನ್ನು ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೋ ಅವರಿಗೆ ಕೋಪ, ರೌದ್ರಗಳು ಬರುವವು** [ದೇವರು ಬರಮಾಡುವನು]. ಈ ಅವಿಧೇಯರಾದ ವ್ಯಕ್ತಿಗಳನ್ನು ಮೊದಲನೆಯದಾಗಿ "ಸ್ವೇಚ್ಛೆಯುಳ್ಳವರು" ಎಂದು ಬಣ್ಣಿಸಲಾಗಿದೆ. ಈ ಪದಗುಚ್ಛವು ἐριθεία (*eritheia*) ಎಂಬದರಿಂದ ಬಂದಿದೆ, ಇದು "ಲಾಭಕ್ಕೋಸ್ಕರ ತಮ್ಮನ್ನು ತುಚ್ಛಮಟ್ಟಕ್ಕೆ ಇಳಿಸಿಕೊಳ್ಳುವವರನ್ನು ಸೂಚಿಸುತ್ತದೆ. . . ಇಲ್ಲಿ ವಿಚಾರವು "ಸ್ವಾರ್ಥಚಿಂತನೆಯಲ್ಲಿ ನೆಲೆಗೊಳ್ಳುವದು" . . . ದೃಷ್ಟಿಯನ್ನು ಎತ್ತರ ಸಂಗತಿಗಳೆಡೆಗೆ ಸ್ಥಳಾಂತರಗೊಳಿಸಲಾಗದಂಥ ತುಚ್ಛಮನಃಸ್ಥಿತಿ" ಎಂಬದನ್ನು ಸೂಚಿಸುವದಾಗಿದೆ.[14] Aristotleನು ಈ ಪದವನ್ನು "ಸಾರ್ವಜನಿಕರ ಹಿತಕ್ಕೋಸ್ಕರ ವಲ್ಲದೆ ತಮ್ಮ ಸ್ವಾರ್ಥಲಾಭಕ್ಕಾಗಿ ಅಧಿಕಾರದ ಸ್ಥಾನಗಳನ್ನು ಉಪಯೋಗಿಸುತ್ತಿದ್ದ ರಾಜಕೀಯ ವ್ಯಕ್ತಿಗಳನ್ನು ಖಂಡಿಸುವದಕ್ಕೆ" ಉಪಯೋಗಿಸಿದನು.[15] ಈ ರೀತಿಯ ಜನರು ತಮ್ಮ ಉದ್ದೇಶವನ್ನು ನೆರವೇರಿಸಿಕೊಳ್ಳುವದಕ್ಕೆ ಯಾವ ದಾರಿಯನ್ನಾದರೂ ಅನುಸರಿಸು ತ್ತಾರಾದ್ದರಿಂದ, ಈ ಪದವನ್ನು "ಕಲಹಪ್ರಿಯ" (KJV) ಅಥವಾ "ಅರಾಜಕತೆ" (RSV) ಎಂದು ಸಹ ಅನುವಾದಿಸಬಹುದು.

ಈ ಸ್ವಾರ್ಥಚಿಂತಕರು "ಸತ್ಯವನ್ನು [ದೇವರ ವಾಕ್ಯದಲ್ಲಿರುವ ಪ್ರಕಾರ] ಅನುಸರಿಸದೆ ಅನ್ಯಾಯವನ್ನು ಅನುಸರಿಸುತ್ತಾರೆ." ಈ Phillips ತನ್ನ ತರ್ಜುಮೆಯಲ್ಲಿ, ಅವರನ್ನು "ದೇವರ ಜೀವನಸಂಕಲ್ಪಕ್ಕೆ ಅವಿಧೇಯರಾಗಿ ಆತನ ನಿಯಮಗಳಿಗೆ ವಿಧೇಯರಾಗಲು ನಿರಾಕರಿಸುವವರು" ಎಂದು ಬಣ್ಣಿಸುತ್ತಾನೆ," ದುಷ್ಟತನದ ಸೇವಕರಾದವರು."

ಅವರಿಗೆ ಸಿಕ್ಕುವ "ಪ್ರತಿಫಲವು" "ಕೋಪ ಮತ್ತು ರೌದ್ರ." ಅನುವಾದಿಸಲ್ಪಟ್ಟ "ಕೋಪ" (ὀργή, *orgē*) ಮತ್ತು "ರೌದ್ರ" (θυμός, *thumos*) ಎಂಬ ಪದಗಳೆರಡೂ ಗ್ರೀಕ್ ಭಾಷೆಯಲ್ಲಿ "ಸಿಟ್ಟು" ಎಂಬದಾಗಿರುತ್ತದೆ. ಎರಡು ಪದಗಳು ವಿವಿಧ ರೀತಿಯ ಸಿಟ್ಟುಗಳನ್ನು ಸೂಚಿಸುತ್ತದೆ;[16] ಆದರೆ ಇಲ್ಲಿ, ಅವುಗಳು ಕಡೇ ದಿನದಲ್ಲಿ ಪಶ್ಚಾತ್ತಾಪವಿಲ್ಲದವರ ಮೇಲೆ ತೋರಿಬರುವ ದೇವರ "ಉರಿಯುವ ಸಿಟ್ಟು" ಎಷ್ಟು ತೀಕ್ಷ್ಣವಾಗಿದೆಯೆಂದು ತೋರಿಸುವದಕ್ಕಾಗಿ ಒಟ್ಟಾಗಿ ಜೋಡಿಸಲ್ಪಟ್ಟು ಉಪಯೋಗಿಸ ಲಾಗಿದೆ.[17] (NIRV) "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು" (ಇಬ್ರಿಯ 10:31)!

2:7, 8 ರಲ್ಲಿ, ಪೌಲನು ಎರಡು ರೀತಿಯ ಜನರ ನಡುವಿನ ವ್ಯತ್ಯಾಸಗಳನ್ನು ತಿಳಿಸಿದನು. ಅವರ ಗುರಿಗಳು ವ್ಯತ್ಯಾಸವಾಗಿವೆ: ಒಬ್ಬರು ದೇವರನ್ನು ಹುಡುಕುವವರು,

ಮತ್ತೊಂದು ಗುಂಪಿನವರು ಸ್ವಾರ್ಥವನ್ನು ಹುಡುಕುವವರು. ಅವರ ಕೆಲಸಗಳು ವ್ಯತ್ಯಾಸವಾಗಿವೆ: ಒಬ್ಬರು ಒಳ್ಳೇದನ್ನು ಮಾಡುವವರು, ಮತ್ತೊಬ್ಬರು ಕೆಟ್ಟದ್ದನ್ನು ಮಾಡುವವರು. ಆದುದರಿಂದ, ಅವರ ಅಂತ್ಯವು ಸಹ ವ್ಯತ್ಯಾಸವಾಗಿರುವದು: ಒಬ್ಬರು ನಿತ್ಯಜೀವವನ್ನು ಪಡೆದರೆ, ಮತ್ತೊಬ್ಬರು "ದೇವರ ಕೋಪ ಹಾಗೂ ರೌದ್ರವನ್ನು ಪಡೆಯುವರು." *ಎರಡು* ಸಾಧ್ಯತೆಗಳು ಮಾತ್ರವೇ ಇರುವವು, ಹೊರತು ಮಧ್ಯದ ದಾರಿ ಯಾವದೂ ಇಲ್ಲ.

**ವಚನ 9.** ವಚನ 9 ಮತ್ತು 10 ರಲ್ಲಿ, ಪೌಲನು 7 ಹಾಗೂ 8 ವಚನಗಳಲ್ಲಿನ ಆಲೋಚನೆಯನ್ನು ಪುನರಾವರ್ತಿಸುತ್ತಾನೆ (ವಿರುದ್ಧ ಕ್ರಮದಲ್ಲಿ)—ಅದರ ಜೊತೆಯಲ್ಲಿ ಒಂದು ಪ್ರಾಮುಖ್ಯವಾದ ಸಂಗತಿಯನ್ನು ಸೇರ್ಪಡೆಗೊಳಿಸುತ್ತಾನೆ. ವಚನ 9 ರಲ್ಲಿ, ಆತನು ಕೆಟ್ಟದ್ದನ್ನು ನಡಿಸುವವರಿಗಾಗುವ ಗತಿಯನ್ನು ತಿಳಿಸುತ್ತಾನೆ: **ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ ಕಷ್ಟವೂ ಸಂಕಟವೂ ಬರುವವು.** ವಚನ 8 ದುಷ್ಟನಿಗಾಗಿ ಕಾದಿರುವ ದೇವರ ಕೋಪಾಗ್ನಿಯನ್ನು ತಿಳಿಸುತ್ತದೆ ("ಕೋಪ" ಮತ್ತು "ರೌದ್ರ"). ಈಗ, ಈ ವಚನವು ಅವನಿಗೆ "ಕಷ್ಟವೂ ಸಂಕಟವೂ" ಬರುವವೆಂದು ತಿಳಿಸುತ್ತದೆ.

ಅನುವಾದಿಸಲ್ಪಟ್ಟ "ಕಷ್ಟ" (θλῖψις, *thlipsis*) ಎಂಬ ಪದದ ಪ್ರಾಥಮಿಕ ಅರ್ಥವು "ಒತ್ತಡ" ಎಂದಾಗಿರುತ್ತದೆ, "ಆತ್ಮಕ್ಕೆ ಭಾರವನ್ನುಂಟು ಮಾಡುವ" ಒತ್ತಡ.[18] "ಸಂಕಟ" ಎಂಬುದು στενοχωρία (*stenochōria*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದರರ್ಥವು "ಒಂದು ಇಕ್ಕಟ್ಟಾದ ಸ್ಥಳ" ಎಂದಾಗಿರುತ್ತದೆ. ಈ ಸಂಯುಕ್ತ ಪದವು στενός (*stenos, "ಇಕ್ಕಟ್ಟಾದ"*) ಮತ್ತು χώρα (*chōra, "ಒಂದು ಸ್ಥಳ"*) ಎಂಬ ಪದಗಳನ್ನು ಒಳಗೊಂಡಿರುತ್ತದೆ. ಇದು ಅಂಥ ರೀತಿಯಲ್ಲಿ ಕಟ್ಟಿಹಾಕಲ್ಪಡುವದರಿಂದಾಗುವ ಯಾತನೆಯನ್ನು ಸೂಚಿಸುತ್ತದೆ.[19] ದುಷ್ಟರು ನರಕದಲ್ಲಿ ಭಯಂಕರ ಬಂಡೆ ಹಾಗೂ ಕಠಿಣ ಸ್ಥಳದ ನಡುವೆ ಸಿಕ್ಕಿಬೀಳುವರು.

ಅದರಿಂದ ಯಾರಾದರೂ ಹೊರತಾಗಿದ್ದಾರೋ? ಇಲ್ಲ. ಈ ಶಿಕ್ಷೆಯು "ಕೆಟ್ಟದ್ದನ್ನು ನಡಿಸುವ ಪ್ರತಿಯೊಬ್ಬ ನರಪ್ರಾಣಿಗೆ" ಎಂದು ಪೌಲನು ಹೇಳುತ್ತಾನೆ. ಪೌಲನು ಇದಕ್ಕೆ ಪುರಾವೆ ಎಂಬಂತೆ, ಯಾವ ಯೆಹೂದ್ಯನು ಸಹ ನಿರೀಕ್ಷೆ ಮಾಡದ ದಿಕ್ಕಿನಲ್ಲಿ ತನ್ನ ಉಪದೇಶವನ್ನು ವಿಸ್ತರಿಸುತ್ತಾನೆ: **ಯೆಹೂದ್ಯರಿಗೆ ಮೊದಲು, ಅನಂತರ ಗ್ರಿಕರಿಗೆ ಸಹ.** ಯೆಹೂದ್ಯರಿಗೆ ವಿಶೇಷ ಸವಲತ್ತುಗಳು ಕೊಡಲ್ಪಟ್ಟಿದ್ದವು (ನೋಡಿರಿ 2:17-20), ಆದರೆ ವಿಶೇಷ ಸವಲತ್ತುಗಳ ಜೋತೆಯಲ್ಲಿ ವಿಶೇಷ ಜವಾಬ್ದಾರಿಗಳು ಸಹ ಇರುತ್ತವೆ. ಯೆಹೂದ್ಯರು "ದೇವರ ನ್ಯಾಯತೀರ್ಪಿನಿಂದ" ತಪ್ಪಿಸಿಕೊಳ್ಳಲಾರರು ಎಂಬದು ಮಾತ್ರವಲ್ಲ (2:3), ನ್ಯಾಯತೀರ್ಪಿನ ದಿನದಂದು ದೇವರ ನ್ಯಾಯತೀರ್ಪಿನ ಸಿಂಹಾಸನದ "ಮೊದಲ ಸಾಲಿ" ನಲ್ಲಿ ಇರುವವರು ಅವರೇ ಆಗಿರಲಿದ್ದಾರೆ!

**ವಚನ 10.** ಈ ವಿಚಾರ ತಿಳಿಸಿದ ಬಳಿಕ, ಪೌಲನು ಒಳ್ಳೇದನ್ನು ಮಾಡುವವರ ಕಡೆಗೆ ಹಿಂದಿರುಗುತ್ತಾನೆ: **ಆದರೆ ಒಳ್ಳೇದನ್ನು ನಡಿಸುವ ಪ್ರತಿಯೊಬ್ಬನಿಗೆ ಪ್ರಭಾವವೂ ಮಾನವೂ ಮನಶ್ಶಾಂತಿಯೂ ಉಂಟಾಗುವವು.** ಈ ವಚನದಲ್ಲಿ "ಮನಶ್ಶಾಂತಿ" (εἰρήνη, *eirēnē*) ಎಂಬುದು ದೇವರೊಂದಿಗಿನ ಮತ್ತು ಮನುಷ್ಯನೊಂದಿಗಿನ ಸಮಾಧಾನವನ್ನು-ಪರಲೋಕದಲ್ಲಿ ಮಾತ್ರವೇ ಸಾರ್ಥಕವಾಗುವ ಅಂತಿಮವಾದ ಹಾಗೂ ಸಂಪೂರ್ಣವಾದ

ಶಾಂತಿಯನ್ನು-ಸೂಚಿಸುತ್ತದೆ. ಅಪೊಸ್ತಲನು ಇನ್ನೂ ಹೇಳಿದ್ದೇನೆಂದರೆ, **ಯೆಹೂದ್ಯರಿಗೆ ಮೊದಲು, ಅನಂತರ ಗ್ರೀಕರಿಗೆ ಸಹ.**

**ವಚನ 11. ದೇವರಿಗೆ ಪಕ್ಷಪಾತವಿಲ್ಲ.** "ಪಕ್ಷಪಾತ" ಎಂಬುದು ಒಂದು ಸಂಯುಕ್ತ ಪದದಿಂದ (προσωποληµψία, *prosōpolēmpsia*) ಅನುವಾದಿಸಲ್ಪಟ್ಟಿದೆ, ಅದರಲ್ಲಿ "ಮುಖ" (πρόσωπον, *prosōpon*) ಎಂಬ ಪದದೊಂದಿಗೆ "ಸ್ವೀಕರಿಸು" (λαµβάνω, *lambanō*) ಎಂಬ ಪದವು ಜೋಡಣೆಯಾಗಿರುತ್ತದೆ. ಇದರಲ್ಲಿ ಕಾಣುವ ಆಲೋಚನೆ ಏನೆಂದರೆ "ಒಬ್ಬನ ಮುಖ ಸ್ವೀಕರಿಸು" -ಅಂದರೆ ಮತ್ತೊಬ್ಬನನ್ನು ಆತನ ಹೊರಗಿನ ತೋರಿಕೆಯ ಪ್ರಕಾರ ನಡಿಸಿಕೊಳ್ಳು ಎಂದಾಗಿರುತ್ತದೆ. ಮಾನವರಾಗಿ, ನಾವು ಜನರನ್ನು ಅವರ "ಬಹಿರಂಗದ ತೋರಿಕೆಯ ಆಧಾರದಿಂದ" ಸ್ವೀಕರಿಸುವ ಅಥವಾ ತಿರಸ್ಕರಿಸುವದನ್ನು ಮಾಡುತ್ತೇವೆ. ಅಷ್ಟುಮಾತ್ರವಲ್ಲದೆ, ನಾವು ಅನೇಕ ವೇಳೆಗಳಲ್ಲಿ ಪಕ್ಷಪಾತದಿಂದ ತೀರ್ಪು ಮಾಡುತ್ತೇವೆ, ಒಬ್ಬರಿಗೆ ಕಠಿಣವಾಗಿಯೂ ಮತ್ತೊಬ್ಬರಿಗೆ ಮೃದುವಾಗಿ ನಡೆದುಕೊಳ್ಳುತ್ತೇವೆ. ಹೇಗೂ, ದೇವರು ನಿಷ್ಪಕ್ಷಪಾತಿಯಾಗಿದ್ದಾನೆ (ನೋಡಿರಿ ಧರ್ಮೋಪದೇಶಕಾಂಡ 10:17; 2 ಪೂರ್ವಕಾಲವೃತ್ತಾಂತ 19:7; ಅಪೊಸ್ತಲರ ಕೃತ್ಯಗಳು 10:34, 35).

## ದೇವರ ನೀತಿಯುಳ್ಳ ನ್ಯಾಯತೀರ್ಪು (2:12-16)

**[12]ಧರ್ಮಶಾಸ್ತ್ರವಿಲ್ಲದವರಾಗಿ ಪಾಪಮಾಡಿದವರು ಧರ್ಮಶಾಸ್ತ್ರವಿಲ್ಲದವರಾಗಿ ನಾಶಹೊಂದುವರು; ಆದರೆ ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪಮಾಡಿದವರು ಧರ್ಮಶಾಸ್ತ್ರಕ್ಕನುಸಾರವಾಗಿ ತೀರ್ಪನ್ನು ಹೊಂದುವರು. [13]ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು. [14]ಧರ್ಮಶಾಸ್ತ್ರವಿಲ್ಲದ ಅನ್ಯಜನರು ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ [15]ತಮಗೆ ಧರ್ಮಪ್ರಮಾಣವಾಗಿದ್ದಾರೆ; ಹೇಗೆಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬದನ್ನು ತೋರ್ಪಡಿಸುತ್ತಾರೆ. ಇದಕ್ಕೆ ಅವರ ಮನಸ್ಸು ಸಹ ಸಾಕ್ಷಿ ನುಡಿಯುತ್ತದೆ; ಅವರ ಯೋಚನೆಗಳು ವಾದಿಪ್ರತಿವಾದಿಗಳಂತೆ-ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ. [16]ನಾನು ಸಾರುವ ಸುವಾರ್ತೆಯಲ್ಲಿ ಬೋಧಿಸಿರುವ ಪ್ರಕಾರ ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ. ಆ ದಿನದಲ್ಲಿ ಇದೆಲ್ಲಾ ತಿಳಿದು ಬರುವದು.**

ಈ ವಚನಗಳಲ್ಲಿ, ದೇವರು ಯೆಹೂದ್ಯರನ್ನೂ ಅನ್ಯಜನರನ್ನೂ ನಡಿಸಿಕೊಳ್ಳುವದರಲ್ಲಿ ಹೇಗೆ ನಿಷ್ಪಕ್ಷಪಾತಿಯಾಗಿರು ತ್ತಾನೆಂಬದನ್ನು ಪೌಲನು ದೃಷ್ಟಾಂತಪಡಿಸಿದನು. ಅಪೊಸ್ತಲನು ವಿಶೇಷವಾಗಿ, ಯೇಸುವಿನ ಬರೋಣಕ್ಕೆ ಮುಂಚೆ ಯೆಹೂದ್ಯರು ಹಾಗೂ ಅನ್ಯಜನರ ವಿಷಯದಲ್ಲಿ ದೇವರು ಅನುಸರಿಸಿದ ದಾರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಾನೆ.

**ವಚನ 12.** ವಚನವು ಹೀಗೆ ಆರಂಭವಾಗುತ್ತದೆ, **ಧರ್ಮಶಾಸ್ತ್ರವಿಲ್ಲದವರಾಗಿ ಪಾಪಮಾಡಿದವರು ಧರ್ಮಶಾಸ್ತ್ರವಿಲ್ಲ ದವರಾಗಿ ನಾಶಹೊಂದುವರು.** ಪೌಲನು ಇಲ್ಲಿಯೇ ಪ್ರಥಮ ಬಾರಿಗೆ "ಧರ್ಮಶಾಸ್ತ್ರ" (νόμος, *nomos*) ಎಂಬ ಪದವನ್ನು ಉಪಯೋಗಿಸುತ್ತಾನೆ, ಇದು ಈ ಪತ್ರಿಕೆಯಲ್ಲಿ ಪ್ರಮುಖವಾದ ಸ್ಥಾನ ಹೊಂದಿರುತ್ತದೆ. *Nomos* ವಿವಿಧ ಅರ್ಥಗಳನ್ನು ಹೊಂದಿರಬಹುದಾಗಿದೆ, ಆದರೆ ಇಲ್ಲಿ ಅದು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. "ಧರ್ಮಶಾಸ್ತ್ರವಿಲ್ಲದವರಾಗಿ ಪಾಪಮಾಡಿದವರೆಲ್ಲರೂ" ಎಂಬುದು "ದೇವರ ಲಿಖಿತ ಧರ್ಮಶಾಸ್ತ್ರ" ಹೊಂದಿರದೆ ಇದ್ದ ಅನ್ಯಜನರನ್ನು ಸೂಚಿಸುತ್ತದೆ (NLT). ಇವರು "ಧರ್ಮಶಾಸ್ತ್ರವಿಲ್ಲದವರಾಗಿಯೇ ನಾಶವಾಗುವರು" ಎಂದು ಪೌಲನು ಹೇಳುತ್ತಾನೆ.

ಮೋಶೆಯ ಧರ್ಮಶಾಸ್ತ್ರವನ್ನು ಹೊಂದಿದ್ದಂಥ ಯೆಹೂದ್ಯರ ವಿಷಯವಾಗಿ, ಪೌಲನು ಹೀಗೆ ಹೇಳುತ್ತಾನೆ, **ಧರ್ಮಶಾಸ್ತ್ರವುಳ್ಳವರಾಗಿದ್ದು ಪಾಪಮಾಡಿದವರು ಧರ್ಮಶಾಸ್ತ್ರಕ್ಕನು ಸಾರವಾಗಿ ತೀರ್ಪು ಹೊಂದುವರು.**

ಕೆಲವರು ವಿರೋಧ ವ್ಯಕ್ತಪಡಿಸಿ ಇದು ನ್ಯಾಯವೆಂದು ಕಾಣುವದಿಲ್ಲ ಎಂದು ಹೇಳಬಹುದು: "ದೇವರು ಯೆಹೂದ್ಯರಿಗೆ ತೀರ್ಪುಮಾಡುವದು ನ್ಯಾಯವೇ, ಅವರ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರ ಇತ್ತು; ಆದರೆ ಅನ್ಯಜನರಿಗೆ ನ್ಯಾಯತೀರಿಸುವದು ನ್ಯಾಯೋಚಿತವಲ್ಲ, ಅವರ ಬಳಿಯಲ್ಲಿ ಧರ್ಮಶಾಸ್ತ್ರ ಇರಲಿಲ್ಲ. ಅವರಿಗೆ ಧರ್ಮಶಾಸ್ತ್ರವೇ ಇರಲಿಲ್ಲವೆಂದಾದ ಮೇಲೆ ಅವರು ಏಕೆ ನಾಶವಾಗಬೇಕು?" ಇದಕ್ಕೆ ಪೌಲನ ಉತ್ತರವು, ಅನ್ಯಜನರ ಬಳಿಯಲ್ಲಿ ಧರ್ಮಶಾಸ್ತ್ರವು ಇತ್ತು ಎಂದಾಗಿರುತ್ತದೆ. ಅವರ ಬಳಿಯಲ್ಲಿ ಮೋಶೆಯ ಧರ್ಮಶಾಸ್ತ್ರ ಇರಲಿಲ್ಲ ನಿಜ, ಆದರೆ ಅವರಿಗೆ ಒಂದು ಧರ್ಮಶಾಸ್ತ್ರ ಇತ್ತು. C. K. Barrett ಹೇಳಿದ ಹಾಗೆ, "ಅನ್ಯಜನಾಂಗದವನು ನಿಜಕ್ಕೂ ಧರ್ಮಶಾಸ್ತ್ರದ ಹೊರತಾಗಿ ಇರಲಿಲ್ಲ, ಅವನು ಮೋಶೆಯ ಧರ್ಮಶಾಸ್ತ್ರದ ವ್ಯಾಪ್ತಿಯಿಂದ ಹೊರಗಿದ್ದದ್ದೇನೋ ನಿಜ."[20]

**ವಚನ 13.** ಆತನು ಮುಂದುವರೆಸಿ ಹೇಳುತ್ತಾನೆ, **ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗುವದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು.** ಬಹಳಷ್ಟು ಜನರು ಸಭಾಮಂದಿರದಲ್ಲಿ ಪ್ರತಿ ಸಬ್ಬತ್ ದಿನದಂದು ಧರ್ಮಶಾಸ್ತ್ರವು ಓದಲ್ಪಡುವದನ್ನು ಆಲಿಸುವ ಮೂಲಕ ಕಲಿತುಕೊಂಡರು (ನೋಡಿರಿ ಅಪೊಸ್ತಲರ ಕೃತ್ಯಗಳು 13:15; 15:21). ಹೇಗೂ, ಪೌಲನು ಇಲ್ಲಿ ಕೇವಲ ಧರ್ಮಶಾಸ್ತ್ರವನ್ನು ಕೇಳಿಸಿಕೊಂಡರೆ ಸಾಕಾಗದು; ಒಬ್ಬನು ಅದನ್ನು ಕೈಕೊಂಡು ನಡೆಯಬೇಕು ಎಂಬದನ್ನು ಒತ್ತಿಹೇಳುತ್ತಾನೆ (ನೋಡಿರಿ ಯಾಕೋಬ 1:22-25).

**ವಚನ 14.** ಅಪೊಸ್ತಲನು 1ನೇ ಅಧ್ಯಾಯದಲ್ಲಿ ಅನ್ಯಜನಾಂಗದ ಜಗತ್ತಿನ ಬಗ್ಗೆ ಒಂದು ಕರಾಳ ಚಿತ್ರಣವನ್ನು ಮುಂದಿಟ್ಟನು. ಅದೇ ವೇಳೆಯಲ್ಲಿ, ಆತನಿಗೂ ಇತರರಿಗೂ "ಕೆಲವರು ಇದಕ್ಕೆ ಹೊರತಾಗಿದ್ದಾರೆ" ಎಂದು ಅನ್ನಿಸಿರುವಂತೆ ತೋರುತ್ತದೆ. ಅನ್ಯಜನರಲ್ಲಿ ಎಲ್ಲರೂ ಲೈಂಗಿಕ ಅನೈತಿಕತೆಯನ್ನು ನಡಿಸಿರಲಿಲ್ಲ (1:24-27) ಅಥವಾ ಘೋರ ದುಷ್ಕೃತ್ಯ ನಡಿಸಿರಲಿಲ್ಲ (1:28-32). ಆದ್ದರಿಂದ ಪೌಲನು (ಮೋಶೆಯ) **ಧರ್ಮಶಾಸ್ತ್ರವಿಲ್ಲದ**[21]

**ಅನ್ಯಜನರು ಸ್ವಾಭಾವಿಕವಾಗಿ** (ಮೋಶೆಯ) **ಧರ್ಮಶಾಸ್ತ್ರದಲ್ಲಿ ಹೇಳಿದಂತೆ ನಡೆದರೆ** ಎಂದು ಹೇಳುತ್ತಾನೆ.

ಇಲ್ಲಿ ಪ್ರಶ್ನೆಯಲ್ಲಿರುವ ಅನ್ಯಜನರು ಮೋಶೆಯ ಧರ್ಮಶಾಸ್ತ್ರಕ್ಕೆ ವಿಧೇಯರಾದರು ಎಂದು ಅಪೊಸ್ತಲನು ಹೇಳಲಿಲ್ಲ; ಅವರು ಹಾಗೆ ಮಾಡಲಾಗಲಿಲ್ಲ, ಯಾಕೆಂದರೆ ಅವರಿಗೆ ಧರ್ಮಶಾಸ್ತ್ರ ಇರಲಿಲ್ಲ. ಹೀಗಿದ್ದರೂ, ಅವರು ಧರ್ಮಶಾಸ್ತ್ರದಲ್ಲಿನ "*ಸಂಗತಿಗಳನ್ನು*" ಮಾಡಿದರು. ಅಂದರೆ, ಅವರು ಮೋಶೆಯ ಧರ್ಮಶಾಸ್ತ್ರದಿಂದ ಆಜ್ಞಾಪಿಸಲ್ಪಟ್ಟ *ಅದೇ ರೀತಿಯ "ಸಂಗತಿಗಳನ್ನು"* -ಅದೇ ವಿಧಿಗಳನ್ನು- ಪಾಲಿಸಿದರು. ಉದಾಹರಣೆಗೆ, ಐದನೆಯ ಆಜ್ಞೆಯು ಹೇಳುತ್ತದೆ, "ನಿನ್ನ ತಂದೆತಾಯಿಗಳನ್ನು ಸನ್ಮಾನಿಸು" (ವಿಮೋಚನಕಾಂಡ 20:12), ಮತ್ತು ಅನೇಕ ಅನ್ಯಜನರು ತಮ್ಮ ಹೆತ್ತವರನ್ನು ಗೌರವಿಸಿದರು. ಆರನೆಯ ಆಜ್ಞೆ ಹೇಳುತ್ತದೆ, "ನೀನು ನರಹತ್ಯೆಯನ್ನು ಮಾಡಬಾರದು" (ವಿಮೋಚನಕಾಂಡ 20:13), ಮತ್ತು ಅವರಲ್ಲಿ ಬಹಳಷ್ಟು ಜನರು ಕೊಲೆಯು ತಪ್ಪು ಎಂದು ನಂಬುವವರಾಗಿದ್ದರು. ಏಳನೆಯ ಆಜ್ಞೆಯು ಹೇಳುತ್ತದೆ, "ನೀನು ವ್ಯಭಿಚಾರ ಮಾಡಬಾರದು" (ವಿಮೋಚನಕಾಂಡ 20:14); ಮತ್ತು ಅವರಲ್ಲಿ ಕೆಲವರು ತಮ್ಮ ಸಂಗಾತಿಗಳೊಂದಿಗೆ ನಂಬಿಗಸ್ತರಾಗಿದ್ದರು. ಎಂಟನೆಯ ಆಜ್ಞೆಯು ಹೇಳುತ್ತದೆ, "ನೀನು ಕದಿಯಬಾರದು" (ವಿಮೋಚನಕಾಂಡ 20:15), ಮತ್ತು ಬಹಳ ಮಂದಿ ಕಳ್ಳತನವನ್ನು ಒಂದು ಅಪರಾಧವೆಂದು ಪರಿಗಣಿಸಿದ್ದಿರಬೇಕು.

ಅನ್ಯಜನರ ಬಳಿಯಲ್ಲಿ ದಶಾಜ್ಞೆಗಳಿಲ್ಲವಾಗಿದ್ದಲ್ಲಿ, ಈ ನಿಯಮಗಳನ್ನು ಪಾಲಿಸಬೇಕೆಂದು ಅವರಿಗೆ ಹೇಗೆ ಗೊತ್ತಾಗಿತ್ತು? ಅವರು ಅವುಗಳನ್ನು "ಸ್ವಾಭಾವಿಕವಾಗಿ" ಮಾಡಿದರು ಎಂದು ಪೌಲನು ಹೇಳುತ್ತಾನೆ. ಅನುವಾದಿಸಲ್ಪಟ್ಟ "ಸ್ವಾಭಾವಿಕವಾಗಿ" (φύσει, *phusei*) ಎಂಬುದರ ಅಕ್ಷರಶಃ ಅರ್ಥವು "ಸ್ವಭಾವತಃ" ; ಇದು φύσις (*phusis*) ಎಂಬುದರಿಂದ ಬಂದಿರುತ್ತದೆ, ಇದರರ್ಥವು "ಸ್ವಭಾವ." ಅಂದರೆ, ಅವರು ಧರ್ಮಶಾಸ್ತ್ರವು ಎದುರು ನೋಡುವಂತದ್ದನ್ನು "ಸ್ವಾಭಾವಿಕವಾಗಿಯೇ" ಅನುಸರಿ ಸುತ್ತಿದ್ದರು (CJB). Thayer ಶಬ್ದಭಂಡಾರದ ಪ್ರಕಾರವಾಗಿ, ರೋಮಾ 2:14 ರಲ್ಲಿ *phusei* ಅರ್ಥವೇನೆಂದರೆ ಅನ್ಯಜನರು ತಮಗಿದ್ದ "ಯಾವದು ಸರಿ ಹಾಗೂ ತಪ್ಪು ಎಂಬ ಸ್ವಾಭಾವಿಕ ಗ್ರಹಿಕೆಯ" ಅನುಗುಣವಾಗಿ ನಡಿಸಲ್ಪಟ್ಟರು.[22]

ರೋಮಾ 1:26, 27ರಲ್ಲಿ ಉಪಯೋಗಿಸಲ್ಪಟ್ಟ ರೀತಿಯಲ್ಲಿ "ಸ್ವಭಾವ" ಮತ್ತು "ಸ್ವಾಭಾವಿಕ" ಪದಗಳನ್ನು ಚರ್ಚಿಸುವಾಗ, ಸಾಕ್ಷ್ಯಾಧಾರಗಳಿಂದ ನಾವು ಒಂದು ಮುಕ್ತಾಯಕ್ಕೆ ಬರಬಹುದಾಗಿದೆ, ಏನೆಂದರೆ "ಸ್ವಭಾವ" (*phusis*) ಎಂಬುದು "ದೇವರು ಸೃಷ್ಟಿಸಿರುವ ಕ್ರಮ" ಎಂಬುದನ್ನೇ ಸೂಚಿಸುತ್ತದೆ. ಅನ್ಯಜನರಿಗೆ ಒಂದು ಸಂಗತಿ ಸರಿ ಹಾಗೂ ಮತ್ತೊಂದು ತಪ್ಪು ಎಂಬುದರ ಬಗ್ಗೆ ಸ್ವಭಾವಿಕವಾಗಿ ಗೊತ್ತಿತ್ತು ಯಾಕೆಂದರೆ *ದೇವರು ಜನರನ್ನು ಆ ವಿಧವಾಗಿಯೇ ಉಂಟುಮಾಡಿದನು.*

"ಧರ್ಮಶಾಸ್ತ್ರದಲ್ಲಿ ಹೇಳಿದ ಸಂಗತಿಗಳನ್ನು" ಸ್ವಾಭಾವಿವಾಗಿಯೇ ಮಾಡಿದ ಅನ್ಯಜನರ ಬಗ್ಗೆ ಮಾತಾಡಿದ ಬಳಿಕ, ಪೌಲನು ಹೇಳಿದ್ದೇನೆಂದರೆ, ಅವರು ಧರ್ಮಶಾಸ್ತ್ರವಿಲ್ಲದವರಾಗಿದ್ದರೂ ತಾವೇ ತಮಗೆ ಧರ್ಮಪ್ರಮಾಣವಾಗಿದ್ದಾರೆ**.** ನಾವು ಯಾರಾದರೂ ಒಬ್ಬರ ವಿಷಯವಾಗಿ "ಅವರಿಗೆ ಅವರೇ ಕಾನೂನು ಆಗಿದ್ದಾರೆ" ಎಂದು ಹೇಳುತ್ತೇವೆ, ಅಂದರೆ ಅವರು ದೇವರ ಅಥವಾ ಮನುಷ್ಯರ ಕಾನೂನುಗಳಿಗೆ

ಬೆಲೆಕೊಡುವದಿಲ್ಲ, ಆದರೆ ತಮ್ಮ ಮನಸ್ಸಿಗೆ ತೋಚಿದಂತೆ ನಡೆಯುತ್ತಾರೆ ಎಂಬರ್ಥದಲ್ಲಿ ಆಗಿದೆ. ಪೌಲನು ಇಲ್ಲಿ ಅಂಥ ವ್ಯಕ್ತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆಯುತ್ತಿಲ್ಲ. ಬದಲಾಗಿ, ಶಿಲುಬೆಯ ಮುಂಚೆ ಇದ್ದ ಯೆಹೂದ್ಯೇತರರನ್ನು ಸೂಚಿಸುತ್ತಿದ್ದಾನೆ.

**ವಚನ 15.** ಅನ್ಯಜನರು ತಾವೇ "ತಮಗೆ ಧರ್ಮಶಾಸ್ತ್ರ" ಆಗಿದ್ದಾರೆಂದು ಹೇಳಿದ ಬಳಿಕ, ಪೌಲನು ಅದು *ಹೇಗೆಂಬುದನ್ನು* ವಿವರಿಸುತ್ತಾನೆ: **ಹೇಗೆಂದರೆ ಅವರು ಧರ್ಮಶಾಸ್ತ್ರದ ಮುಖ್ಯ ತಾತ್ಪರ್ಯ ತಮ್ಮ ಹೃದಯದಲ್ಲಿ ಬರೆದದೆ ಎಂಬದನ್ನು ತೋರ್ಪಡಿಸುತ್ತಾರೆ.**[23] ಅಪೊಸ್ತಲನು ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾದವರನ್ನಲ್ಲ, ಆದರೆ "ಧರ್ಮಶಾಸ್ತ್ರದ ತಾತ್ಪರ್ಯವು ಅವರ ಹೃದಯಗಳಲ್ಲಿ ಬರೆಯಲ್ಪಟ್ಟಿದೆ" ಎಂಬದನ್ನು ತಮ್ಮ ಜೀವಿತಗಳಲ್ಲಿ ತೋರ್ಪಡಿಸಿದವರನ್ನು ಕುರಿತು ಬಣ್ಣಿಸುತ್ತಿದ್ದಾನೆ.

"ಧರ್ಮಶಾಸ್ತ್ರದ ತಾತ್ಪರ್ಯ" ಎಂಬುದು ಪ್ರಾಥಮಿಕವಾಗಿ ವಚನ 14ರಲ್ಲಿ ಹೇಳಲಾದ "ಧರ್ಮಶಾಸ್ತ್ರದಲ್ಲಿ ಹೇಳಿದಂತೆ" ಎಂಬ ಅರ್ಥವೇ ಆಗಿದೆ. ಈ ಅನ್ಯಜನರ ಹೃದಯಗಳಲ್ಲಿ ಬರೆಯಲ್ಪಟ್ಟಿದ್ದು ಸ್ವತಃ ಧರ್ಮಶಾಸ್ತ್ರವೇ ಆಗಿರಲಿಲ್ಲ, ಆದರೆ "ಧರ್ಮಶಾಸ್ತ್ರದ ತಾತ್ಪರ್ಯ" ವಾಗಿತ್ತು-ಅಂದರೆ, ಮೋಶೆಯ ಧರ್ಮಶಾಸ್ತ್ರ ಕೇಳುವಂಥ "ಕ್ರಿಯೆ" ಆಗಿತ್ತು. NIV ಯಲ್ಲಿ ಇದು "ಧರ್ಮಶಾಸ್ತ್ರವು ಬಯಸುವಂಥದ್ದು ಅವರ ಹೃದಯಗಳಲ್ಲಿ ಬರೆದದೆ" ಎಂದಿರುತ್ತದೆ.

"ಹೃದಯ" (καρδία, *kardia*) ಎಂಬುದು ಸಾಂಕೇತಿಕವಾಗಿ (ಸತ್ಯವೇದದಲ್ಲಿ ಅನೇಕ ಸಾರಿ ಉಪಯೋಗಿಸಲ್ಪಡುವ ರೀತಿಯಲ್ಲಿ) ಉಪಯೋಗಿಸಲ್ಪಟ್ಟಿದ್ದು ಅಂತರ್ಯವನ್ನು ಸೂಚಿಸುತ್ತದೆ: "ಭಾವನೆ, ಯೋಚನೆ, ಮಮತೆ, ಬಯಕೆಯ ಕೇಂದ್ರ," ಮತ್ತು "ಬುದ್ಧಿಯ ಕೇಂದ್ರ" ಸಹ ಆಗಿರುತ್ತದೆ.[24] "ಬರೆದದೆ" (γραπτός, *graptos*) ಸಹ ಸಾಂಕೇತಿಕವಾಗಿ ಉಪಯೋಗಿಸಲ್ಪಟ್ಟಿದೆ-ನಾವು "ಸೋಲು ಅವನ ಮುಖದಲ್ಲಿ ಬರೆಯಲ್ಪಟ್ಟಿತ್ತು" ಎಂಬದಾಗಿ ಹೇಳುವ ರೀತಿ ಇದಾಗಿರುತ್ತದೆ. ಇಲ್ಲಿ, ಇದು ಅವರ ಹೃದಯಗಳಲ್ಲಿ ಕೆಲವೊಂದು ನೈತಿಕ ಬಾಧ್ಯತೆಗಳು ನೆಡಲ್ಪಟ್ಟಿದ್ದವು, ಒಂದು ಅಗೋಚರ ಲೇಖನಿಯಿಂದ ಬರೆಯಲ್ಪಟ್ಟ ರೀತಿಯಲ್ಲಿ ಎಂಬ ಅರ್ಥವನ್ನು ಕೊಡುತ್ತದೆ.

ಧರ್ಮಶಾಸ್ತ್ರವು ಕೋರುವಂಥ ಸಂಗತಿಗಳು ಅನ್ಯಜನರ ಹೃದಯಗಳಲ್ಲಿ ಬರೆಯಲ್ಪಟ್ಟಿದ್ದವು ಎಂದು ಹೇಳುವ ಮೂಲಕ, ಪೌಲನು ಬಹುಶಃ ಇಚ್ಛಾಪೂರ್ವಕವಾಗಿಯೇ ಒಂದು ವ್ಯತ್ಯಾಸವನ್ನು ಮನದಟ್ಟುಮಾಡುವದಕ್ಕೆ ಪ್ರಯತ್ನಿಸುವಂತೆ ತೋರುತ್ತದೆ: ಯೆಹೂದ್ಯ ಧರ್ಮಶಾಸ್ತ್ರವು *ಹೊರಗೆ ಬರೆಯಲ್ಪಟ್ಟಿತ್ತು* (ಕಲ್ಲಿನ ಹಲಗೆಗಳ ಮೇಲೆ; ವಿಮೋಚನಕಾಂಡ 24:12), ಆದರೆ ಅನ್ಯಜನರ ಧರ್ಮಶಾಸ್ತ್ರವು *ಒಳಗಡೆ* (ಅವರ ಹೃದಯದ ಮೇಲೆ) ಬರೆಯಲ್ಪಟ್ಟಿತ್ತು.

ಅನ್ಯಜನರ ಬಳಿಯಲ್ಲಿ ಧರ್ಮಶಾಸ್ತ್ರವು ಇಲ್ಲದಿದ್ದಾಗ್ಯೂ ಅವರು "ಸ್ವಭಾವಿಕವಾಗಿಯೇ" ಧರ್ಮಶಾಸ್ತ್ರದಲ್ಲಿ ಬರೆಯಲ್ಪಟ್ಟಿರುವ ಅನೇಕ ಸಂಗತಿಗಳನ್ನು ಕೈಕೊಂಡು ನಡೆಯುವದರ ಮೂಲಕ ಧರ್ಮಶಾಸ್ತ್ರವು "ತಮ್ಮ ಹೃದಯಗಳಲ್ಲಿ ಬರೆಯಲ್ಪಟ್ಟಿದೆ" ಎಂಬದನ್ನು ತೋರ್ಪಡಿಸಿದರು. ಈ ರೀತಿಯಲ್ಲಿ ಅವರು (ಪೌಲನ ಮಾತಿನಲ್ಲಿ ಹೇಳಬೇಕಾದರೆ) "ತಾವೇ ತಮಗೆ ಧರ್ಮಪ್ರಮಾಣವಾದರು."

ಕೆಲವು ಅನ್ಯಜನರ "ಹೃದಯಗಳಲ್ಲಿ" "ಧರ್ಮಶಾಸ್ತ್ರದ ತಾತ್ಪರ್ಯ" "ಬರೆದದೆ" ಎಂದು ಘೋಷಿಸಿದ ಬಳಿಕ, ಪೌಲನು ನಂತರ ಹೇಳಿದ್ದೇನೆಂದರೆ, **ಇದಕ್ಕೆ ಅವರ ಮನಸ್ಸು ಸಹ**

**ಸಾಕ್ಷಿ ನುಡಿಯುತ್ತದೆ.** ಅನುವಾದಿಸಲ್ಪಟ್ಟ "ಮನಸ್ಸು" (συνείδησις, *suneidēsis*) ಎಂಬುದು ಒಂದು ಸಂಯುಕ್ತ ಪದವಾಗಿದ್ದು "ಯೊಂದಿಗೆ" (σύν, *sun*) ಮತ್ತು "ತಿಳಿ" (οἶδα, *oida*) ಎಂಬ ಪದಗಳನ್ನೊಳಗೊಂಡಿರುತ್ತದೆ. ಆಂಗ್ಲದ "conscience" (ಮನಸಾಕ್ಷಿ) ಎಂಬುದು ಗ್ರೀಕ್.ನ "con" ("ಯೊಂದಿಗೆ") ಜೊತೆಗೆ "science" (ತಿಳುವಳಿಕೆ) ಎಂಬ ಪದದಿಂದ ಬಂದಿರುತ್ತದೆ. ಗ್ರೀಕ್.ನಲ್ಲಾಗಲಿ ಅಥವಾ ಆಂಗ್ಲದಲ್ಲಾಗಲಿ, ಈ ಪದವು "ಯೊಂದಿಗೆ [ಒಬ್ಬನೊಂದಿಗೆ] ಇರುವ ತಿಳುವಳಿಕೆ" ಯನ್ನು ಸೂಚಿಸುತ್ತದೆ.[25] ಇದೊಂದು "ಅಂತರ್ಯದಲ್ಲಿನ ಪ್ರಜ್ಞೆ"—ಆದರೆ ಯಾವದರ ಕುರಿತ ಅಂತರ್ಯದ ಪ್ರಜ್ಞೆ? ಪೌಲನ ದಿನಗಳಲ್ಲಿ (ನಮ್ಮ ದಿನಗಳಲ್ಲಿರುವ ಹಾಗೆಯೇ), ಅದು ತಪ್ಪು ಹಾಗೂ ಒಪ್ಪುಗಳ ಕುರಿತ ಹೃದಯದೊಳಗಿದ್ದ ಪ್ರಜ್ಞೆಯ ಕುರಿತಾಗಿತ್ತು. *Suneidēsis ನ* ಶಬ್ದಾರ್ಥಕ್ಕೆ Bauerನ ಶಬ್ಧ ಭಂಡಾರ "ನೈತಿಕ ಪ್ರಜ್ಞೆ" ಎಂಬ ಪದ ವನ್ನು ಉಪಯೋಗಿಸುತ್ತದೆ.[26]

ಪ್ರತಿಯೊಬ್ಬ ವ್ಯಕ್ತಿಯು ಸಹ ಹುಟ್ಟಿನಿಂದಲೇ ಹೃದಯದಲ್ಲಿ "ಸರಿ" ಹಾಗೂ "ತಪ್ಪು" ಯಾವವೆಂಬುದರ ಪ್ರಜ್ಞೆಯುಳ್ಳವನಾಗಿರುತ್ತಾನೆ. ಹೀಗೆ, ಒಬ್ಬ ವ್ಯಕ್ತಿಯು ಏನೇ ಮಾಡಿದರೂ ಆತನ ಕ್ರಿಯೆಯು ಸರಿಯೋ ತಪ್ಪೋ ಎಂಬುದರ ವಿಷಯವಾಗಿ ಅವನಲ್ಲಿರುವ ಅಂತರ್ಯದ ದಿಕ್ಸೂಚಿಯು "ಸಾಕ್ಷಿ ನುಡಿಯುತ್ತದೆ."

ಈ ಅಂತರ್ಯದ ಮುನ್ನೆಚ್ಚರಿಕೆಗಾರಿಕೆಯಿಂದಾಗುವ ಫಲಿತವನ್ನು ಪೌಲನು ಈ ರೀತಿ ವಿವರಿಸುತ್ತಾನೆ: **ಅವರ ಯೋಚನೆಗಳು ವಾದಿಪ್ರತಿವಾದಿಗಳಂತೆ—ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುತ್ತವೆ.** ಒಬ್ಬ ವ್ಯಕ್ತಿಯ ಮನಸ್ಸು ಆತನು ಮಾಡಿದ್ದು ತಪ್ಪು ಎಂದು ತೀರ್ಮಾನಿಸುವದಾದರೆ, ಆತನ ಆಲೋಚನೆಗಳು ಆತನನ್ನು ದೋಷಿಯೆಂದು ಹೇಳುವವು (ನೋಡಿರಿ 13:5). ನಾವು ಅದನ್ನು "ಅಪರಾಧ ಮನೋಭಾವ ಹೊಂದಿರುವದು" ಎನ್ನುತ್ತೇವೆ. ಒಬ್ಬನ ಮನಸ್ಸು ಆತನು ಮಾಡಿದ್ದು ಸರಿ ಎಂದು ತೀರ್ಮಾನಿಸುವದಾದರೆ, ಆತನ ಅಲೋಚನೆಗಳು ಅವನನ್ನು ಸಮರ್ಥಿಸಿಕೊಳ್ಳುವವು (ನೋಡಿರಿ 9:1). ನಾವು ಅದನ್ನು "ಒಳ್ಳೆ ಮನಸಾಕ್ಷಿಯನ್ನು ಹೊಂದಿರುವದು" ಎನ್ನುತ್ತೇವೆ.

ಅನ್ಯಜನರು ಧರ್ಮಶಾಸ್ತ್ರವನ್ನು ಖಂಡಿತವಾಗಿ ಹೊಂದಿದ್ದರು ಎಂಬದನ್ನು ದೃಢಪಡಿಸುತ್ತಾ ಪೌಲನು ಮೂರು ಅಂಶಗಳನ್ನು-ಹೃದಯ, ಮನಸ್ಸು, ಮತ್ತು ಯೋಚನೆಗಳು-ಉಲ್ಲೇಖಿಸುತ್ತಾನೆ ಹಾಗೂ ಅವುಗಳಿಗೆ ಒಂದೊಂದು ಚಟುವಟಿಕೆ ಇರುತ್ತದೆಂದಾಗಿ ತಿಳಿಸುತ್ತಾನೆ. ಹೇಗೂ, ಹೃದಯ, ಮನಸ್ಸು ಮತ್ತು ಯೋಚಿಸುವ ಸಾಮರ್ಥ್ಯಗಳೆಲ್ಲಾ ಮೂರು ಬೇರೆ ಬೇರೆ ಹಾಗೂ ವಿಭಿನ್ನ ಅಂಗಗಳೆಂದು ಭಾವಿಸಿಕೊಳ್ಳಬಾರದು. ಈ ಮೂರು ಸಹ ದೇವರು ನಮಗೆ ಅನುಗ್ರಹಿಸಿರುವ ಮನಸ್ಸುಗಳ ಕ್ರಿಯೆಗಳಾಗಿವೆ. (ನಾವು ಅವುಗಳನ್ನು ನಮ್ಮ "ಮನಸಾಕ್ಷಿ" ಚಟುವಟಿಕೆಗಳೆಂದು ತಿಳಿಯಬಹುದು.) ಇಲ್ಲಿ ಪೌಲನು ಹೃದಯ, ಮನಸ್ಸು ಹಾಗೂ ಯೋಚನೆಗಳನ್ನು ಪಟ್ಟಿಮಾಡುವ ಉದ್ದೇಶವು ನಮ್ಮ ಅಂತರ್ಯವನ್ನು ಘಟಕಗಳನ್ನಾಗಿ ವಿಂಗಡಿಸುವದಾಗಿರಲಿಲ್ಲ. ಬದಲಾಗಿ, ತಾರ್ಕಿಕ ಶಕ್ತಿಯುಳ್ಳ ಪ್ರತಿಯೊಂದು ಜೀವಿಗಳಿಗೆ ಸಹ ಕೆಲವೊಂದು ಸರಿಯೆಂದೂ ಕೆಲವೊಂದು ತಪ್ಪೆಂದೂ ತಿಳಿಯಲು ಸಾಧ್ಯವಾಗುವ ರೀತಿಯಲ್ಲಿ ಅವರೊಳಗೆ ಅಂತರಿಕ ಪ್ರಕ್ರಿಯೆ ನಡೆಯುತ್ತದೆಂಬುದನ್ನು ಪೌಲನು ಬಣ್ಣಿಸುತ್ತಿದ್ದಾನೆ.

15ನೇ ವಚನದಲ್ಲಿ ಕೆಲವೊಂದು ಕಾನೂನಾತ್ಮಕ ಪದಗಳು ಉಪಯೋಗಿಸಲ್ಪಟ್ಟಿವೆ:

"ಧರ್ಮಶಾಸ್ತ್ರ," "ಸಾಕ್ಷಿ ನುಡಿಯುತ್ತದೆ," "ಆರೋಪ (ವಾದಿ)," ಮತ್ತು "ಪ್ರತ್ಯಾರೋಪ (ಪ್ರತಿವಾದಿ)."[27] ಇಲ್ಲಿ ನ್ಯಾಯಾಲಯದ ದೃಶ್ಯವು ಕಂಡುಬರುತ್ತದೆ. NEB ಆವೃತ್ತಿಯು ಈ ವಾಕ್ಯದ ಕಡೇ ಭಾಗವನ್ನು ಹೀಗೆ ಅನುವಾದಿಸುತ್ತದೆ, "ಅವರ ಮನಸ್ಸನ್ನು ಸಾಕ್ಷಿಗಾಗಿ ಕರೆಯಲಾಗುತ್ತದೆ, ಮತ್ತು ಅವರ ಸ್ವಂತ ಯೋಚನೆಗಳು ಪ್ರಕರಣವನ್ನು ಒಂದು ಪಕ್ಷದಲ್ಲಿ ವಾದಿಸುತ್ತವೆ, ಅವರ ವಿರುದ್ಧವಾಗಿ ಅಥವಾ ಅವರ ಪರವಾಗಿ, ಅಥವಾ ತಮ್ಮ ಪರವಾಗಿ ಸಹ ವಾದಿಸುತ್ತವೆ." ಈ ನ್ಯಾಯಾಲಯದಲ್ಲಿ, ಮನಸಾಕ್ಷಿಯು ನ್ಯಾಯಾಧಿಪತಿ, ಸಾಕ್ಷಿ, ಮತ್ತು ವಕೀಲನ ಪಾತ್ರ ವಹಿಸಿಕೊಳ್ಳುತ್ತದೆ-ತ್ವರಿತ ತೀರ್ಪು ನೀಡುತ್ತದೆ. ಅದು ನಂತರ, ನ್ಯಾಯವನ್ನು ಜಾರಿಗೆ ತರುವ ಪಾತ್ರವಹಿಸುತ್ತದೆ, ನ್ಯಾಯಾಲಯದ ಶಿಕ್ಷೆಯನ್ನು ಕಾರ್ಯರೂಪಕ್ಕೆ ತರುತ್ತದೆ. Alfred Tennyson ಇದನ್ನು ಹೀಗೆ ಬರೆಯುತ್ತಾರೆ,

> . . . ಎಂದಿಗೂ ಸಾಕ್ಷಿಯಾಗಿರುವದು
> ಆತನ ಎದೆಯಲ್ಲಿ ಒಂದು ಮೌನ ನ್ಯಾಯಾಲಯ,
> ತಾನೇ ನ್ಯಾಯಾಧಿಪತಿ ಮತ್ತು ವಕೀಲ ಮತ್ತು ಸ್ವತಃ ಸಲಾಕೆಯ ಹಿಂದೆ ಕೈದಿ.[28]

ಪೌಲನು ಪುನಃ ಇಲ್ಲಿ ಮಾನವರ ಸಾರ್ವತ್ರೀಕವಾದ ಅಪರಾಧವನ್ನು ಸ್ಥಾಪಿಸುತ್ತಿದ್ದಾನೆ. ಎಲ್ಲಾ ಕಡೆಗಳಲ್ಲಿರುವ ಜನರಿಗೆ ಸಹ ಜೀವಿಸುವದಕ್ಕಾಗಿ ಒಂದಿಲ್ಲಾ ಒಂದು ರೀತಿಯ ನೈತಿಕ ಮಾನದಂಡಗಳಿರುತ್ತವೆ. C. S. Lewis ಬರೆದದ್ದೇನೆಂದರೆ, "ಭೂಮಿಯಲ್ಲೆಲ್ಲಾ ಇರುವ ಮಾನವ ಜೀವಿಗಳು ಸಹ ತಾವು ಇಂಥಿಂಥ ರೀತಿಯಲ್ಲಿಯೇ ನಡೆದುಕೊಳ್ಳಬೇಕೆಂಬ ಕುತೂಹಲವುಳ್ಳ ವಿಚಾರ ಹೊಂದಿದ್ದಾರೆ, ಮತ್ತು ಅವರು ಅದನ್ನು ತಮ್ಮಿಂದ ತೊಲಗಿಸಿಕೊಳ್ಳಲು ಸಾಧ್ಯವೇ ಇಲ್ಲ."[29] ಕೆಲವು ಸಾರಿ ಜನರು ಆ ಮಾನದಂಡಗಳ ಪ್ರಕಾರ ಜೀವಿಸುತ್ತಾರೆ, ಆದರೆ ಇನ್ನು ಕೆಲವು ಸಾರಿ ವಿಫಲರಾಗುತ್ತಾರೆ. ಅವರು ವಿಫಲರಾದಾಗ, ಅವರು ತಮ್ಮಷ್ಟಕ್ಕೆ ತಾವೇ ಅಪರಾಧಿಗಳೆಂದು ತೀರ್ಪುಮಾಡಿಕೊಳ್ಳುತ್ತಾರೆ. ಹೀಗೆ, ತತ್ಪರಿಣಾಮವಾಗಿ, ಅವರು ತಮಗೆ ರಕ್ಷಣೆಯ ಅಗತ್ಯವಿದೆ ಎಂಬದನ್ನು ಒಪ್ಪಿಕೊಳ್ಳುತ್ತಾರೆ.

**ವಚನ 16.** ಈ ವಚನವು ನ್ಯಾಯತೀರ್ಪಿನ ಕುರಿತಾಗಿ ಪೌಲನು ತಿಳಿಸುವ ಆಲೋಚನೆಗಳನ್ನು ಮುಕ್ತಾಯಕ್ಕೆ ತರುತ್ತದೆ. ಈ ವಚನವನ್ನು 12ನೇ ವಚನದೊಂದಿಗೆ ಓದಲ್ಪಡಬೇಕೆಂದು ಕೆಲವರು ಭಾವಿಸುತ್ತಾರೆ, ಇನ್ನು ಕೆಲವರು ಅದು ಸಹಜವಾಗಿ 13ನೇ ವಚನವನ್ನು ಅನುಸರಿಸುತ್ತದೆ ಎಂದು ನಂಬುತ್ತಾರೆ. (KJVಯ 2:13-15 ವಚನಗಳು ಪ್ರಕ್ಷೇಪ ಚಿಹ್ನೆಯನ್ನು ಹೊಂದಿದ್ದರೆ, NIVಯ 1:14, 15ಗಳು ಪ್ರಕ್ಷೇಪ ಚಿಹ್ನೆಯನ್ನು ಹೊಂದಿದೆ.) NASBಯಲ್ಲಿ 16ನೇ ವಚನವು ಕೇವಲ 14ನೇ ವಚನದಲ್ಲಿ ಆರಂಭವಾದ ಪದಗುಚ್ಛವನ್ನು ಪೂರ್ತಿಗೊಳಿಸುತ್ತದೆ. ನಾವು ಇದನ್ನು ಯಾವ ರೀತಿಯಲ್ಲಿ ನೋಡಿದರೂ ಸಹ, ಈ ವಚನವು ಇದುವರೆಗೆ ಮಾಡಲ್ಪಟ್ಟ ಚರ್ಚೆಗೆ ಒಂದು ತಕ್ಕದಾದ ಮುಕ್ತಾಯವಾಗಿರುತ್ತದೆ.

ಪೌಲನು **ನಾನು ಸಾರುವ ಸುವಾರ್ತೆಯಲ್ಲಿ ಬೋಧಿಸಿರುವ ಪ್ರಕಾರ ದೇವರು ಯೇಸು ಕ್ರಿಸ್ತನ ಮೂಲಕವಾಗಿ ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನವು ಬರುತ್ತದೆ ಎಂದು ಹೇಳುತ್ತಾನೆ.** "ನಾನು ಸಾರುವ ಸುವಾರ್ತೆ" ಎಂಬ ಪದವು ಅಸಹಜವಾದದು.

ಬಹುಶಃ ಪೌಲನ ಮಾತಿನ ಅರ್ಥವು ಏನಾಗಿತ್ತೆಂದರೆ, ಕರ್ತನಿಂದ ಸುವಾರ್ತೆಯು ತನ್ನ ವಶಕ್ಕೆ ಕೊಡಲ್ಪಟ್ಟ ಬಳಿಕ, ಆತನು ಅದನ್ನು ಒಂದು ಅರ್ಥದಲ್ಲಿ ತನ್ನ ಸ್ವಂತಗೊಳಿಸಿಕೊಂಡಿದ್ದನು. "ನಾನು ಸಾರುವ ಸುವಾರ್ತೆಯ ಪ್ರಕಾರ" ಎಂಬುದರ ಅರ್ಥವು ಒಂದು ದಿನ ಮನುಷ್ಯರು ಸುವಾರ್ತೆಯಲ್ಲಿನ ಸತ್ಯದ ಪ್ರಕಾರವಾಗಿ ನ್ಯಾಯತೀರಿಸಲ್ಪಡುವರೆಂಬ ಅರ್ಥವಾಗಿರಬಹುದು (ನೋಡಿರಿ ಯೋಹಾನ 12:48), ಆದರೆ ಇಲ್ಲಿ ಅದು ಎಲ್ಲಾ ಜನರು ಸಹ ನ್ಯಾಯತೀರಿಸಲ್ಪಡುವರೆಂಬ ಸಂಗತಿಯನ್ನು ಸಹ ಸುವಾರ್ತೆಯ ಕಥೆಯು ಒಳಗೊಂಡಿರುತ್ತದೆಂಬ ಅರ್ಥವನ್ನು ಸೂಚಿಸಬಹುದಾಗಿದೆ.

ಈ ವಚನವು ಕ್ಲುಪ್ತವಾಗಿದೆ, ಆದರೆ ಇದರಲ್ಲಿನ ಅಂಶಗಳು ಅನೇಕರಿಗೆ ಆಶ್ಚರ್ಯವುಂಟು ಮಾಡುತ್ತವೆ. ಉದಾಹರಣೆಗೆ, ಕೆಲವರಿಗೆ *ಯಾರು* ನ್ಯಾಯತೀರಿಸುವರೆಂಬದನ್ನು ಕಲಿತು ಆಶ್ಚರ್ಯಗೊಳ್ಳುವರು: "ದೇವರು . . . ಯೇಸು ಕ್ರಿಸ್ತನ ಮೂಲಕವಾಗಿ ನ್ಯಾಯತೀರಿಸುವನು." ಯೇಸು ತನ್ನ ವೈಯಕ್ತಿಕ ಸೇವೆಯುದ್ದಕ್ಕೂ, ಆತನು ಎಲ್ಲಾ ನ್ಯಾಯತೀರಿಸುವ ಅಧಿಕಾರವನ್ನು ದೇವರು ನನಗೆ ಕೊಟ್ಟಿದ್ದಾನೆಂದು ಕಲಿಸಿದನು (ಯೋಹಾನ 5:22; ನೋಡಿರಿ ಮತ್ತಾಯ 7:21-23; 25:31-33). ಪೇತ್ರನು ಕೊರ್ನೇಲ್ಯನಿಗೆ ಹೇಳಿದ್ದೇನೆಂದರೆ ಯೇಸು "ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ ದೇವರಿಂದ ನೇಮಕವಾದವನು" (ಅಪೊಸ್ತಲರ ಕೃತ್ಯಗಳು 10:42). ಪೌಲನು ಅಥೆನೆಯಲ್ಲಿ ಮಾಡಿದ ಪ್ರಸಂಗದಲ್ಲಿ ಹೇಳಿದ್ದೇನೆಂದರೆ ದೇವರು "ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ" (ಅಪೊಸ್ತಲರ ಕೃತ್ಯಗಳು 17:31).

ಅನೇಕರು ಯೇಸುವಿನ ಬಗ್ಗೆ ಯೋಚಿಸುವಾಗ, ಆತನು ಒಬ್ಬ ಅದ್ಭುತವಾದ ವ್ಯಕ್ತಿ, ಒಬ್ಬ ಬಲವಾದ ಉಪದೇಶಕ ಮತ್ತು ನಮ್ಮ ರಕ್ಷಕನೆಂದು ಯೋಚಿಸುತ್ತಾರೆ-ಆದರೆ ನಮ್ಮ ನ್ಯಾಯಾಧಿಪತಿ ಎಂಬದಾಗಿ ನೋಡುವದಿಲ್ಲ. "ಯಾವನಾದರೂ ಯೇಸುವಿನ ಕುರಿತು ಹೊಂದಿರುವ ಚಿತ್ರಣದಲ್ಲಿ ಆತನನ್ನು ಭೂಮಿಯ ನ್ಯಾಯಾಧಿಪತಿ ಎಂಬದನ್ನು ಸಹ ಸೇರ್ಪಡೆಗೊಳಿಸಿಲ್ಲವಾದರೆ *ಆತನು ರಕ್ಷಕನೆಂಬ ನಿಜವಾದ ಗುರುತಿನ ಬಗ್ಗೆ* ಒಂದು ಗಂಭೀರವಾದ ತಪ್ಪುಗ್ರಹಿಕೆಯಲ್ಲಿ ತೊಳಲಾಡುತ್ತಿದ್ದಾನೆಂದಾಗುತ್ತದೆ."[30]

ಆ ದಿನದಲ್ಲಿ ಪ್ರಕಟವಾಗುವ*ದೇನೆಂಬುದನ್ನು* ತಿಳಿಯುವಾಗ ಸಹ ಕೆಲವರು ಆಶ್ಚರ್ಯಗೊಳ್ಳುವರು: "ದೇವರು *ಮನುಷ್ಯರ ಗುಟ್ಟುಗಳನ್ನು* ಹಿಡಿದು ನ್ಯಾಯವಿಚಾರಿಸುವನು." ಅನುವಾದಿಸಲ್ಪಟ್ಟ "ಗುಟ್ಟುಗಳು" ಎಂಬ (κρυπτός, *kruptos*) ಪದವು ಬಹುವಚನವಾಗಿದ್ದು "ರಹಸ್ಯ" ಅಥವಾ "ಅಡಗಿಸಲ್ಪಟ್ಟ ಸಂಗತಿಗಳು" ಎಂಬರ್ಥವಾಗಿದೆ. ಇದು ಬೇರೆಯವರಿಗೆ ತಿಳಿಯದ ಯಾವದೇ ಸಂಗತಿಯನ್ನು ಸೂಚಿಸುತ್ತದೆ: ನಮ್ಮ ಆಲೋಚನೆಗಳು (NCV) ಮತ್ತು ಉದ್ದೇಶಗಳು (LB), ಕೇಳಿಸದ ಮಾತುಗಳು, ಮತ್ತು ರಹಸ್ಯದಲ್ಲಿ ಮಾಡಿದ ಕೃತ್ಯಗಳು (NLT). ಯೇಸು ಹೇಳಿದ್ದೇನೆಂದರೆ "ಮರೆಯಾಗಿರುವ ಯಾವದೂ ವ್ಯಕ್ತವಾಗದೆ ಇರುವದಿಲ್ಲ ;ಹೊರಪಡದ ರಹಷ್ಯವೂ ಇಲ್ಲ" (ಲೂಕ 12:2; ನೋಡಿರಿ ಪ್ರಸಂಗಿ 12:14).

## ಯೆಹೂದ್ಯರ ಅವಿಧೇಯತೆ (2:17-24)

**[17]ನೀನು ಯೆಹೂದ್ಯನೆನಿಸಿಕೊಂಡವನೂ ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನೂ ದೇವರ ವಿಷಯವಾಗಿ [18]ಹೊಗಳಿಕೊಳ್ಳುವವನೂ ಆತನ ಚಿತ್ತವನ್ನು ಬಲ್ಲವನೂ ಧರ್ಮಶಾಸ್ತ್ರದ ಉಪದೇಶವನ್ನು ಹೊಂದಿ ಇದು ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವವನೂ ಆಗಿದ್ದೀ. [19]ಧರ್ಮಶಾಸ್ತ್ರದಲ್ಲಿ ಜ್ಞಾನಸತ್ಯಗಳ ಸ್ವರೂಪವೇ ನನಗೆ ಇರುವದರಿಂದ ಕುರುಡರಿಗೆ ದಾರಿ ತೋರಿಸುವವನೂ [20]ಕತ್ತಲೆಯಲ್ಲಿರುವವರಿಗೆ ಬೆಳಕೂ ತಿಳುವಳಿಕೆಯಿಲ್ಲದವರಿಗೆ ಶಿಕ್ಷಕನೂ ಬಾಲಕರಿಗೆ ಉಪಾಧ್ಯಾಯನೂ ಆಗಿದ್ದೇನೆಂದು ನಂಬಿಕೊಂಡಿದ್ದೀ. [21]ಹೀಗಿರಲಾಗಿ ಮತ್ತೊಬ್ಬನಿಗೆ ಉಪದೇಶ ಮಾಡುವ ನೀನು ನಿನಗೆ ಉಪದೇಶ ಮಾಡಿಕೊಳ್ಳದೆ ಇದ್ದೀಯೋ? ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತೀಯೋ? [22]ಹಾದರ ಮಾಡಬಾರದೆಂದು ಹೇಳುವ ನೀನು ಹಾದರ ಮಾಡುತ್ತೀಯೋ? ಮೂರ್ತಿಗಳಲ್ಲಿ ಅಸಹ್ಯಪಡುತ್ತಿರುವ ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ? [23]ಧರ್ಮಶಾಸ್ತ್ರದಲ್ಲಿ ಅಭಿಮಾನಿಯಾಗಿರುವ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆದು ದೇವರನ್ನು ಅವಮಾನಪಡಿಸುತ್ತೀಯೋ? [24]ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ ಗುರಿಯಾಗುತ್ತಿದೆಂದು ಬರೆದದೆಯಲ್ಲಾ.**

ಈ ಭಾಗದಲ್ಲಿ, ಯೆಹೂದ್ಯರು ಆತ್ಮೀಕವಾಗಿಯೂ ಧಾರ್ಮಿಕವಾಗಿಯೂ ತಮ್ಮನ್ನು ಅನ್ಯಜನರಿಗಿಂತ ಉತ್ತಮರೆಂದು ಎಣಿಸಿಕೊಂಡರು ಎಂಬ ವಾಸ್ತವಾಂಶವನ್ನು ಪೌಲನು ಉದ್ದೇಶಿಸಿ ಮಾತಾಡುತ್ತಿದ್ದಾನೆ. ಅಪೊಸ್ತಲನು ನಂತರ, ಯೆಹೂದ್ಯರು ಗರ್ವಪಡುವ ಅಂತಸ್ತನ್ನೇ ಅವರ ವಿರುದ್ಧವಾಗಿ ಉಪಯೋಗಿಸಿ ಅವರು ಪಾಪ ಮಾಡಿದವರೆಂಬುದಾಗಿ ದೋಷಹೊರಿಸುತ್ತಾನೆ.

2:17-20 ರಲ್ಲಿ, ಯೆಹೂದ್ಯರು ಆನಂದಿಸಿದಂಥ ಹಲವಾರು ಅನುಕೂಲತೆಗಳನ್ನು ಪಟ್ಟಿಮಾಡುತ್ತಾನೆ. ಪೌಲನು ಇಲ್ಲಿ ಅವರನ್ನು ವ್ಯಂಗ್ಯ ಮಾಡುತ್ತಿದ್ದಾನೆಂದು ಕೆಲವರು ಭಾವಿಸುತ್ತಾರೆ, ಆದರೆ ಇದು ಆತನ ಸ್ವಭಾವವಲ್ಲವೆಂದು ಸ್ಪಷ್ಟವಾಗುತ್ತದೆ, ಯಾಕೆಂದರೆ ಆತನು ಇಲ್ಲಿ ಯೆಹೂದಿ ಕ್ರೈಸ್ತರ ಹಾಗೂ ಅನ್ಯಜನಾಂಗದ ಕ್ರೈಸ್ತರ ಮಧ್ಯದಲ್ಲಿನ ಸಂಬಂಧವನ್ನು ಸುಧಾರಿಸುವ ಬಯಕೆಯಲ್ಲಿದ್ದನು. ಪೌಲನು ಯೆಹೂದ್ಯರ ವಿಷಯವಾಗಿ ಹೇಳಿದ್ದೆಲ್ಲವೂ ಸತ್ಯವಾಗಿದೆ ಅಥವಾ ಸತ್ಯವಾಗಿದ್ದಿರಬಹುದಾಗಿದೆ.

2:21-24 ರಲ್ಲಿ, ಪೌಲನು ಯೆಹೂದ್ಯರೆಡೆಗೆ ಕೆಲವು ಮನಸ್ಸಿಗೆ ಚುಚ್ಚುವಂಥ ಪ್ರಶ್ನೆಗಳನ್ನು ಹಾರಿ ಬಿಡುತ್ತಾನೆ. ಅವರು ದೇವರಿಂದ ಆದುಕೊಳ್ಳಲ್ಪಟ್ಟವರಾಗಿ ಧರ್ಮಶಾಸ್ತ್ರದಲ್ಲಿ ಆತನಿಂದ ವಿಶೇಷ ಪ್ರಕಟಣೆಯನ್ನು ಹೊಂದಿದವರಾಗಿದ್ದರೂ ದೇವರ ಇಚ್ಛೆಗಳಂತೆ ಬಾಳುವದಕ್ಕೆ ಅವರು ವಿಫಲರಾಗಿದ್ದರು. ಯೆಹೂದ್ಯರು ತಾವು ಬೋಧಿಸುವದಕ್ಕೂ ತಮ್ಮ ಜೀವಿತಕ್ಕೂ ಹೊಂದಾಣಿಕೆಯಿಲ್ಲದವರಾಗಿ ಜೀವಿಸುತ್ತಿದ್ದರು. ದೇವರಿಗೆ ಮಹಿಮೆಯನ್ನು ತರುವ ಬದಲಾಗಿ, ಅವರ ಕೃತ್ಯಗಳು ವಾಸ್ತವದಲ್ಲಿ ಅನ್ಯಜನರ ಮುಂದೆ ಆತನಿಗೆ ಅವಮಾನವನ್ನುಂಟು ಮಾಡಿದ್ದವು.

**ವಚನ 17.** ಗ್ರೀಕ್ ವಾಕ್ಯದಲ್ಲಿ, ಈ ವಚನವು ಅನುವಾದಿಸಲ್ಪಟ್ಟ **ಪಕ್ಷದಲ್ಲಿ** (εἰ, *ei*) ಎಂಬ ಪದದಿಂದ ಆರಂಭಗೊಳ್ಳುತ್ತದೆ, ಅದು "ಪ್ರಥಮ ದರ್ಜೆಯ ಶರತ್ತಿನ ವಾಕ್ಯವನ್ನು"

ಪರಿಚಯಿಸುತ್ತದೆ (ಶರತ್ತು ನೆರವೇರಿಸಲ್ಪಟ್ಟಿದೆ ಎಂದು *ಕಲ್ಪನೆಯನ್ನು* ತರುವ ಒಂದು ವ್ಯಾಕರಣಾತ್ಮಕ ವಾಕ್ಯ).[31] ಆದುದರಿಂದ, ಈ ವಾಕ್ಯದಲ್ಲಿ, *ei* ಎಂಬದನ್ನು "ರಿಂದ" (ನಿಮಿತ್ತದಿಂದ) ಎಂದು ಅನುವಾದಿಸಬಹುದು. ತತ್ಪರಿಣಾಮವಾಗಿ, ಇಲ್ಲಿ ಪೌಲನು ಹೇಳುತ್ತಿರುವದೇನೆಂದರೆ, "ನೀನು 'ಯೆಹೂದ್ಯ'ನೆಂಬ ಹೆಸರನ್ನು ಹೊಂದಿದವನಾದ್ದ*ರಿಂದ* ಮತ್ತು ನೀನು ಧರ್ಮಶಾಸ್ತ್ರವನ್ನು ಅವಲಂಬಿಸುವವನಾದ್ದ*ರಿಂದ" ಮತ್ತು* ನೀನು ದೇವರಲ್ಲಿ ಹೊಗಳಿಕೊಳ್ಳುತ್ತಿಯಾದ್ದ*ರಿಂದ"* ಮತ್ತು ಹೀಗೆ 20 ನೇ ವಚನದ ತನಕ ಮುಂದುವರೆಯುತ್ತದೆ. ವಚನ 17 ರಿಂದ 21 ರ ವರೆಗೆ ಗ್ರೀಕ್ ಹಾಗೂ NASBಯಲ್ಲಿ ಒಂದೇ ವಾಕ್ಯಸಾಲಾಗಿ ಇರುತ್ತದೆ.

ಯೆಹೂದ್ಯರಿಗಿದ್ದ ಅನುಕೂಲತೆಗಳಲ್ಲಿ ಒಂದೆಂದರೆ ಅವರ ಧಾರ್ಮಿಕ ಪರಂಪರೆ. ಇದು **ನೀನು "ಯೆಹೂದ್ಯ" ನೆನಿಸಿಕೊಂಡವನು** ಎಂಬ ಮಾತುಗಳಲ್ಲಿ ವ್ಯಕ್ತವಾಗುತ್ತದೆ. "ಯೆಹೂದ್ಯ" ಎಂಬ ಬಿರುದು ಪ್ರಥಮವಾಗಿ 2 ಅರಸು 16:6 (ನೋಡಿರಿ KJV) ರಲ್ಲಿ ಕಂಡುಬರುತ್ತದೆ. ಅದು ಮೂಲತಃ ದಕ್ಷಿಣದ ರಾಜ್ಯವಾದ ಯೆಹೂದದಲ್ಲಿನ ನಿವಾಸಿಗಳನ್ನು ಸೂಚಿಸಲು ಉಪಯೋಗಿಸಲ್ಪಟ್ಟಿತು. ಬಾಬಿಲೋನಿಗೆ ಸೆರೆಯಾಳುಗಳಾಗಿ ಒಯ್ಯಲ್ಪಟ್ಟ ಬಳಿಕ, ಅದು ಸಾಮಾನ್ಯ ಅರ್ಥದಲ್ಲಿ ಇಡೀ ಇಸ್ರಾಯೇಲರನ್ನು ಕರೆಯಲು ಉಪಯೋಗಿಸಲ್ಪಟ್ಟಿತು (ಎಜ್ರನು 5:1; ನೆಹೆಮೀಯ 13:23), ಬಹುಶಃ ಸೆರೆವಾಸದಿಂದ ಹಿಂದಿರುಗಿದವರಲ್ಲಿ ಬಹು ಮಂದಿ ದಕ್ಷಿಣ ರಾಜ್ಯಕ್ಕೆ ಸೇರಿದವರಾಗಿದ್ದರಿಂದ ಈ ಹೆಸರಿನಿಂದ ಅವರನ್ನು ಕರೆದಿರಬಹುದು. ಹೊಸ ಒಡಂಬಡಿಕೆಯ ಕಾಲದ ಹೊತ್ತಿಗೆ, "ಯೆಹೂದ್ಯರು" ಎಂಬದು ಇಸ್ರಾಯೇಲ್ಯರಿಗೆ ಅವರೇ ಆಯ್ಕೆಮಾಡಿಕೊಳ್ಳುವ ಬಿರುದಾಗಿ ಮಾರ್ಪಟ್ಟಿತ್ತು (ನೋಡಿರಿ 1:16; 2:9, 10, 17, 28, 29; 3:1, 9, 29; 9:24; 10:12). ಅವರು ಆ ಹೆಸರನ್ನು ಹೆಮ್ಮೆಯಿಂದ ಆಡಂಬರದಿಂದ ಪ್ರದರ್ಶಿಸುತ್ತಿದ್ದರು.

ಎರಡನೆಯ ಅನುಕೂಲ ಏನಾಗಿತ್ತೆಂದರೆ, ದೇವರು ಯೆಹೂದ್ಯರಿಗೆ ಧರ್ಮಶಾಸ್ತ್ರವನ್ನು ಕೊಟ್ಟಿದ್ದನು. ಪೌಲನು ಹೇಳಿದನು, [ನೀನು] **ಧರ್ಮಶಾಸ್ತ್ರದಲ್ಲಿ ಭರವಸವಿಟ್ಟವನು.** ಗ್ರೀಕ್ ವಾಕ್ಯದಲ್ಲಿ "ಧರ್ಮಶಾಸ್ತ್ರ" ಎಂಬುದರ ಮುಂಚೆ ಯಾವದೇ ನಿರ್ದಿಷ್ಟವಾದ ಉಪಪದ ("the") ಉಪಯೋಗಿಸಲ್ಪಟ್ಟಿಲ್ಲ, ಆದರೆ *ಧರ್ಮಶಾಸ್ತ್ರ* (*nomos*) ಮುಂದೆ ನಿಖರ ಲೇಖನ ("the") ಇರುವದಾಗಿ ಅಥವಾ ಇಲ್ಲದಿರುವದಾಗಲಿ ಅದರ ಅರ್ಥವನ್ನು ನಿರ್ಧರಿಸುವದಿಲ್ಲ. ಈ ನಿರ್ದಿಷ್ಟವಾದ ಸನ್ನಿವೇಶದಲ್ಲಿ, ಈ ಪದವು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. NASB ಆವೃತ್ತಿಯು ಇದನ್ನು ದೊಡ್ಡ "L" ಉಪಯೋಗಿಸುವ ಮೂಲಕ ತೋರ್ಪಡಿಸುತ್ತದೆ. ಭೂಮಿಯ ಮೇಲಿನ ಎಲ್ಲಾ ಜನಾಂಗಗಳನ್ನು ಬಿಟ್ಟು ತಮಗೆ ದೇವರ ವಿಶೇಷ ದಸ್ತಾವೇಜು (ಗ್ರಂಥ): ಲಿಖಿತ ಧರ್ಮಶಾಸ್ತ್ರ ಕೊಡಲ್ಪಟ್ಟಿದೆ ಎಂಬದರಲ್ಲಿ ಯೆಹೂದ್ಯರು ಬಹಳ ಗರ್ವಪಡುತ್ತಿದ್ದರು.

ಮೋಶೆಯ ಧರ್ಮಶಾಸ್ತ್ರವನ್ನು ಹೊಂದಿರುವದು ಯೆಹೂದ್ಯರ ಶ್ರೇಷ್ಠ ಆಶೀರ್ವಾದಗಳಲ್ಲೊಂದಾಗಿತ್ತು. ಅವರು ಅದರಲ್ಲಿ *ಭರವಸವಿಟ್ಟಿದ್ದರು.* ಅನುವಾದಿಸಲ್ಪಟ್ಟ "ಭರವಸವಿಟ್ಟವನು" (ἐπαναπαύω, *epanapauō*) ಎಂಬದು ಒಂದು ಸಂಯುಕ್ತ ಪದವಾಗಿದ್ದು "ಆತುಕೊ" (ἀναπαύω, *anapauō*) "ಮೇಲೆ" (ἐπί, *epi*) ಎಂದರ್ಥವಾಗಿದೆ. ಯೆಹೂದ್ಯರು ಧರ್ಮಶಾಸ್ತ್ರದ ಮೇಲೆ "ಆತುಕೊಂಡಿದ್ದರು"—ವಿಶೇಷವಾಗಿ ಬೇರೆ ಯಾರ

ಬಳಿಯೂ ಇಲ್ಲ, ಕೇವಲ ತಮ್ಮ ಬಳಿಯಲ್ಲಿ ಇದೆ ಎಂಬ ಅಂಶದ ಮೇಲೆ ಆತುಕೊಂಡಿದ್ದರು.

ಪೌಲನು ಈಗಾಗಲೇ ಚರ್ಚಿಸಿದ ಸಂಗತಿಗಳೊಂದಿಗೆ ನಿಕಟ ಸಂಬಂಧ ಹೊಂದಿರುವಂತ ಅವರಿಗಿದ್ದ ಮೂರನೆಯ ಅನುಕೂಲತೆ ಬಗ್ಗೆ ಪ್ರಸ್ತಾಪಿಸುತ್ತಾನೆ: ದೇವರ ಸ್ವಕೀಯ ಪ್ರಜೆಯಾಗಿ ಆತನ ಸಂಗಡವಿದ್ದ ಅವರ ಅಪೂರ್ವ ಬಾಂಧವ್ಯ. ಆತನು ಹೀಗೆ ಬರೆದನು, (ನೀನು) **ದೇವರ ವಿಷಯವಾಗಿ ಹೊಗಳಿಕೊಳ್ಳುವವನು.** ಅನುವಾದಿಸಲ್ಪಟ್ಟ "ಹೊಗಳಿಕೊಳ್ಳು" (καυχάομαι, *kauchaomai*) ಎಂಬುದರ ಅರ್ಥವು "ಮಹಿಮೆ," "ರಲ್ಲಿ ಕೊಂಡಾಡು (ಅಥವಾ ಸಂಭ್ರಮಿಸು)"[32] (ನೋಡಿರಿ 5:11). ತನ್ನಲ್ಲಿಯೇ ಮಹಿಮೆ ಪಟ್ಟುಕೊಳ್ಳದೆ ದೇವರಲ್ಲಿಯೆ ಮಹಿಮೆಪಟ್ಟುಕೊಳ್ಳುವದು ನಿಜ ಆರಾಧನೆಯ ಜೀವಾಳ ಆಗಿದೆ (ನೋಡಿರಿ ಯೆರೆಮೀಯ 9:23, 24). ಹೇಗೂ, ರೋಮಾ 2:17 ರಲ್ಲಿ ಹೊಗಳಿಕೊಳ್ಳುವಿಕೆಯು ಅಥವಾ ಹೆಚ್ಚಳಪಟ್ಟುಕೊಳ್ಳುವಿಕೆಯು ದೇವರಿಗಿಂತಲೂ ಸ್ವಾರ್ಥದಿಂದ ತುಂಬಿತ್ತು. ಯೆಹೂದ್ಯನ ಹೆಚ್ಚಳಪಟ್ಟುಕೊಳ್ಳುವಿಕೆ ಯಾವದರಲ್ಲಿ ಆಗಿತ್ತೆಂದರೆ, "ತನಗೆ ತಿಳಿದಿದ್ದ ದೇವರಲ್ಲಿ ಮತ್ತು ಆ ದೇವರನ್ನು ಬೇರೆ ಯಾರೂ ಬಲ್ಲವರಾಗಿರುವದಿಲ್ಲ ಎಂದು ಭಾವಿಸಿದ್ದನು."[33] NIVಯಲ್ಲಿ, "ನೀನು . . . ದೇವರೊಂದಿಗಿನ ನಿನ್ನ ಸಂಬಂಧದ ಕುರಿತು ಹೊಗಳಿಕೊಳ್ಳುತ್ತೀ."

**ವಚನ 18.** ಯೆಹೂದ್ಯರು ಕೇವಲ ಧರ್ಮಶಾಸ್ತ್ರವನ್ನು ಹೊಂದಿರಲಿಲ್ಲ; ಅವರಿಗೆ ಅದರ ಉಪದೇಶದ ಬಗ್ಗೆ ಅರಿವು ಹೊಂದಿದ್ದರು. ಪೌಲನು ಹೀಗೆ ಹೇಳಿದನು, (ನೀನು) **ಆತನ ಚಿತ್ತವನ್ನು ಬಲ್ಲವನೂ . . . , ಧರ್ಮಶಾಸ್ತ್ರದಿಂದ ಉಪದೇಶವನ್ನು ಹೊಂದಿದವನೂ.** ಗ್ರೀಕ್ ವಾಕ್ಯದಲ್ಲಿ ಕೇವಲ "ಚಿತ್ತ" ಎಂದಿರುತ್ತದೆ, ಆದರೆ ವಾಕ್ಯದ ಸನ್ನಿವೇಶವು ಅದನ್ನು *ದೇವರ ಚಿತ್ತ* ಎಂದು ದೃಢಪಡಿಸುತ್ತದೆ. "ಉಪದೇಶವನ್ನು ಹೊಂದಿ" ಎಂಬುದು (κατηχέω, *katēcheō*) ಎಂಬದರ ಅನುವಾದವಾಗಿದೆ, ಈ ಪದದಿಂದಲೇ ನಮಗೆ "catechism" (ಪ್ರಶ್ನೋತ್ತರ ಶಿಕ್ಷಣ) ಎಂಬದು ಬಂದಿರುತ್ತದೆ. ಇದರ ಅರ್ಥವು ಮೌಖಿಕವಾಗಿ ಉಪದೇಶಿಸಲ್ಪಡುವದು ಎಂದಾಗಿದೆ.[34] ವಾಕ್ಯಭಾಗಗಳನ್ನು ಕೈಯಿಂದ ಬರೆದು ನಕಲು ಮಾಡಬೇಕಾಗಿತ್ತಾದ್ದರಿಂದ, ಬಹಳಷ್ಟು ಜನರ ಬಳಿಯಲ್ಲಿ ವೈಯಕ್ತಿಕ ಪ್ರತಿಗಳಿರಲಿಲ್ಲ. ಮತ್ತೊಬ್ಬರು ಅವರಿಗೆ ಅವುಗಳನ್ನು ಓದಿ ತಿಳಿಸುವ ಮೂಲಕವಾಗಿ ಅವರು ಕಲಿತುಕೊಳ್ಳಬೇಕಿತ್ತು (Goodspeed).

ಅಲ್ಲದೆ, ಅವರು ಧರ್ಮಶಾಸ್ತ್ರವನ್ನು ಕಲಿತಿದ್ದರು ಮಾತ್ರವಲ್ಲದೆ, ಅವರು ಅದನ್ನು ಅಳವಡಿಸಿಕೊಳ್ಳಲು ಸಹ ತಿಳಿದಿದ್ದರು. ಅವರು ಇದು ತಕ್ಕದ್ದು ಅದು ತಕ್ಕದ್ದಲ್ಲವೆಂದು ವಿವೇಚಿಸುವವರು ಆಗಿದ್ದರು. ಈ ಪದಗುಚ್ಛವು ಸ್ವಲ್ಪ ಅಸ್ಪಷ್ಟವಾಗಿದೆ. ಅನುವಾದಿಸಲ್ಪಟ್ಟ "ವಿವೇಚಿಸು" (δοκιμάζω, *dokimazō*) ಎಂಬದರ ಪ್ರಾಥಮಿಕ ಅರ್ಥವು "ಪರೀಕ್ಷಿಸು" ಎಂದಾಗಿರುತ್ತದೆ, ಆದರೆ ಅದಕ್ಕೊಂದು ಎರಡನೆಯ ಅರ್ಥವಿದ್ದು ಅದು ಅನುಮೋದಿಸು ಎಂದಾಗಿರುತ್ತದೆ.[35] "ತಕ್ಕದೆಂದು" (διαφέρω, *diapherō*) ಅನುವಾದಿಸಲ್ಪಟ್ಟ ಪದವು "ವ್ಯತ್ಯಾಸವಾದದ್ದು" ಎಂದರ್ಥವನ್ನು ನೀಡುತ್ತದೆ, ಆದರೆ ಅದು ಯಾವದು ಉತ್ತಮವಾದದ್ದು ಎಂಬದನ್ನು ಸಹ ಸೂಚಿಸಬಹುದಾಗಿದೆ.[36] ಈ ಎರಡು ಪದಗಳನ್ನು ಒಂದಾಗಿ ಜೋಡಿಸುವದಾದರೆ, ಈ ಪದಗುಚ್ಛವು ವ್ಯತ್ಯಾಸವುಳ್ಳ ಸಂಗತಿಗಳನ್ನು ಪರೀಕ್ಷಿಸುವಂತ ಸಾಮರ್ಥ್ಯ-ತಪ್ಪು ಹಾಗೂ ಸರಿ ಯಾವದೆಂದು ತಿಳಿಯುವ ಸಾಮರ್ಥ್ಯ

ಎಂಬ ಅರ್ಥವನ್ನು ಕೊಡುತ್ತದೆ (NEB). ಅಲ್ಲದೆ ಇದು ಯಾವದು ಒಳ್ಳೇದು, ಉತ್ತಮ ಹಾಗೂ ಅತ್ಯುತ್ತಮ ಎಂಬದನ್ನು ವಿವೇಚಿಸಿ ಆರಿಸಿಕೊಳ್ಳುವ (NRSV)-ಉನ್ನತವಾದದ್ದನ್ನು ಅನುಮೋದಿಸುವ ಶಕ್ತಿಯನ್ನು ಸಹ ಸೂಚಿಸುತ್ತದೆ (NIV).[37] ಈ ಪದಗಳ ನಿಖರವಾದ ಅರ್ಥವು ಏನೇ ಆಗಿದ್ದರೂ, ಯೆಹೂದ್ಯರು ತಾವು ಧರ್ಮಶಾಸ್ತ್ರದಿಂದ ಕಲಿತುಕೊಂಡ ಸಂಗತಿಗಳನ್ನು ಜೀವನಕ್ಕೆ ಅನ್ವಯಿಸಿಕೊಳ್ಳುವದನ್ನು ಕಲಿತಿದ್ದರು ಎಂಬದನ್ನು ಈ ಪದಗಳು ಸೂಚಿಸುತ್ತವೆಂಬದಂತೂ ನಿಜ.

**ವಚನಗಳು 19, 20.** ಅವರ ಆಶೀರ್ವಾದಗಳ ಕಾರಣದಿಂದ, ಯೆಹೂದ್ಯರು **ನಂಬಿಕೊಂಡಿದ್ದರು** (ಆತ್ಮವಿಶ್ವಾಸ). "ನಂಬಿಕೊಂಡಿದ್ದಿ" ಎಂಬುದು πείθω (*peithō*) ಎಂಬ ಮೂಲ ಪದದಿಂದ ಬಂದಿದೆ, ಅದರ ಅರ್ಥವು "ಮನವೊಲಿಸು." ಯೆಹೂದ್ಯರು ತಾವು ಸರಿ ಇದ್ದಾರೆ ಮತ್ತು ಕೆಲವೊಂದು ಪವಿತ್ರ ಕರ್ತವ್ಯಗಳನ್ನು ನೆರವೇರಿಸುವದಕ್ಕೆ ಬೇಕಾದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದಾರೆಂಬ ಬಗ್ಗೆ ಸಂಪೂರ್ಣವಾಗಿ ಮನವೊಲಿಸಲ್ಪಟ್ಟಿದ್ದರು.

ಯೆಹೂದ್ಯರು ತಮ್ಮನ್ನು **ಕುರುಡರಿಗೆ ದಾರಿ ತೋರಿಸುವವರೂ ಕತ್ತಲೆಯಲ್ಲಿರುವವರಿಗೆ ಬೆಳಕೂ** ಎಂಬದಾಗಿ ಭಾವಿಸಿಕೊಂಡಿದ್ದರು. 1ನೇ ಅಧ್ಯಾಯದಲ್ಲಿ, ಪೌಲನು ಅನ್ಯಜನರನ್ನು ಬಣ್ಣಿಸುವಾಗ ಅವರ ಹೃದಯಗಳು "ಕತ್ತಲಾದವು" ಎಂದು ಹೇಳಿದ್ದನು (1:21). 2:19 ರಲ್ಲಿನ "ಕತ್ತಲು" ಎಂಬ ನಾಮಪದವು (σκότος, *skotos*) 1:21 ರಲ್ಲಿನ "ಕತ್ತಲಾದವು" (σκοτίζω, *skotizō*) ಎಂಬ ಕ್ರಿಯಾಪದಕ್ಕೆ ಸಂಬಂಧ ಹೊಂದಿದೆ. ಪ್ರವಾದಿ ಯೆಶಾಯನ ಮೂಲಕ, ದೇವರು ತನ್ನ ಜನರಿಗೆ ಹೇಳಿದ್ದೇನೆಂದರೆ, "ನೀನು ಕುರುಡರಿಗೆ ಕಣ್ಣು ಕೊಟ್ಟು, ಬಂದಿಗಳನ್ನು ಹೊರಗೆ ಕರತರಬೇಕು ಎಂದು ಯೆಹೋವನೆಂಬ ನಾನು ನನ್ನ ಧರ್ಮದ ಸಂಕಲ್ಪಾನುಸಾರವಾಗಿ ನಿನ್ನನ್ನು ಕರೆದು ಕೈಹಿಡಿದು ಕಾಪಾಡಿ ನನ್ನ ಜನರಿಗೆ ಒಡಂಬಡಿಕೆಯ ಆಧಾರವನ್ನಾಗಿಯೂ ಅನ್ಯಜನಗಳಿಗೆ ಬೆಳಕನ್ನಾಗಿಯೂ ನೇಮಿಸಿದ್ದೇನೆ" (ಯೆಶಾಯ 42:6, 7; ಒತ್ತಿ ಹೇಳಿದ್ದು ನನ್ನದು). ಪ್ರಥಮ ಶತಮಾನದಲ್ಲಿ ಕೆಲವು ಯೆಹೂದ್ಯರು ಅನ್ಯಜನರನ್ನು ಯೆಹೂದಿ ಮತಕ್ಕೆ ಧರ್ಮಾಂತರ ಮಾಡುತ್ತಿದ್ದರೆಂಬುದು ಮತ್ತಾಯ 23:15 ರಲ್ಲಿ ಯೇಸುವಿನ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಹೇಗೂ, ಅವರ ಕಪಟತನದ ಕಾರಣದಿಂದಾಗಿ, ಯೇಸು ಅವರನ್ನು "ಕುರುಡು ಮಾರ್ಗದರ್ಶಕರು" ಎಂದು ಖಂಡಿಸಿದನು (ಮತ್ತಾಯ 23:16, 24).

ಅಲ್ಲದೆ ಯೆಹೂದ್ಯರು ತಮ್ಮನ್ನು **ತಿಳುವಳಿಕೆಯಿಲ್ಲದವರಿಗೆ ಶಿಕ್ಷಕರೂ, ಬಾಲಕರಿಗೆ ಉಪಾಧ್ಯಾಯರೂ ಆಗಿದ್ದೇವೆ** ಎಂದು ಭಾವಿಸಿಕೊಂಡಿದ್ದರು. 2:20 ರಲ್ಲಿ "ತಿಳುವಳಿಕೆಯಿಲ್ಲದವರು" (ἄφρων, *aphrōn*) ಎಂಬದಕ್ಕೆ ಉಪಯೋಗಿಸಲ್ಪಟ್ಟಿರುವ ಪದವು 1:21, 22 ರಲ್ಲಿ ಅನುವಾದಿಸಲ್ಪಟ್ಟಿರುವ "ವಿವೇಕವಿಲ್ಲದ" ಮತ್ತು "ಹುಚ್ಚರು" ಎಂಬುದಕ್ಕಿಂತ ವ್ಯತ್ಯಾಸವಾಗಿರುತ್ತದೆ, ಆದರೆ ಇಲ್ಲಿ ಅರ್ಥವು ಒಂದೇ ಆಗಿರುತ್ತದೆ. "ಬಾಲಕರಿಗೆ" (νήπιος, *nēpios*) ಎಂಬದಕ್ಕೆ ಗ್ರೀಕ್ ಪದದ ಮೂಲ ಅರ್ಥವು "ಮಾತಾಡುವ ಶಕ್ತಿಯಿಲ್ಲದವರು" ಎಂದಾಗಿದ್ದು ಶಿಶುಗಳನ್ನು ಸೂಚಿಸುತ್ತದೆ. ಕ್ರಮೇಣದಲ್ಲಿ, ಇದು ಕೂಸುಗಳು, ಮಕ್ಕಳು, ಅಥವಾ ಯುವಜನರಿಗೆ ಸಹ ಅನ್ವಯಿಸಲ್ಪಟ್ಟಿತು (ನೋಡಿರಿ KJV; NIV; RSV). *Nēpios* ಎಂಬ ಪದವನ್ನು ಕೆಲವು ಸಾರಿ ಹೊಸ ಒಡಂಬಡಿಕೆಯಲ್ಲಿ ಆತ್ಮೀಕವಾಗಿ ಪರಿಪಕ್ವವಿಲ್ಲದಿರುವ ಕ್ರೈಸ್ತರನ್ನು ಸೂಚಿಸುವದಕ್ಕಾಗಿ ಸಹ ಉಪಯೋಗಿಸ

ಲ್ಪಟ್ಟಿದೆ (1 ಕೊರಿಂಥ 3:1; ಇಬ್ರಿಯ 5:13). ರೋಮಾ 2:20 ರಲ್ಲಿ, ಅದು ಬಹುಶಃ ಆತ್ಮೀಕವಾಗಿ ಪರಿಪಕ್ವವಿಲ್ಲದ *ಅನ್ಯಜನರನ್ನು* ಸೂಚಿಸುತ್ತಿರಬಹುದಾಗಿದೆ. ಯೆಹೂದ್ಯರು ತಮ್ಮನ್ನು ಮಾರ್ಗದರ್ಶಿಗಳು, ಬೆಳಕು, ತಿದ್ದುವವರು ಮತ್ತು ಶಿಕ್ಷಕರು ಎಂದು ಪರಿಗಣಿಸಿಕೊಂಡಿದ್ದರು ಮತ್ತು ಅವರು ಅನ್ಯಜನರನ್ನು ಕುರುಡರು ಮತ್ತು ಕತ್ತಲೆಯಲ್ಲಿರುವವರು, ತಿಳುವಳಿಕೆಯಿಲ್ಲದವರು ಹಾಗೂ ಪರಿಪಕ್ವವಿಲ್ಲದಿರುವವರು ಎಂಬದಾಗಿ ವರ್ಗೀಕರಿಸಿದ್ದೀರಬಹುದಾಗಿದೆ.

ಯೆಹೂದ್ಯರಿಗೆ **ಧರ್ಮಶಾಸ್ತ್ರದಲ್ಲಿ ಜ್ಞಾನ, ಸತ್ಯಗಳ ಸ್ವರೂಪವೇ** ಇರುವವರಾಗಿದ್ದರು. "ಸ್ವರೂಪ" (μόρφωσις, *morphōsis*) ಎಂಬುದು *morphē* (μορφή) ಎಂಬ ಪದಕ್ಕೆ ಸಂಬಂಧಿಸಿದ್ದಾಗಿದೆ, ಅದು "ಒಂದು ವ್ಯಕ್ತಿ ಅಥವಾ ಸಂಗತಿಯ *ಸಾರಭೂತವಾದ ಸ್ವಭಾವ"* ವನ್ನು ಸೂಚಿಸುತ್ತದೆ.[38] ಮೋಶೆಯ ಧರ್ಮಶಾಸ್ತ್ರವು ಹಳೆ ಒಡಂಬಡಿಕೆಯ ಕಾಲಗಳಲ್ಲಿ ಜ್ಞಾನ ಮತ್ತು ಸತ್ಯದ ಮೂಲವಾಗಿತ್ತು.

ವಚನ 19 ಮತ್ತು 20ರ ವಿಷಯದಲ್ಲಿ ಎರಡು ವಾಸ್ತವಗಳನ್ನು ಅರ್ಥಮಾಡಿಕೊಳ್ಳ ತಕ್ಕದ್ದು. ಮೊದಲನೆಯದಾಗಿ, ಅನ್ಯಜನರ ಬಣ್ಣನೆಯು ಪೂರಕವೂ ಆಗಿರಲಿಲ್ಲ, ಅಥವಾ ತಪ್ಪಾದದ್ದೂ ಆಗಿರಲಿಲ್ಲ. ಎರಡನೆಯದಾಗಿ, ವಚನಗಳು ಆತ್ಮೀಕ ಅಹಂಕಾರವನ್ನು ಪ್ರತಿಬಿಂಭಿಸುತ್ತೇವೆನೋ ನಿಜ, ಆದರೆ ಅವುಗಳು ಯೆಹೂದ್ಯ ಜನಾಂಗದಿಂದ ದೇವರು ಏನು ನಿರೀಕ್ಷಿಸಿದನೆಂಬುದರ ಸರಿಯಾದ ಬಣ್ಣನೆಯಾಗಿರುತ್ತವೆ. C. E. B. Cranfield ಹೇಳಿದ್ದೇನೆಂದರೆ, ಪೌಲನು 19-20 ವಚನಗಳಲ್ಲಿ ಪಟ್ಟಿ ಮಾಡಿರುವಂಥ "ಎಲ್ಲಾ ಸಂಗತಿಗಳಾಗಿರುವದು ಯೆಹೂದ್ಯರಿಗಿದ್ದ ದೈವಿಕ ವೃತ್ತಿಯಾಗಿತ್ತು."[39]

ವಚನಗಳು **21, 22.** ಅಧ್ಯಾಯ 2ರಲ್ಲಿನ ಆರಂಭಿಕ ಹೇಳಿಕೆಗಳಿಂದ ಆಘಾತಗೊಂಡ ಬಳಿಕ, ಈಗ ಯೆಹೂದ್ಯರು ಬಹುಶಃ ಪೌಲನ ಮಾತುಗಳಿಗೆ ಸಮ್ಮತಿಸುತ್ತಾ ತಮ್ಮ ತಲೆಯಾಡಿಸುವದನ್ನು ಮುಂದುವರೆಸಿದ್ದಿರಬೇಕು (17ನೇ ವಚನದಿಂದ ಮೊದಲುಗೊಂಡು). ಪುನಃ, ಪೌಲನು ಅವರನ್ನು ಒಂದು ವಿನಾಶಕಾರಿ ಮುಕ್ತಾಯಕ್ಕೆ ಸಿದ್ಧಗೊಳಿಸಲಿದ್ದನು. 17ನೇ ವಚನದಿಂದ ಆರಂಭವಾದ ಉದ್ದನೆಯ ವಾಕ್ಯವು ಈ ಚಕಿತಗೊಳಿಸುವ ಪ್ರಶ್ನೆಯೊಂದಿಗೆ ಅಂತ್ಯಗೊಳ್ಳುತ್ತದೆ: **ಮತ್ತೊಬ್ಬನಿಗೆ ಉಪದೇಶ ಮಾಡುವ ನೀನು ನಿನಗೆ ಉಪದೇಶ ಮಾಡಿಕೊಳ್ಳದೆ ಇದ್ದೀಯೋ?** Phillips ಆವೃತ್ತಿಯಲ್ಲಿ ಹೀಗಿದೆ, "ನೀನು ಇತರರಿಗೆ ಉಪದೇಶ ಮಾಡಲು ಸಿದ್ಧನಿದ್ದೀ, ನೀನು ಎಂದಾದರೂ ನಿನಗೆ ಏನನ್ನಾದರೂ ಉಪದೇಶಿಸಿಕೊಳ್ಳುವಿಯೋ?"

ಪೌಲನು ಪ್ರಶ್ನೆಗಳ ಸುರಿಮಳೆಯನ್ನು ಸುರಿಸುವ ಮೂಲಕ ಈ ಸತ್ಯವನ್ನು ಮನದಟ್ಟು ಮಾಡಿದನು. ಆತನು ಅನ್ಯಜನರ ಮೇಲೆ ಮೂರು ವಿಧದ ಪಾಪಗಳನ್ನು ಮಾಡಿದ್ದಾರೆಂದು ಆರೋಪಿಸಿದ್ದನು, ಈ ಕ್ರಮಾಂಕದಲ್ಲಿ: ವಿಗ್ರಹಾರಾಧನೆ, ಅನೈತಿಕತೆ, ಮತ್ತು ದುರ್ಮಾರ್ಗತನ. ಈಗ ಆತನು ಯೆಹೂದ್ಯರ ಮೇಲೆ ಈ ಪಾಪಗಳನ್ನೇ ಮಾಡಿದ್ದಾರೆಂದು ಆರೋಪಿಸುತ್ತಾನೆ-ವಿರುದ್ಧ ಕ್ರಮಾಂಕದಲ್ಲಿ.

*ದುರ್ಮಾರ್ಗತನ.* **ಕದಿಯಬಾರದೆಂದು ಬೋಧಿಸುವ ನೀನು ಕದಿಯುತ್ತೀಯೋ?** ಅನುವಾದಿಸಲ್ಪಟ್ಟ "ಕದಿ" (κλέπτω, *kleptō*) ಎಂಬ ಪದದಿಂದಲೇ ನಮಗೆ "kleptomaniac" (ಕ್ಲೇಪ್ಟೋಮಾನಿಯಾಕ) ಎಂಬ ಪದ ಬಂದಿರುತ್ತದೆ. *Kleptō*

ಕಳ್ಳತನವು ಗದ್ದಲದೊಂದಿಗೆ ಸಾರ್ವಜನಿಕವಾಗಿ ಮಾಡಿದ ದರೋಡೆ ಆಗಿರುವದಿಲ್ಲ (ಒಂದು ಬ್ಯಾಂಕ್ ದರೋಡೆ ರೀತಿಯಲ್ಲಿ); ಇದು ನಿಶಬ್ಧವಾದ, ಖಾಸಗಿಯಾಗಿ, ಸದ್ದಿಲ್ಲದೆ ನುಸುಳಿ ಮಾಡುವ ಕಳ್ಳತನ. ಎಂಟನೆಯ ಆಜ್ಞೆಯು ಹೇಳುತ್ತದೆ, "ನೀನು ಕದಿಯಬಾರದು" (ವಿಮೋಚನಕಾಂಡ 20:15). ಹೀಗಿದ್ದರೂ, ಯೆಹೂದ್ಯರು ಮತ್ತೊಬ್ಬರಿಗೆ ನ್ಯಾಯಸಮ್ಮತವಾಗಿ ಸೇರಿದ್ದನ್ನು ತಮ್ಮದಾಗಿಸಿಕೊಳ್ಳುವ ದಾರಿಗಳನ್ನು ಕಂಡುಕೊಂಡಿದ್ದರು. ಯೆಹೂದಿ ನಾಯಕರು ದೇವಾಲಯವನ್ನು "ಕಳ್ಳರ ಗವಿ" ಯಾಗಿ ಮಾಡಿದ್ದರು (ಮಾರ್ಕ 11:17). ಫರಿಸಾಯರು "ಸುಲುಕೊಂಡವುಗಳಿಂದ . . . ತುಂಬಿದ್ದರು" (ಮತ್ತಾಯ 23:25); ಅವರು "ವಿಧವೆಯರ ಮನೆಗಳನ್ನು ನುಂಗಿದ್ದರು" (ಮಾರ್ಕ 12:40). ಪ್ರಾಯಸ್ಥರಾಗಿದ್ದ ಯೆಹೂದ್ಯರು ತಮ್ಮ ಹೆತ್ತವರಿಗೆ ಸಹಾಯವನ್ನು ಮತ್ತು ಅವರದ್ದಾಗಿರಬೇಕಾಗಿದ್ದನ್ನು ಅವರಿಂದ "ದೋಚಿದ್ದರು" (ಮಾರ್ಕ 7:9-13).

*ಅನೈತಿಕತೆ* (*ಲೋಲುಪ್ತಿ*). **ಹಾದರ ಮಾಡಬಾರದೆಂದು ಹೇಳುವ ನೀನು ಹಾದರ ಮಾಡುತ್ತೀಯೋ?** CEV ಆವೃತ್ತಿಯಲ್ಲಿ ಹೀಗಿದೆ, "ಜನರು ದಾಂಪತ್ಯದಲ್ಲಿ ನಂಬಿಗಸ್ತರಾಗಿರಬೇಕೆಂದು ನೀನು ಹೇಳುತ್ತಿ. ಆದರೆ ನೀನು ನಂಬಿಗಸ್ತನಾಗಿದ್ದೀಯೋ?" ಏಳನೆಯ ಆಜ್ಞೆಯು ಹೇಳುತ್ತದೆ, "ನೀನು ವ್ಯಭಿಚಾರ ಮಾಡಬಾರದು" (ವಿಮೋಚನಕಾಂಡ 20:14). ಜಗತ್ತು ಎಲ್ಲಾ ಕಾಲಗಳಲ್ಲಿಯೂ ವ್ಯಭಿಚಾರದ ಹಾವಳಿಯಿಂದ ನಲುಗಿರುತ್ತದೆ- ಮತ್ತು ಅದರಲ್ಲಿ ಯೆಹೂದ್ಯರು ಹೊರತಾಗಿರಲಿಲ್ಲ (ನೋಡಿರಿ ಯೆರೆಮೀಯ 5:7, 8). J. W. McGarvey ಪ್ರಕಾರ, ಯೆಹೂದಿ Talmudನಲ್ಲಿ ಕೆಲವು ಪ್ರಖ್ಯಾತ ಯೆಹೂದಿ ರಬ್ಬಿಗಳ ಮೇಲೆ ವ್ಯಭಿಚಾರದ ಆರೋಪ ಮಾಡಲಾಗಿರುತ್ತದೆ.[40] ಯೆಹೂದ್ಯರ ನಕಲಿತನವು ಒಬ್ಬ ವ್ಯಭಿಚಾರದಲ್ಲಿ ಹಿಡಿಯಲ್ಪಟ್ಟ ಸ್ತ್ರೀಯ ಕಥೆಯಲ್ಲಿ ಬಹಳ ಸ್ಪಷ್ಟವಾಗಿ ದೃಷ್ಟಾಂತಗೊಳಿಸಲ್ಪಟ್ಟಿದೆ (ಯೋಹಾನ 7:53-8:11). ನಮಗಂತೂ ಒಂದು ಪ್ರಶ್ನೆಯು ಕಾಡುತ್ತಲೇ ಇರುತ್ತದೆ, "ವ್ಯಭಿಚಾರದಲ್ಲಿ *ಭಾಗಿಯಾಗಿದ್ದ* ಆ ಪುರುಷನು ಎಲ್ಲಿದ್ದನು? ಅವರು ಏಕೆ ಆತನ ಪಾಪವನ್ನು ಅಲಕ್ಷ್ಯ ಮಾಡಿದರು?"

*ವಿಗ್ರಹಾರಾಧನೆ.* **ಮೂರ್ತಿಗಳಲ್ಲಿ ಅಸಹ್ಯಪಡುತ್ತಿರುವ ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ?** ಮೂಲ ವಾಚಕರಿಗೆ ಸ್ಪಷ್ಟವಾಗಿ ಅರ್ಥವಾದ ವಾಕ್ಯಭಾಗಗಳಲ್ಲಿ ಈ ವಾಕ್ಯಭಾಗವೂ ಒಂದಾಗಿದೆ, ನಮಗೆ ಇದು ಅಸ್ಪಷ್ಟವಾಗಿ ತೋರಬಹುದೇನೋ. ಒಂದು ಜನಾಂಗವಾಗಿ, ಯೆಹೂದ್ಯರು ವಿಗ್ರಹಗಳನ್ನು ಅಸಹ್ಯಪಡುತ್ತಿದ್ದರೆಂಬುದು ನಮಗೆ ಗೊತ್ತಿರುವ ವಿಚಾರ. ಅವರು ಹಳೆ ಒಡಂಬಡಿಕೆಯ ಕಾಲದುದ್ದಕ್ಕೂ ವಿಗ್ರಹಾರಾಧನೆಯ ವಿಷಯದಲ್ಲಿ ಬಹಳ ಹೋರಾಟ ಹೊಂದಿದ್ದರು, ಆದರೆ ಬಾಬಿಲೋನಿನಲ್ಲಿನ ಸೆರೆವಾಸದಿಂದ ಹಿಂದಿರುಗಿದ ಸಮಯದಲ್ಲಿ ಅವರು ತಮ್ಮ ಹೃದಯಗಳನ್ನು ಮೂರ್ತಿಗಳ ವಿರುದ್ಧವಾಗಿ ದೃಢಪಡಿಸಿಕೊಂಡು ಬಂದಿದ್ದರು. ವಾಸ್ತವದಲ್ಲಿ, ಅವರು ರೋಮಾಯ ಅಧಿಕಾರಿಗಳ ಜೊತೆಯಲ್ಲಿ ಬಹಳಷ್ಟು ಸಾರಿ ಸಂಘರ್ಷಕ್ಕೆ ಇಳಿದಿದ್ದು ಪ್ರತಿಮೆಗಳ ವಿಷಯವಾಗಿಯೇ ಆಗಿತ್ತು. ಈ ಕಾರಣದಿಂದ, ವಾಕ್ಯಸಾಲಿನ ಮೊದಲ ಭಾಗವು ಸ್ಪಷ್ಟವಾಗಿದೆ-ಆದರೆ "ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ?" ಎಂದು ಪೌಲನು ಕೇಳಿದ್ದರ ತಾತ್ಪರ್ಯವೇನಾಗಿತ್ತು?

"ನೀನು ದೇವಸ್ಥಾನದಲ್ಲಿ ಕಳ್ಳತನ ಮಾಡುತ್ತೀಯೋ?" ಎಂಬದು ಗ್ರೀಕ್.ನ

(ἱεροσυλέω, *hierosuleō*) ಎಂಬ ಕ್ರಿಯಾಪದಿಂದ ಬರುತ್ತದೆ, ಅದು "ದೇವಸ್ಥಾನ" (ἱερόν, *hieron*) ಎಂಬದರೊಂದಿಗೆ "ಕದಿ" (συλάω, *sulaō*) ಎಂಬ ಪದದ ಜೋಡಣೆಯಾಗಿ ಬಂದಿರುತ್ತದೆ. *Hieron* ಎಂಬುದು "ಪರಿಶುದ್ಧ (ಸ್ಥಳ)" ಅಥವಾ "ಪರಿಶುದ್ಧ (ವಸ್ತು)" ಎಂಬ ಅರ್ಥವಾಗಿರುತ್ತದೆ, ಆದ್ದರಿಂದ *hierosulos* ಎಂಬ ಪದವು ಸಾಂಕೇತಿಕವಾಗಿ ಒಂದಕ್ಕಿರುವ ಗೌರವದ ಪವಿತ್ರತೆಯನ್ನು "ಕಳ್ಳತನ ಮಾಡುವದನ್ನು" ಸೂಚಿಸಬಹುದಾಗಿದೆ ("ಅಪಚಾರವನ್ನು ಮಾಡುವದಾಗಿದೆ"; ನೋಡಿರಿ KJV).

ಕೆಲವು ಲೇಖಕರು ಎತ್ತಿ ತೋರಿಸುವದೇನೆಂದರೆ, ಮುಂಚಿನ ಎರಡು ಪ್ರಶ್ನೆಗಳಲ್ಲಿ, ಪ್ರತಿಯೊಂದು ಪ್ರಶ್ನೆಯ ಎರಡನೆಯ ಭಾಗವು ಪ್ರಶ್ನೆಯ ಮೊದಲ ಭಾಗವನ್ನು ನಕಲು ಮಾಡುತ್ತದೆ. ಆದ್ದರಿಂದ ಅವರು ವಾದಿಸುವದೇನೆಂದರೆ "ದೇವಸ್ಥಾನದಲ್ಲಿ ಕಳ್ಳತನ" ಎಂಬ ಪದಗುಚ್ಛವು, ಒಂದು ವಿಧದಲ್ಲಿ, ಇದು ಯೆಹೂದ್ಯರು ಅಸಹ್ಯಿಸುತ್ತಿದ್ದ ಅದೇ ವಿಗ್ರಹರಾಧನೆಯನ್ನೇ ಸ್ವತಃ ಮಾಡಿದ ಬಗ್ಗೆ ಸೂಚಿಸುವದಾಗಿದೆ. ಒಬ್ಬ ಲೇಖಕನು ಈ ಮುಕ್ತಾಯಕ್ಕೆ ಬಂದನು, ಏನೆಂದರೆ, ಪೌಲನು ಈ ರೀತಿಯಾಗಿ ಹೇಳಬೇಕಾಗಿತ್ತು, "ಯೆಹೂದ್ಯರಾದ ನೀವು ವಿಗ್ರಹಗಳನ್ನು ದ್ವೇಷಿಸುವವರಂತೆ ನಟಿಸುತ್ತೀರಿ; ಮತ್ತು ಹೀಗಿದ್ದರೂ ನೀವು ಅವುಗಳನ್ನು ಅನ್ಯರ ದೇವಸ್ಥಾನಗಳಿಂದ ಕದಿಯುತ್ತೀರಿ ಮತ್ತು ಅವುಗಳನ್ನು ಸೇವಿಸುತ್ತೀರಿ (ಆರಾಧಿಸುತ್ತೀರಿ)."[41]

ಇಲ್ಲಿ "ದೇವಸ್ಥಾನಗಳಲ್ಲಿ" ಎಂಬುದು ಬಹುಶಃ ಅನ್ಯಜನರ ದೇವಾಲಯಗಳನ್ನು ಸೂಚಿಸುತ್ತದೆಂದು ಇತರರು ಸಹ ಒಪ್ಪುತ್ತಾರೆ (Phillips; NLT), ಆದರೆ ಯೆಹೂದ್ಯರು ಅವುಗಳಲ್ಲಿ ಹೇಗೆ ಕಳ್ಳತನ ಮಾಡಿದರೆಂಬ ವಿಷಯದಲ್ಲಿ ಅವರಲ್ಲಿ ಭಿನ್ನಾಭಿಪ್ರಾಯವಿರುತ್ತವೆ. ಅನ್ಯರ ದೇವಸ್ಥಾನಗಳು ಕೆಲವು ಸಾರಿ ಐಶ್ವರ್ಯವಂತರ ಸ್ವತ್ತುಗಳನ್ನು ಶೇಖರಿಸಿಡುವದಕ್ಕೆ ಉಪಯೋಗಿಸಲಾಗುತ್ತಿದ್ದಾದ್ದರಿಂದ, ಒಂದು ಸಂದರ್ಭ ದಲ್ಲಿ ಯೆಹೂದ್ಯರು ಆ ಬೊಕ್ಕಸಗಳನ್ನು ದೋಚಿಕೊಂಡಿದ್ದರೆಂದು ಹೇಳಲಾಗುತ್ತದೆ. ಕೆಲವು ಯೆಹೂದ್ಯರು ಆಮೂಲ್ಯ ಲೋಹಗಳಿಂದ ಮಾಡಿದ ಅನ್ಯಜನರ ವಿಗ್ರಹಗಳನ್ನು ಕದ್ದುಕೊಂಡು, ಅವುಗಳನ್ನು ಕರಗಿಸಿ ಮಾರಾಟ ಮಾಡಿದ್ದರು ಎಂಬದಾಗಿ ಸಹ ಹೇಳಲಾಗುತ್ತದೆ. ಹೊಸ ಒಡಂಬಡಿಕೆಯಲ್ಲಿ, ದೇವಾಲಯದಲ್ಲಿ ಕಳ್ಳತನದ ಬಗ್ಗೆ ಉಲ್ಲೇಖಿಸಲ್ಪಟ್ಟ ಏಕೈಕವಾದ ಇನ್ನೊಂದು ಸಂದರ್ಭವೆಂದರೆ (ಅಪೊಸ್ತಲರ ಕೃತ್ಯಗಳು 19:37), ಅದು ಈಗಷ್ಟೇ ಹೇಳಲ್ಪಟ್ಟ ರೀತಿಯ ಕಳ್ಳತನವನ್ನು ಸೂಚಿಸುತ್ತದೆ. ಯೆಹೂದ್ಯರು ತಮಗೆ ಹೇಸಿಕೆಯೆಂದು ಹೇಳಿಕೊಳ್ಳುವ ಅದೇ ಸಂಗತಿಯಿಂದಲೇ ಒಂದು ಲಾಭವನ್ನು ಮಾಡಿಕೊಳ್ಳಲು ಹಿಂಜರಿಯುತ್ತಿರಲಿಲ್ಲ ಎಂಬದನ್ನು ಸಹ ಗಮನಿಸತಕ್ಕದ್ದು. ಯೆಹೂದ್ಯರ ಬರಹಗಳ ಪ್ರಕಾರ, ಕೆಲವು ಯೆಹೂದ್ಯರು ವಿಗ್ರಹಗಳನ್ನು ತೆಗೆದುಕೊಂಡು ಅವುಗಳನ್ನು ಅನ್ಯಜನಾಂಗದ ಆರಾಧಕರಿಗೆ ಅತ್ಯಂಥ ಹೆಚ್ಚಿನ ಬೆಲೆಗಳಿಗೆ ಮಾರಾಟ ಮಾಡುತ್ತಿದ್ದರು.[42] ಈ ಎಲ್ಲಾ ಸನ್ನಿವೇಶಗಳು ನಡೆದಿರುವ ಸಾಧ್ಯತೆಯಿದೆ, ಆದರೆ ಇವೆಲ್ಲವೂ ಪೌಲನು ಹೇಳಲಿಚ್ಚಿಸಿದ್ದಕ್ಕೆ ಸಮಾನವಾಗದೆ ಕೇವಲ ಸಾಮಾನ್ಯ ಅರ್ಥಕ್ಕೆ ಮಾತ್ರ ಹೆಚ್ಚು ಸಿಮೀತವಿರುವಂತೆ ತೋರುತ್ತವೆ.

ಇನ್ನು ಕೆಲವು ಲೇಖಕರು ನಂಬುವದೇನೆಂದರೆ, "ದೇವಸ್ಥಾನಗಳಲ್ಲಿ ಕಳ್ಳತನ" ಎಂಬುದು ಯೆರೂಸಲೇಮಿನಲ್ಲಿದ್ದ ಯೆಹೂದ್ಯರ ದೇವಾಲಯದಲ್ಲಿ ಕಳ್ಳತನ

ಮಾಡುವದನ್ನು ಸೂಚಿಸುತ್ತದೆ. ಮಾಲಾಕಿಯನು ಹೇಳಿದ್ದೇನೆಂದರೆ ಯೆಹೂದ್ಯರು ಯಾಜಕರಿಗೆ ಸೇರಬೇಕಾಗಿದ್ದನ್ನು ಕೊಡದೆ ಹಿಡಿದಿಟ್ಟುಕೊಳ್ಳುವದರ ಮೂಲಕ "ದೇವರಿಂದ ಕದ್ದುಕೊಂಡಿದ್ದಾರೆ" ಎಂಬದಾಗಿ (ಮಲಾಕಿ 3:8). Josephusನು ರೋಮ್.ನಲ್ಲಿ ವಾಸಿಸುತ್ತಿದ್ದ ನಾಲ್ವರು ಯೆಹೂದ್ಯರ ವಿಷಯವಾಗಿ ಬರೆದನು, ಅವರು ತಮಗೆ ಒಬ್ಬ ಯೆಹೂದ್ಯ ಧರ್ಮಕ್ಕೆ ಮತಾಂತರಗೊಂಡವನು ವಶದಲ್ಲಿಟ್ಟುಕೊಳ್ಳಲು ನೀಡಿದ್ದ ದುಬಾರಿ ನೇರಳೆ ಬಟ್ಟೆ ಹಾಗೂ ಬಂಗಾರವನ್ನು ದುರುಪಯೋಗ ಪಡಿಸಿಕೊಂಡಿದ್ದರು. ಅವರು ಈ ಸಾಮಗ್ರಿಗಳನ್ನು ಯೆರೂಸಲೇಮಿನಲ್ಲಿನ ದೇವಾಲಯಕ್ಕೆ ಒಪ್ಪಿಸುವ ಬದಲಾಗಿ, ಅವರು ಅವುಗಳನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡರು.[43] AB ಆವೃತ್ತಿಯು ರೋಮಾ 2:22ರ ನಂತರ ಭಾಗವನ್ನು ಈ ರೀತಿಯಾಗಿ ವಿವರಿಸುತ್ತದೆ, "[ನೀವು ದೇವರಿಗೆ ಪ್ರತ್ಯೇಕಿಸಲ್ಪಟ್ಟಿರುವದನ್ನು ನಿಮ್ಮ ಸ್ವಂತ ಮಾಡಿಕೊಳ್ಳುತ್ತೀರೋ, ಹೀಗೆ ಪವಿತ್ರತೆಯನ್ನು ಕದ್ದುಕೊಂಡು ಅವಮಾನವನ್ನುಂಟು ಮಾಡುವಿರೋ]?"

ಅನೇಕ ವ್ಯಾಖ್ಯಾನಕಾರರು ಪ್ರಶ್ನೆಯಲ್ಲಿರುವ ಈ ಪದಗುಚ್ಛವನ್ನು ಈ ಸರಳ ಅರ್ಥಬರುವಂತೆ ಬಣ್ಣಿಸುತ್ತಾರೆ, "ಪರಿಶುದ್ಧನಿಂದ" ಆತನಿಗೆ ಯೋಗ್ಯವಾದದ್ದೆಲ್ಲವನ್ನೂ ಕದ್ದುಕೊಳ್ಳುವದು. ಪೌಲನು ಇಲ್ಲಿ ಗೌರವವನ್ನು ಕುರಿತು ಸೂಚಿಸುತ್ತಿದ್ದಾನೆಂದು Richard A. Batey ಅಭಿಪ್ರಾಯ ಪಡುತ್ತಾನೆ:

> [ಪೌಲನು] ಇಲ್ಲಿ ವಿಗ್ರಹಗಳನ್ನು ದ್ವೇಷಿಸುವ ಯೆಹೂದ್ಯನ ಮೇಲೆ ತಪ್ಪು ಹೊರಿಸುತ್ತಿದ್ದಾನೆ ಯಾಕೆಂದರೆ ಆತನು ದೇವರಿಗೆ ಸೇರಿದ ನಿರ್ಬಂಧವಿಲ್ಲದ ಗೌರವವನ್ನು ಆತನಿಗೆ ಒಪ್ಪಿಸಿಕೊಡುವದಕ್ಕೆ ನಿರಾಕರಿಸುವವನಾಗಿ ಮೊದಲ (ಮತ್ತು ಎರಡನೆಯ) ಆಜ್ಞೆಗಳನ್ನು ಉಲ್ಲಂಘಿಸಲಾರನು (ವಿಮೋಚನಕಾಂಡ 20:3, 4). ಹೀಗೆ ಅವರು ತಮ್ಮ ಜೀವಿತಗಳಲ್ಲಿ ಇರಬೇಕಾದ ದೇವರ ಸಾರ್ವಭೌಮ ಪವಿತ್ರತೆಯನ್ನು ದೋಚುತ್ತಿದ್ದಾರೆ.[44]

Charles Hodge ಸಹ ಇದೇ ಅಭಿಪ್ರಾಯ ಪಡುತ್ತಾನೆ:

> "ದೇವರ ಆಲಯದಲ್ಲಿ ಕಳ್ಳತನ" ಎಂಬದನ್ನು ಹೆಚ್ಚು ಸಾಮಾನ್ಯ ಅರ್ಥದಲ್ಲಿ ದೇವರ ಮತ್ತು ಪರಿಶುದ್ಧ ಸಂಗತಿಗಳನ್ನು ಹೊಲೆಮಾಡುವದು ಹಾಗೂ ಅಗೌರವಪೂರ್ವಕವಾಗಿ ಪರಿಗಣಿಸಿಕೊಳ್ಳುವದು ಎಂದು ಗ್ರಹಿಸಿಕೊಳ್ಳಬಹುದು. ಇಲ್ಲಿ ಸನ್ನಿವೇಶವು ಕೇಳುವದಿಷ್ಟೇ: "ನೀವು ದೇವರಿಗೆ ಅತ್ಯಂಥ ಗೌರವ ಕೊಡುವದಾಗಿ ಹೇಳಿಕೊಳ್ಳುತ್ತೀರಿ (ವಿಗ್ರಹಾರಾಧನೆಯಿಂದ ದೂರವಿರುವ ಮೂಲಕ), ಹೀಗಿದ್ದರೂ ಬೇರೆ ರೀತಿಗಳಲ್ಲಿ, ನೀವು ಅತ್ಯಂಥ ದೊಡ್ಡ ಅಗೌರವ ತೋರಿದ ಅಪರಾಧ ಮಾಡುವವರಾಗಿದ್ದೀರಿ."[45]

ಪೌಲನು ಈ ನಿರ್ದಿಷ್ಟವಾದ ವಿಚಾರದಲ್ಲಿ ಯಾವ ತಾತ್ಪರ್ಯ ಹೊಂದಿದ್ದನೆಂಬುದು ನಮಗೆ ಸರಿಯಾಗಿ ತಿಳಿಯಲಾಗದು, ಆದರೆ ಒಟ್ಟಾರೆಯಾಗಿ ಮೂರು ಪ್ರಶ್ನೆಗಳ ತಿರುಳು ಏನೆಂಬದನ್ನು ಯಾರೂ ಅಲ್ಲಗಳೆಯಲಾರರು: ಯೆಹೂದ್ಯರ ನುಡಿ ಹಾಗೂ ನಡೆಗಳು ಹೊಂದಾಣಿಕೆಯಾಗುತ್ತಿರಲಿಲ್ಲ. ಅವರು ಹೇಳೋದೊಂದು ಹಾಗೂ ಮಾಡೋದೊಂದು ಆಗಿತ್ತು. ಅವರು ಉಪದೇಶವೇನೋ ಮಾಡಿದರು ಆದರೆ ಸ್ವತಃ ಪಾಲಿಸುತ್ತಿರಲಿಲ್ಲ.

**ವಚನ 23.** ಈ ಸರಣಿಯಲ್ಲಿ ಕೇಳುವದಕ್ಕೆ ಪೌಲನ ಬಳಿ ಇನ್ನೊಂದು ಪ್ರಶ್ನೆಯಿತ್ತು, ಅದು ಯೆಹೂದ್ಯರ ಹೊಂದಾಣಿಕೆಯಿಲ್ಲದೆ ಜೀವನ ಹಾಗೂ ಅದರ ದುರಂತಕರ ಫಲಿತದ ಬಗ್ಗೆ ಒತ್ತಿಹೇಳುತ್ತದೆ: **ಧರ್ಮಶಾಸ್ತ್ರದಲ್ಲಿ ಅಭಿಮಾನಿಯಾಗಿರುವ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆದು ದೇವರನ್ನು ಅವಮಾನಪಡಿಸುತ್ತೀಯೋ?** ಯೆಹೂದ್ಯರು ತಮ್ಮ ವಶಕ್ಕೆ (ತಮಗೆ ಮಾತ್ರವೇ) "ದೈವೋಕ್ತಿಗಳು (ವಿಧಿಗಳು) ಒಪ್ಪಿಸಲ್ಪಟ್ಟವೆ" (3:2) ಎಂಬದರಲ್ಲಿ ಬಹಳ ಹೆಮ್ಮೆಯಿಂದಿದ್ದರು. ಅವರಿಗಾದರೋ, ಧರ್ಮಶಾಸ್ತ್ರವನ್ನು ಹೊಂದಿರುವದು "ಅವರ ಜನಾಂಗದ ಮೇಲೆ ದೇವರ ದಯೆಯ ಅತ್ಯಂಥ ಸೂಚಕ ಗುರುತು" ಆಗಿತ್ತು.[46] ಹೇಗೂ, ಯೆಹೂದ್ಯರು ಒಂದು ಕ್ಷಣದಲ್ಲಿ ಧರ್ಮಶಾಸ್ತ್ರದ ಬಗ್ಗೆ ಹೊಗಳಿಕೊಳ್ಳುತ್ತಿದ್ದರು ಮತ್ತು ಮರುಕ್ಷಣದಲ್ಲಿ ಅದನ್ನು ಉಲ್ಲಂಘಿಸುತ್ತಿದ್ದರು!

ಯೆಹೂದ್ಯರಿಗೆ ಅನೇಕ ಸವಲತ್ತುಗಳು ಕೊಡಲ್ಪಟ್ಟಿದ್ದವು, ಆದರೆ ಆಸ್ತಿಗಳು ಹೊಣೆಗಾರಿಕೆಯಾಗಬಲ್ಲವು. ದೇವರು ಯೆಹೂದ್ಯರಿಗೆ ದಯೆಯನ್ನು ತೋರಿಸಿದ್ದನೆಂಬ ಸತ್ಯಾಂಶದ ಅರ್ಥವು, ಅವರಿಗೆ ಹೆಚ್ಚಿನ ಜವಾಬ್ದಾರಿಗಳಿರುತ್ತವೆ ಎಂದಾಗಿತ್ತು (ನೋಡಿರಿ ಲೂಕ 12:48; ಯಾಕೋಬ 3:1). ಪ್ರವಾದಿಯಾದ ಆಮೋಸನು ಇಸ್ರಾಯೇಲರನ್ನು ಹೀಗೆ ಎಚ್ಚರಿಸಿದನು, "ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ; ಆದಕಾರಣ ನಿಮ್ಮ ಎಲ್ಲಾ ಪಾಪಗಳ ಫಲವನ್ನು ನಿಮಗೆ ತಿನ್ನಿಸು ವೆನು" (ಆಮೋಸ 3:2).

ಯೆಹೂದ್ಯರ ದ್ವಂದ್ವ ಜೀವನವು ಅವರ ಹಾಗೂ ಕರ್ತನ ಸಂಗಡದ ಅವರ ಸಂಬಂಧಕ್ಕೆ ದಕ್ಕೆಯನ್ನುಂಟು ಮಾಡಿದ್ದು ಮಾತ್ರವಲ್ಲದೆ ಇತರರ ಮೇಲೆ ಸಹ ಅದು ಪ್ರತಿಕೂಲ ಪರಿಣಾಮವನ್ನು ಬೀರಿತ್ತು. ಪೌಲನು ಹೀಗೆ ಕೇಳಿದನು, "ನೀವು ಧರ್ಮಶಾಸ್ತ್ರವನ್ನು ಮೀರುವದರಿಂದಾಗಿ, ನೀವು ದೇವರಿಗೆ ಅವಮಾನವನ್ನುಂಟು ಮಾಡುತ್ತೀರೋ?" ಇಲ್ಲಿ ಅರ್ಥವಾಗುವಂಥ ಉತ್ತರವು ಹೌದು ಎಂದಾಗಿರುತ್ತದೆ: "ಹೌದು, ನೀವು ಆತನ ಧರ್ಮಶಾಸ್ತ್ರವನ್ನು ಉಲ್ಲಂಘಿಸುವಾಗ, ನೀವು ಖಂಡಿತ ದೇವರನ್ನು ಅವಮಾನಪಡಿಸುವಿರಿ." "ಸಂದೇಶವನ್ನು ಸಂದೇಶಕೊಡುವವನ ಪ್ರಕಾರವಾಗಿ ಅಳೆಯಲ್ಪಡುತ್ತದೆ" ಎಂಬದು ಸದಾಕಾಲದ ಸತ್ಯವಾಗಿದೆ.[47] ಯೆಹೂದ್ಯರು ಅನ್ಯಜನರನ್ನು ಕರ್ತನಿಗೆ ಹತ್ತಿರವಾಗಿ ಸೆಳೆಯಬೇಕಾಗಿತ್ತು, ಆದರೆ ಅವರ ಜೀವಿತಗಳು ಅನ್ಯಜನರನ್ನು ದೂರಕ್ಕೆ ಓಡಿಸಿದವು.

**ವಚನ 24.** ಇದು ಸತ್ಯ ಎಂಬದಕ್ಕೆ, ಪೌಲನು ಹಳೆ ಒಡಂಬಡಿಕೆಯಿಂದ ಉಲ್ಲೇಖಿಸುತ್ತಾನೆ: **ನಿಮ್ಮ ದೆಸೆಯಿಂದ ಅನ್ಯಜನರಲ್ಲಿ ದೇವರ ನಾಮವು ದೂಷಣೆಗೆ ಗುರಿಯಾಗುತ್ತದೆಂದು ಬರೆದದೆಯಲ್ಲಾ.** ಈ ವಾಕ್ಯಭಾಗವು ಬಹುಶಃ ಗ್ರೀಕ್ ಅನುವಾದದಲ್ಲಿನ ಯೆಶಾಯ 52:5ರಿಂದ (Septuagint ಅಥವಾ LXX) ಉಲ್ಲೇಖಿಸಲ್ಪಟ್ಟಿದೆ.[48] ಯೆಹೂದ್ಯರನ್ನು ಕಾಪಾಡಲು ಮತ್ತು ಅವರನ್ನು ಸೆರೆಯಾಳುಗಳಾಗಿ ಹೋಗುವದರಿಂದ ತಪ್ಪಿಸಲು ಅಸಮರ್ಥನಾಗಿದ್ದಾನೆಂದು ಯೋಚಿಸಿದ್ದರಿಂದ ಅನ್ಯಜನರು ದೇವರನ್ನು ಅಪಹಾಸ್ಯ ಮಾಡಿದರೆಂಬ ಬಗ್ಗೆ ಯೆಶಾಯನು ಬರೆಯುತ್ತಾನೆ. ಸತ್ಯವೇನೆಂದರೆ ಇಸ್ರಾಯೇಲ್ಯರ ಪಾಪಗಳೇ ಅವರನ್ನು ಸೆರೆಗೆ ಹೋಗುವಂತೆ ಮಾಡಿದ್ದವು, ಆದ್ದರಿಂದ ದೇವರ ನಾಮವು ದೂಷಣೆಗೆ ಗುರಿಯಾಗುವದಕ್ಕೆ ಇಸ್ರಾಯೇಲ್ಯರ

*ಪಾಪಗಳೇ* ಕಾರಣವಾಗಿತ್ತು. ಪೌಲನ ದಿನಗಳಲ್ಲಿ ಸಹ, ಯೆಹೂದ್ಯರ *ಪಾಪಕೃತ್ಯಗಳು* ಯೆಹೂದ್ಯೇತರರ ಮಧ್ಯದಲ್ಲಿ ದೇವರ ನಾಮವು ಅವಮಾನಕ್ಕೆ ಒಳಗಾಗುವಂತೆ ಮಾಡಿದ್ದವು. ಪೌಲನು ದುರ್ನಡತೆಯ ಬಗ್ಗೆ ಬರೆದರೆ, ಯೆಶಾಯನು ದುರ್ಗತಿಯ ಬಗ್ಗೆ ಬರೆದಿದ್ದನು;[49] ಆದರೆ ಇವೆರಡರ ಫಲವು ಸಹ ದೇವರ ದೂಷಣೆಯೇ ಆಗಿತ್ತು. ನೈತಿಕ ದೋಷವು ಯುದ್ಧದ ಸೋಲಿನ ರೀತಿಯಲ್ಲಿ ಕರ್ತನಿಗೆ ಅಗೌರವವನ್ನುಂಟು ಮಾಡಿತ್ತು.[50] Moses E. Lard ಇದನ್ನು ಈ ಮಾತುಗಳಲ್ಲಿ ಬರೆಯುತ್ತಾನೆ: "ಅನ್ಯಜನರು ಒಬ್ಬನ ದೇವರನ್ನು ಆತನ ನಡವಳಿಕೆಯಿಂದ ತೀರ್ಪುಮಾಡಿದರು. ಒಳ್ಳೆ ಮನುಷ್ಯನು ಆಗಿದ್ದರೆ, ಒಳ್ಳೇ ದೇವರು; ಕೆಟ್ಟ ಮನುಷ್ಯನು ಆಗಿದ್ದರೆ, ಕೆಟ್ಟ ದೇವರು . . ."[51]

ಯುಗಯುಗಳಿಂದಲೂ, ಕರ್ತನ ವೈರಿಗಳಾಗಿ ನಡೆಯುವವರು ಮನಸ್ಸುಕರಗಿಸಿಕೊಳ್ಳದ ಅನ್ಯಜನರಲ್ಲ, ಆದರೆ ಸಮರ್ಪಣೆಯಿಲ್ಲದ ವಿಶ್ವಾಸಿಗಳೇ ಆಗಿದ್ದಾರೆ. Rudyard Kipling ಇದನ್ನು ಮನಸ್ಸು ಚುಚ್ಚುವಂಥ ಪದ್ಯರೂಪದಲ್ಲಿ ಬಣ್ಣಿಸುತ್ತಾನೆ: "ಆದರೆ ಆತನ ಸ್ವಂತ ಶಿಷ್ಯರೇ ಆತನಿಗೆ ಎಲ್ಲಕ್ಕಿಂತಲೂ ಘೋರವಾದ ಗಾಯವನ್ನುಂಟುಮಾಡುವರು."[52] ಅನ್ಯಜನರು ವಿಗ್ರಹಾರಾಧನೆ, ಅನೈತಿಕತೆ, ಮತ್ತು ದುರ್ಮಾರ್ಗತನ ನಡಿಸಿದ ಅಪರಾಧಿಗಳಾಗಿದ್ದಾಗ, ದೇವರು ಜನರ ಮನಸ್ಸುಗಳಲ್ಲಿ ಅವಮಾನಕ್ಕೆ ಗುರಿಯಾಗಿರಲಿಲ್ಲ. ಹೇಗೂ, ಯೆಹೂದ್ಯರು ಅದೇ ಪಾಪಗಳನ್ನು ಮಾಡಿದಾಗ, ದೇವರ ನಾಮವು ನಗೆಪಾಟಲಿಗೆ ಗುರಿಯಾಯಿತು.

ಯೆಹೂದ್ಯರ ಪಾಪಕೃತ್ಯದಿಂದಾಗಿ ದೇವರ ನಾಮವು ಅನ್ಯಜನರ ಮಧ್ಯದಲ್ಲಿ ಅವಮಾನಕ್ಕೀಡಾಗಿರುತ್ತದೆಂದು ಪೌಲನು ಆರೋಪಿಸಿದ್ದು ಅವರನ್ನು ದೋಷಿಗಳೆಂದು ತೀರ್ಪುಮಾಡುವದರ ಅಂತಿಮ ಘಟ್ಟವಾಗಿತ್ತು. ಅವರು ಆತ್ಮೀಕವಾಗಿಯೂ ಧಾರ್ಮಿಕವಾಗಿಯೂ ಅನ್ಯಜನರಿಗಿಂತ ಉನ್ನತದಲ್ಲಿದ್ದರು, ಆದರೆ ಅವರು ಆಗಲೂ ದೇವರ ನೀತಿಯ ಅಗತ್ಯತೆಯಲ್ಲಿರುವ ಪಾಪಿಗಳೇ ಆಗಿದ್ದರು!

## ಹೃದಯದ ನಿಜವಾದ ಸುನ್ನತಿ (2:25-29)

**25ನೀನು ಧರ್ಮಶಾಸ್ತ್ರಾನುಸಾರವಾಗಿ ನಡೆಯುವವನಾದರೆ ಸುನ್ನತಿಯೆಂಬ ಸಂಸ್ಕಾರವು ಪ್ರಯೋಜನಕರವಾದದ್ದೇ ಸರಿ; ಆದರೆ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆಯುವವನಾಗಿದ್ದರೆ ನಿನಗೆ ಸುನ್ನತಿಯಿದ್ದರೂ ಇಲ್ಲದಂತಾಯಿತು. 26ಹೀಗಿರಲಾಗಿ ಸುನ್ನತಿಯಿಲ್ಲದವನು ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ ಸುನ್ನತಿಯಿಲ್ಲದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ? 27ಅವನು ಶರೀರದಲ್ಲಿ ಸುನ್ನತಿಯಿಲ್ಲದವನಾಗಿದ್ದು ಧರ್ಮಶಾಸ್ತ್ರದಲ್ಲಿ ಹೇಳಿದ್ದನ್ನು ನೆರವೇರಿಸುವದರಲ್ಲಿ ಶಾಸ್ತ್ರವೂ ಸುನ್ನತಿಯೂ ಇದ್ದು ಧರ್ಮವನ್ನು ಮೀರಿ ನಡೆಯುವ ನಿನ್ನನ್ನು ದೋಷಿಯೆಂದು ನಿರ್ಣಯಿಸುವದಿಲ್ಲವೇ? 28ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ ಮತ್ತು ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ. 29ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು, ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ. ಇದು ಬಾಹ್ಯಾಚಾರಕ್ಕೆ ಸಂಬಂಧಪಟ್ಟದ್ದಲ್ಲ, ಆತ್ಮ ಸಂಬಂಧಪಟ್ಟದ್ದೇ; ಇಂಥಾ**

**ಸುನ್ನತಿಯಿದ್ದವನಿಗೆ ಬರುವ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದ ಬರುವದಲ್ಲ.**

ಅವರ ಯೆಹೂದ್ಯತನವನ್ನು ಬಣ್ಣಿಸಿದ ಎಲ್ಲಾ ಸಂಗತಿಗಳಿಗಿಂತಲೂ, ಬಹಳಷ್ಟು ಯೆಹೂದ್ಯರು ಎರಡು ಸಂಗತಿಗಳನ್ನಂತೂ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಇಟ್ಟಿರುತ್ತಿದ್ದರೆನಿಸುತ್ತದೆ. ಮೊದಲನೆಯದು, ದೇವರು ತಮ್ಮ ವಶಕ್ಕೆ ಮೋಶೆಯ ಧರ್ಮಶಾಸ್ತ್ರವನ್ನು ಕೊಟ್ಟಿದ್ದಾನೆಂಬುದು (ನೋಡಿರಿ 3:1, 2). ರೋಮಾ 2:17-24 ವಚನಗಳು ನಮಗೆ ಯೆಹೂದ್ಯರು ಧರ್ಮಶಾಸ್ತ್ರದ ಬಗ್ಗೆ ಯಾವ ಭಾವನೆಗಳನ್ನು ಹೊಂದಿದ್ದರೆಂಬುದನ್ನು ಹೇಳುತ್ತವೆ. ಅವರು "ಧರ್ಮಶಾಸ್ತ್ರದಲ್ಲಿ ಭರವಸವಿಟ್ಟಿದ್ದರು" (2:17). ಅವರು "ಧರ್ಮಶಾಸ್ತ್ರದಲ್ಲಿ ಉಪದೇಶ ಹೊಂದಿದ್ದರು" (2:18). ಅವರು "ಧರ್ಮಶಾಸ್ತ್ರದಲ್ಲಿ ಜ್ಞಾನ ಸತ್ಯಗಳ ಸ್ವರೂಪವೇ ತಮಗೆ ಇದೆ" ಎಂದು ನಂಬಿದ್ದರು (2:19). ಹೀಗಿರುವದರಿಂದ ಅವರು "ಧರ್ಮಶಾಸ್ತ್ರದ ವಿಷಯದಲ್ಲಿ ಹೊಗಳಿಕೊಳ್ಳುತ್ತಿದ್ದರು" (2:23).

ಒಬ್ಬ ಯೆಹೂದ್ಯನಿಗೆ ಆತನ ಯೆಹೂದ್ಯತನವನ್ನು ಬಣ್ಣಿಸುವ ಎರಡನೆಯ ಅತ್ಯಂಥ ಪ್ರಾಮುಖ್ಯ ಸಂಗತಿಯೆಂದರೆ ಸುನ್ನತಿ ಆಗಿತ್ತು. ಈ ಸಂಸ್ಕಾರವನ್ನು ಆಚರಿಸುವದು ಇಸ್ರಾಯೇಲಿನ ರಾಷ್ಟ್ರೀಯ ಗುರುತನ್ನು ವ್ಯಕ್ತಪಡಿಸುವದಾಗಿತ್ತು ಮತ್ತು ಎಲ್ಲಾ ಯೆಹೂದ್ಯ ಪುರುಷರಿಗೆ ಕಡ್ಡಾಯವಾಗಿದ್ದ ಸಂಗತಿಯಾಗಿತ್ತು. ಪೌಲನು 2ನೇ ಅಧ್ಯಾಯದ ಮಿಕ್ಕ ಭಾಗದಲ್ಲಿ ಸುನ್ನತಿ ವಿಷಯದ ಕಡೆಗೆ ಗಮನ ಹರಿಸುತ್ತಾನೆ.

**ವಚನ 25.** ಕೆಲವು ರಬ್ಬಿಗಳು ಬೋಧಿಸುತ್ತಿದ್ದದ್ದಕ್ಕೆ ತದ್ವಿರುದ್ದವಾಗಿ, ಕೇವಲ ಸುನ್ನತಿ ಮಾಡಿಸಿಕೊಂಡರೆ ಅದು ಒಬ್ಬನನ್ನು ನಿಜವಾದ ಯೆಹೂದ್ಯನನ್ನಾಗಿ ಮಾಡುವದಿಲ್ಲ ಎಂಬುದನ್ನು ಪೌಲನು 2:25-29 ರಲ್ಲಿ ತೋರಿಸಿ ಕೊಟ್ಟದ್ದಾನೆ. ಆತನು ಈ ಮಾತುಗಳೊಂದಿಗೆ ಆರಂಭಿಸುತ್ತಾನೆ, **ಸುನ್ನತಿಯೆಂಬ ಸಂಸ್ಕಾರವು ಪ್ರಯೋಜನವಾದದ್ದೇ ಸರಿ.** ಇದು ಸತ್ಯವಾದದ್ದು, ಯಾಕೆಂದರೆ ದೇವರು ಯೆಹೂದ್ಯರನ್ನು ಕೆಲವೊಂದು ಆತ್ಮೀಕ ಪ್ರಯೋಜನಗಳಿಂದ ಆಶೀರ್ವದಿಸಿದ್ದಾನೆ (ನೋಡಿರಿ 3:1, 2). ಒಬ್ಬ ಯೆಹೂದ್ಯನಾಗಿರಬೇಕೆಂದರೆ ಸುನ್ನತಿಯು ಅತ್ಯವಶ್ಯಕವಾಗಿತ್ತಾದ್ದರಿಂದ ಅದಕ್ಕೆ ಮೌಲ್ಯವಿತ್ತು.

"ಸುನ್ನತಿ" ಎಂಬದು ಒಂದು ಸಂಯುಕ್ತ ಪದ (περιτομή, *peritomē*) ವಾಗಿದ್ದು ಅದು "ಕತ್ತರಿಸು" (τέμνω, *temnō*) ಎಂಬ ಕ್ರಿಯಾಪದ ಹಾಗೂ "ಸುತ್ತಲು" (περί, *peri*) ಎಂಬ ಉಪಸರ್ಗವನ್ನು ಒಳಗೊಂಡ ಪದವಾಗಿದೆ. ಅದರ ಅಕ್ಷರಶಃ ಅರ್ಥವು "ಸುತ್ತಲು ಕತ್ತರಿಸುವಿಕೆ." [53] ಆಂಗ್ಲದ "circumcision" ಎಂಬುದು ಲ್ಯಾಟಿನ್ ಪದದ ರೂಪವಾಗಿದ್ದು ಅದೇ ಅರ್ಥವನ್ನು (*circum* ["ಸುತ್ತಲು"] ಮತ್ತು *cise* ["ಕತ್ತರಿಸು" ]) ಹೊಂದಿರುತ್ತದೆ. ಗ್ರೀಕ್ ಹಾಗೂ ಆಂಗ್ಲದಲ್ಲಿಯೂ, ಈ ಪದವು ಶಸ್ತ್ರಚಿಕಿತ್ಸೆಯಿಂದ ಮುಂದೊಗಲನ್ನು (ತುದಿಯ ಚರ್ಮವನ್ನು) ಕತ್ತರಿಸಿ ತೆಗೆಯುವ ಪ್ರಕ್ರಿಯೆಯನ್ನು ಸೂಚಿಸುತ್ತದೆ (ನೋಡಿರಿ ಆದಿಕಾಂಡ 17:11; ವಿಮೋಚನಕಾಂಡ 4:25).

ಯೆಹೂದ್ಯರ ತಂದೆತಾಯಿಗಳು ತಮ್ಮ ಮಕ್ಕಳಿಗೆ ದೇವರು ಅಬ್ರಹಾಮನ ಸಂಗಡ ಮಾಡಿಕೊಂಡ ಒಡಂಬಡಿಕೆಯ ಬಗ್ಗೆ ಮಾತಾಡುವದರಲ್ಲಿ ಎಂದಿಗೂ ಸುಸ್ತಾಗುತ್ತಿರಲಿಲ್ಲ:

ಇದಲ್ಲದೆ ದೇವರು ಅಬ್ರಹಾಮನಿಗೆ—ನೀನಂತೂ ನನ್ನ ಒಡಂಬಡಿಕೆ ಯನ್ನು ಕೈಕೊಂಡು ನಡೆಯಬೇಕು. ನೀನು ಮಾತ್ರವಲ್ಲದೆ ನಿನ್ನ ಸಂತತಿಯವರೂ ಎಲ್ಲಾ ತಲಾಂತರಗಳಲ್ಲಿ ಅದನ್ನು ಕೈಕೊಂಡು ನಡೆಯಬೇಕು. ನೀನೂ ನಿನ್ನ ಹಿಂದೆ ಬರುವ ಸಂತತಿಯವರೂ ಕೈಕೊಳ್ಳಬೇಕಾದ ನನ್ನ ನಿಬಂಧನೆಯು ಯಾವದಂದರೆ- ನಿಮ್ಮಲ್ಲಿ ಪ್ರತಿಯೊಬ್ಬ ಗಂಡಸಿಗೂ ಸುನ್ನತಿಯಾಗಬೇಕೆಂಬದೇ. ನೀವು ಮಾನಸ್ಥಾನದಲ್ಲಿ ಸುನ್ನತಿ ಮಾಡಿಸಿ ಕೊಳ್ಳಬೇಕು; ಅದೇ ನಿಮಗೂ ನನಗೂ ಉಂಟಾದ ಒಡಂಬಡಿಕೆಗೆ ಗುರುತು. ಎಲ್ಲಾ ತಲಾಂತರಗಳಲ್ಲಿ ನಿಮ್ಮಲ್ಲಿರುವ ಪ್ರತಿಯೊಬ್ಬ ಗಂಡಸೂ ಮನೆಯಲ್ಲಿ ಹುಟ್ಟಿದವನಾದರೂ ನಿನ್ನ ಸಂತತಿಯಲ್ಲಿ ಹುಟ್ಟದೆ ಅನ್ಯರಿಂದ ಕ್ರಯಕ್ಕೆ ತೆಗೆದುಕೊಂಡವನಾದರೂ ಎಂಟು ದಿನಗಳ ವಯಸ್ಸುಳ್ಳವನಾದಾಗ ಅವನಿಗೆ ಸುನ್ನತಿಮಾಡಿಸಬೇಕು . . . " (ಆದಿಕಾಂಡ 17:9-12).

ಸುನ್ನತಿಯು ದೇವರು ಮತ್ತು ಅಬ್ರಹಾಮನ ನಡುವಿನ "ಒಡಂಬಡಿಕೆಯ ಗುರುತಾಗಿತ್ತು." ರೋಮಾ 4:11 ರಲ್ಲಿ ಪೌಲನು ಆಬ್ರಹಾಮನ ವಿಷಯವಾಗಿ ಇದೇ ರೀತಿಯ ಭಾಷೆಯನ್ನು ಉಪಯೋಗಿಸಿದನು: "ಆತನು ಸುನ್ನತಿಯೆಂಬ ಸಂಸ್ಕಾರವನ್ನು ಗುರುತಾಗಿ ಹೊಂದಿದನು. ಇದು . . . ಅವನಿಗೆ ನಂಬಿಕೆಯಿಂದಾದ ನೀತಿಗೆ *ಮುದ್ರೆಯಾಗಿತ್ತು*" (ಒತ್ತಿ ಹೇಳಿದ್ದು ನನ್ನದು).

ಸುನ್ನತಿಯನ್ನು ಅಬ್ರಹಾಮನ ಕಾಲದಿಂದಲೂ ಇಸ್ರಾಯೇಲರಲ್ಲಿ ವಾಡಿಕೆಯಾಗಿ ಆಚರಿಸಲ್ಪಡುತ್ತಿತ್ತು. ಇಂದು ಸುನ್ನತಿಯು ಕೆಲವು ಗಂಡು ಮಕ್ಕಳಿಗೆ ವೈದ್ಯಕೀಯ ಕಾರಣಗಳಿಂದಾಗಿ ಮಾಡಲ್ಪಡುತ್ತಿದೆ; ಆದರೆ ಯೆಹೂದ್ಯರಿಗಾದರೋ, ಇದೊಂದು ಕಾಲಕಾಲಕ್ಕೂ ಘನಹೊಂದುವ ಹಾಗೂ ಅತ್ಯಂಥ ಗೌರವಾನ್ವಿತವಾದ ಧಾರ್ಮಿಕ ಸಂಸ್ಕಾರವಾಗಿತ್ತು.[54] ಸುನ್ನತಿಯು "ಯೆಹೂದ್ಯನೆಂದು ಗುರುತು ಹಾಕುವಂಥ (ಒಬ್ಬ ಯೆಹೂದ್ಯನಿಗೆ) ಒಂದು ಶಸ್ತ್ರಚಿಕಿತ್ಸಾ ಸಂಸ್ಕಾರವಾಗಿದೆ." ಇದು "ದೇವರಿಗೆ ಸೇರಿದವರೆಂಬುದಕ್ಕೆ ಅತ್ಯಂಥ ನಿಕಟವಾದ ಗುರುತು ಆಗಿರುತ್ತದೆ" (2:25; MSG; Phillips). ಯೆಹೂದ್ಯರು ಹೆಮ್ಮೆಯಿಂದ ತಮ್ಮನ್ನು "ಸುನ್ನತಿಯವರು" ಎಂದು ಕರೆದುಕೊಂಡರು ಹಾಗೂ ಅನ್ಯಜನರನ್ನು "ಸುನ್ನತಿಯಿಲ್ಲದವರು" ಎಂದು ಕರೆಯುತ್ತಿದ್ದರು (ನೋಡಿರಿ 3:30).

ಯೆಹೂದ್ಯರ ಮನಸ್ಸಿನಲ್ಲಿ ಸುನ್ನತಿಗಿದ್ದ ಪ್ರಾಮುಖ್ಯತೆಯು ರಬ್ಬಿಗಳಿಂದ ಬರೆಯಲ್ಪಟ್ಟ ಪ್ರೇರಣೆಯಾಗದ ಬರಹಗಳಲ್ಲಿ ಕಂಡು ಬರುತ್ತದೆ. "ಸುನ್ನತಿ ಹೊಂದಿದವರೆಲ್ಲರಿಗೂ ಬರಲಿರುವ ಜಗತ್ತಿನಲ್ಲಿ ಭಾಗವಿರುತ್ತದೆ"[55]; "ಸುನ್ನತಿಯು ಇಸ್ರಾಯೇಲರನ್ನು Gehennaದಿಂದ (ನರಕದಿಂದ) ವಿಮೋಚಿಸುವದು"[56]; "ಸುನ್ನತಿ ಹೊಂದಿರುವ ಒಬ್ಬ ಯೆಹೂದ್ಯನು ಸಹ ನರಕವನ್ನು ಕಾಣಲಾರನು."[57] ಈ ಚದುರ್ನುಡಿಗಳು ದೇವರಿಗೆ ವಿಧೇಯವಾಗುವ ಅಥವಾ ಅವಿಧೇಯವಾಗುವ ವಿಚಾರವಾಗಿ ಯಾವದೇ ಚಿಂತೆಯನ್ನು ವ್ಯಕ್ತಪಡಿಸುವದಿಲ್ಲ; ಕೇವಲ ಸುನ್ನತಿ ಹೊಂದಿದ್ದರೆ ಸಾಕು ಅವರು ಕರ್ತನ ಸಂಗಡ ನಿತ್ಯಜೀವವನ್ನು ಪಡೆದುಕೊಂಡು ಜೀವಿಸುವರು ಎಂಬರ್ಥದಲ್ಲಿ ಹೇಳಲಾಗಿರುತ್ತವೆ.

ಸುನ್ನತಿಯು ಮೌಲ್ಯವುಳ್ಳದ್ದು ಎಂದು ಹೇಳಿದ ಬಳಿಕ, ಪೌಲನು ಹೇಳಿಕೆಯನ್ನು ಶರತ್ತುಬದ್ಧಗೊಳಿಸುತ್ತಾನೆ: **ನೀನು ಧರ್ಮಶಾಸ್ತ್ರಾನುಸಾರ ನಡೆಯುವವನಾದರೆ.**

ಸುನ್ನತಿಯು ಸುನ್ನತಿಗಷ್ಟೇ ಸಿಮೀತವಾಗಿರುವದಕ್ಕೆ ಕೊಡಲ್ಪಟ್ಟಿರಲಿಲ್ಲ. ಒಬ್ಬನು ದೇವರ ಸಂಗಡ ಒಡಂಬಡಿಕೆಯ ಸಂಬಂಧದಲ್ಲಿದ್ದಾನೆಂಬುದಕ್ಕೆ ಅದೊಂದು ಗುರುತಾಗಿತ್ತು. ಆದರೆ ಸುನ್ನತಿ ಹೊಂದಿರುವ ಒಬ್ಬನು ಒಡಂಬಡಿಕೆಯನ್ನು ನೆರವೇರಿಸಬೇಕೆಂಬ ಬಾಧ್ಯತೆ ಹೊಂದಿದವನಾಗಿರುತ್ತಿದ್ದನು (ನೋಡಿರಿ ಗಲಾತ್ಯ 5:3). ದುಃಖಕರವೆಂದರೆ, ಯೆಹೂದ್ಯರು ವಿಧೇಯತೆಯ *ಬದಲಾಗಿ* ಸುನ್ನತಿವೊಂದಿದ್ದರೆ ಸಾಕು ಎಂದು ಭಾವಿಸಿಕೊಂಡಿದ್ದರು.

ಸುನ್ನತಿಯಾದವನೊಬ್ಬನು "ಧರ್ಮಶಾಸ್ತ್ರವನ್ನು ಅನುಸರಿಸಲು" ವಿಫಲನಾದರೆ ಏನಾಗುತ್ತಿತ್ತು? ಪೌಲನು ಹೀಗೆ ಹೇಳಿದನು, **ಆದರೆ ನೀನು ಧರ್ಮಶಾಸ್ತ್ರವನ್ನು ಮೀರಿ ನಡೆಯುವವನಾಗಿದ್ದರೆ ನಿನಗೆ ಸುನ್ನತಿಯಿದ್ದರೂ ಇಲ್ಲದಂತಾಯಿತು.** ಒಬ್ಬ ಯೆಹೂದ್ಯನಿಗೆ ಈ ಮಾತುಗಳು ಎಷ್ಟು ಆಘಾತವುಂಟು ಮಾಡಿರಬೇಕು: ಒಬ್ಬ ಯೆಹೂದ್ಯನು "ಸುನ್ನತಿಯಿಲ್ಲದವನಾಗುವದು" ಎಂಬುದನ್ನು ಯೋಚಿಸಲು ಸಹ ಆಗದ ವಿಷಯವಾಗಿತ್ತು! ಖಂಡಿತವಾಗಿಯೂ, ಪೌಲನು ಇಲ್ಲಿ ಶಸ್ತ್ರಚಿಕಿತ್ಸೆಯಿಂದ ಸುನ್ನತಿಯನ್ನು ತೆಗೆದುಹಾಕುವ ಬಗ್ಗೆ ಮಾತಾಡುತ್ತಿಲ್ಲ. ಬದಲಾಗಿ, ಆತನ ತಾತ್ಪರ್ಯವೇನಾಗಿತ್ತೆಂದರೆ, ಯೆಹೂದ್ಯರು ದೇವರೊಂದಿಗಿನ ತಮ್ಮ ಒಡಂಬಡಿಕೆಯನ್ನು ನೆರವೇರಿಸಿಲ್ಲವಾದರೆ, ಅವರು ತಾವು ಎಂದಿಗೂ ಒಡಂಬಡಿಕೆಯ ಗುರುತನ್ನು ಪಡೆದೇ ಇಲ್ಲವೆನೋ *ಎಂಬಂತೆ* ವರ್ತಿಸುವವರಾಗಿದ್ದರು ಎಂಬುದೆ (ನೋಡಿರಿ NIV).

ಒಬ್ಬ ಪುರುಷನು ತನ್ನ ಮದಲಗಿತ್ತಿಯೊಂದಿಗೆ ವಿವಾಹ ಪ್ರತಿಜ್ಞೆಗಳನ್ನು ಮಾಡಿಕೊಂಡ ಬಳಿಕ ಆತನು ವಿವಾಹವನ್ನೇ ಮಾಡಿಕೊಂಡಿಲ್ಲವೆನೋ ಎಂಬಂತೆ ನಡೆದುಕೊಂಡರೆ ಅಹಸ್ಯಕರವಾಗಿರುತ್ತದೆ. ಒಬ್ಬ ವ್ಯಕ್ತಿಯು ನೇರವೇರಿಸಬೇಕೆಂಬ ಉದ್ದೇಶವೇ ಇಲ್ಲದೆ ಒಂದು ಒಪ್ಪಂದವನ್ನು ಮಾಡಿಕೊಂಡರೆ ಹೇಸಿಗೆಕರವಾಗಿರುತ್ತದೆ. ಒಬ್ಬ ಮನುಷ್ಯನು ಕರ್ತನ ಸಂಗಡ ಒಡಂಬಡಿಕೆಯನ್ನು ಮಾಡಿಕೊಂಡು, ಆಮೇಲೆ ಅದನ್ನು ನಿರ್ಲಕ್ಷಿಸುವ ದಾದರೆ ಅದು ಇನ್ನೆಷ್ಟು ಅಗೌರವಕರವಾಗಿರುವದು!

**ವಚನ 26.** "ಸುನ್ನತಿಯಿದ್ದವನು" ಸುನ್ನತಿಯಿಲ್ಲದವನಾಗುವದಕ್ಕೆ ಸಾಧ್ಯವಿರುವ ದಾದಲ್ಲಿ "ಸುನ್ನತಿಯಿಲ್ಲದವನು" ಒಬ್ಬ "ಸುನ್ನತಿ ಹೊಂದಿರುವವನಂತೆ" ನೋಡಲ್ಪಡುವ ಸಾಧ್ಯತೆ ಸಹ ಇತ್ತು. ಪೌಲನು ಮುಂದುವರೆಸಿದನು, **ಹೀಗಿರಲಾಗಿ ಸುನ್ನತಿಯಿಲ್ಲದವನು ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ ಸುನ್ನತಿಯಿಲ್ಲದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ?**

"ಸುನ್ನತಿಯಿಲ್ಲದವನು" ಎಂಬದನ್ನು "ಸುನ್ನತಿಯಿಲ್ಲದ" ಎಂದು ಸಹ ಅನುವಾದಿಸ ಬಹುದು (ನೋಡಿರಿ KJV). ವಚನ 25 ರಲ್ಲಿ "ಸುನ್ನತಿಯಿಲ್ಲದ" ಎಂಬ ಪದವು ಗ್ರೀಕ್.ನ "ಸುನ್ನತಿ" ಎಂಬದಕ್ಕೆ ಮುಂಚೆ ಒಂದು ನಕಾರಾತ್ಮಕ (α, *a*) ಸೇರಿಸಲ್ಪಡಬೇಕೆಂದು ನಾವು ನಿರೀಕ್ಷಿಸಬಹುದು. ಅದರ ಬದಲಿಗೆ ಇಲ್ಲಿ ಒಂದು ಬೇರೆ ಪದವು, ಒಂದು ಸಂಯುಕ್ತ ಪದವು ಉಪಯೋಗಿಸಲ್ಪಟ್ಟಿದೆ (ἀκροβυστία, *akrobustia*), ಇದರ ಅರ್ಥವು "ಮುಂದೋಗಲು."[58]

ಈ ಸುನ್ನತಿಯಿಲ್ಲದವನು "ಧರ್ಮಶಾಸ್ತ್ರದಲ್ಲಿ ನೇಮಗಳ ಪ್ರಕಾರ" *ನಡೆದರೆ ಎಂಬ* ಕುರಿತು ಪೌಲನು ಮಾತಾಡಿದನು. ಅನುವಾದಿಸಲ್ಪಟ್ಟ ಕ್ರಿಯಾಪದವು "ನಡೆದರೆ" (φυλάσσω, *phulassō*) ಎಂಬದರರ್ಥವು "ಕಾಪಾಡು," "ಸಂರಕ್ಷಿಸಿ ಕೈಕೊಳ್ಳುವದು

. . ."[59] ಇಲ್ಲಿ ಇದರರ್ಥವು ಧರ್ಮಶಾಸ್ತ್ರವು ಉಲ್ಲಂಘಿಸಲ್ಪಡದಂತೆ ಸಂರಕ್ಷಿಸಲು ಅದನ್ನು "ಕಾಪಾಡು," ಅದರ ತತ್ವಗಳನ್ನು ಪಾಲಿಸು ಎಂದಾಗಿರುತ್ತದೆ.[60] "ನೇಮಗಳು" ಎಂಬುದು δικαίωμα (*dikaiōma*) ಎಂಬದರಿಂದ ಅನುವಾದಿಸಲ್ಪಟ್ಟಿದೆ. ಇದು ಬಹುಮುಖದ "ನೀತಿ" ಎಂಬ ಕುಟುಂಬ ಪದಗಳಿಗೆ ಸೇರಿದ್ದಾಗಿದೆ. KJVಯು ಈ ಪದವನ್ನು "ನೀತಿ" ಎಂದು ಅನುವಾದಿಸುತ್ತದೆ; NKJVಯು ಇದನ್ನು "ನೀತಿಯ ನೇಮಗಳು" ಎಂದು ಅನುವಾದಿಸುತ್ತದೆ.

ಕೆಲವು ವಚನಗಳ ಮುಂಚೆ, ಹಲವು ಅನ್ಯಜನರು "ಸ್ವಾಭಾವಿಕವಾಗಿ ಧರ್ಮಶಾಸ್ತ್ರದಲ್ಲಿ ಹೇಳಲ್ಪಟ್ಟ ಸಂಗತಿಗಳನ್ನು" ಮಾಡಿದರು ಎಂದು ಪೌಲನು ಹೇಳಿದ್ದನ್ನು ನೋಡಿದೆವು (2:14). ಅವರ ಬಳಿಯಲ್ಲಿ ದೇವರಿಂದ ಲಿಖಿತ ಧರ್ಮಶಾಸ್ತ್ರ ಇರಲಿಲ್ಲ, ಆದರೆ ಅವರಿಗೆ ಯಾವದು ಸರಿ ಹಾಗೂ ತಪ್ಪು ಎಂಬ ಪ್ರಜ್ಞೆಯಿತ್ತು ಮತ್ತು ಮೋಶೆಯ ಧರ್ಮಶಾಸ್ತ್ರದಲ್ಲಿರುವ ರೀತಿಯಲ್ಲಿಯೇ ಕೆಲವು ನೈತಿಕ ನೇಮಗಳನ್ನು ಅನುಸರಿಸುತ್ತಿದ್ದರು. ಪೌಲನು ಈಗ ಅಂಥ ವ್ಯಕ್ತಿಗಳ ಉದಾಹರಣೆಯನ್ನು ಉಪಯೋಗಿಸಿ ದೈಹಿಕ ಸುನ್ನತಿಯಿದ್ದರೆ ಮಾತ್ರ ಸಾಕಾಗುವದಿಲ್ಲ ಎಂಬುದನ್ನು ಸಾಭಿತುಪಡಿಸುತ್ತಾನೆ: "ಹೀಗಿರಲಾಗಿ ಸುನ್ನತಿಯಿಲ್ಲದವನು [ಸ್ವಾಭಾವಿಕವಾಗಿ] ಧರ್ಮಶಾಸ್ತ್ರದ ನೇಮಗಳ ಪ್ರಕಾರ ನಡೆದರೆ [ಆತನ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರವಿಲ್ಲವಾದಾಗ್ಯೂ] ಸುನ್ನತಿಯಿಲ್ಲ ದವನಾಗಿದ್ದರೂ ಸುನ್ನತಿಯಿದ್ದವನಂತೆ ಎಣಿಸಲ್ಪಡುವದಿಲ್ಲವೇ?" "ಎಣಿಸಲ್ಪಡುವ." ಎಂಬುದು λογίζομαι (*logizomai*) ಎಂಬ ಪದದ ಅನುವಾದವಾಗಿದೆ, ಅದರರ್ಥವು "ಎಣಿಸಲ್ಪಡು" ಅಥವಾ "ಲೆಕ್ಕಮಾಡು."[61] NCV ಯಲ್ಲಿ ಹೀಗಿದೆ, "ಧರ್ಮಶಾಸ್ತ್ರ ಹೇಳುವ ದನ್ನು ಅವರು ಮಾಡುವದಾದರೆ, ಅವರು ಸುನ್ನತಿ ಹೊಂದಿರುವಂತೆಯೇ ಆಗಿರುತ್ತದೆ" (ಒತ್ತಿ ಹೇಳಿದ್ದು ನನ್ನದು).

John R. W. Stott ಇಲ್ಲಿ ಪೌಲನ ಇಮ್ಮಡಿಯಾದ ಸಮರ್ಥನೆಯನ್ನು ಎರಡು ಸರಳ ಹೋಲಿಕೆಗಳಲ್ಲಿ ಕೊಡುತ್ತಾನೆ:[62]

ಸುನ್ನತಿ - ವಿಧೇಯತೆ = ಸುನ್ನತಿಯಿಲ್ಲದಿರುವಿಕೆ
ಸುನ್ನತಿಯಿಲ್ಲದಿರುವಿಕೆ + ವಿಧೇಯತೆ = ಸುನ್ನತಿ

ಇವುಗಳು ಯೆಹೂದ್ಯರಿಗೆ ಎಂಥ ಆಘಾತಕಾರಿ ಪರಿಕಲ್ಪನೆಯಾಗಿ ತೋರಿರಬಹುದು! ಹೇಗೂ, ಪೌಲನು ಮನಸ್ಸು ಕಲಕುವ ತನ್ನ ಹೇಳಿಕೆಗಳನ್ನು ಇನ್ನು ಮುಗಿಸಿರಲಿಲ್ಲ.

**ವಚನ 27.** ಈ ವಚನವು, **ಅವನು ಶರೀರದಲ್ಲಿ ಸುನ್ನತಿಯಿಲ್ಲದವನಾಗಿದ್ದು ಧರ್ಮಶಾಸ್ತ್ರದಲ್ಲಿ ಹೇಳಿದ್ದನ್ನು ನೆರವೇರಿಸುವದರಲ್ಲಿ . . .** ಎಂದು ಆರಂಭವಾಗುತ್ತದೆ. "ಶರೀರದಲ್ಲಿ" ಎಂಬದಕ್ಕೆ ಗ್ರೀಕ್ ಪದವು (ἐκ φύσεως, *ek phuseōs*) ಅಕ್ಷರಶಃ "ಸ್ವಬಾವದಿಂದ" (KJV) ಎಂದು ಅನುವಾದಿಸಲ್ಪಡಬಹುದಾಗಿದೆ. ಸುನ್ನತಿಯಿಲ್ಲದ ಅನ್ಯಜನರು ಅವರ ಸ್ವಾಭಾವಿಕ ಸ್ಥಿತಿಯಲ್ಲಿದ್ದರು—ಅವರು ಹುಟ್ಟಿದ ಶಾರೀರಿಕ ಸ್ಥಿತಿಯಲ್ಲಿ. ಅನುವಾದಿಸಲ್ಪಟ್ಟ "ನೆರವೇರಿಸುವದರಲ್ಲಿ" ಎಂಬುದು 21ನೇ ವಚನದಲ್ಲಿನ "ಕೈಕೊಂಡರೆ" ಎಂಬ ಪದಕ್ಕಿಂತ ವ್ಯತ್ಯಾಸವಾದದ್ದು. ಇದು τελέω (*teleō*) ಎಂಬ ಪದದಿಂದ ಬಂದದ್ದಾಗಿದೆ ಮತ್ತು τέλος (*telos,* "ಮುಗಿಸು") ಎಂಬ ಪದಕ್ಕೆ ಸಂಬಂಧಿಯಾಗಿದೆ.

ಇದರರ್ಥವು “ಉದ್ದೇಶಿತ ಮುಕ್ತಾಯಕ್ಕೆ ತರುವದು.”[63] KJV ಯಲ್ಲಿ “ನೆರವೇರಿಸು” ಎಂದಿರುತ್ತದೆ. ವಾಸ್ತವದಲ್ಲಿ ಅನ್ಯಜನರು ಮೋಶೆಯ ಧರ್ಮಶಾಸ್ತ್ರಕ್ಕೆ (ಅದು ಅವರ ಬಳಿಯಲ್ಲಿರಲಿಲ್ಲ) ವಿಧೇಯರಾಗಲಿಲ್ಲ; ಆದರೆ ಅದೇ ರೀತಿಯ ನೈತಿಕತೆಗಳನ್ನು ಪಾಲಿಸುವ ಮೂಲಕ, ಅವರು ಧರ್ಮಶಾಸ್ತ್ರವು ಕೊಡಲ್ಪಟ್ಟ ಉದ್ದೇಶಗಳಲ್ಲೊಂದನ್ನು ನೆರವೇರಿಸಿದವರಾದರು.

ಧರ್ಮಶಾಸ್ತ್ರವನ್ನು ಪಾಲಿಸುವ ಅನ್ಯಜನಾಂಗದವನ ಕುರಿತಾಗಿ, ಪೌಲನು ಹೀಗೆ ಹೇಳಿದನು, **ಆತನು ಶಾಸ್ತ್ರವೂ ಸುನ್ನತಿಯೂ ಇದ್ದು ಧರ್ಮವನ್ನು ಮೀರಿ ನಡೆಯುವ ನಿನ್ನನ್ನು ದೋಷಿಯೆಂದು ನಿರ್ಣಯಿಸುವದಿಲ್ಲವೇ?** “ಶಾಸ್ತ್ರವು” ಎಂಬುದು ಗ್ರೀಕ್.ನ ಏಕೈಕ ಪದದಿಂದ (γράμμα, *gramma*) ಅನುವಾದಿಸಲ್ಪಟ್ಟಿದೆ, ಅದರರ್ಥವು “ಬರೆಯಲ್ಪಟ್ಟಿದ್ದನ್ನು”[64] ಎಂದಾಗಿರುತ್ತದೆ. NIV, RSV, ಮತ್ತು NKJVಗಳಲ್ಲಿ “ಬರೆಯಲ್ಪಟ್ಟ ವಿಧಿ” ಎಂದಿರುತ್ತದೆ. ಇಲ್ಲಿ ಸನ್ನಿವೇಶವು ತೋರ್ಪಡಿಸುವದೇನೆಂದರೆ, ಈ ವಚನದಲ್ಲಿ ಪದವು ಮೋಶೆಯ ಲಿಖಿತ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ. ಇಲ್ಲಿ ಇನ್ನೊಂದು ಅನಿರೀಕ್ಷಿತ ಸಂಗತಿಯಿತ್ತು. ಯೆಹೂದ್ಯರು ತಮ್ಮನ್ನು ಅನ್ಯಜನರಿಗೆ ಸಮರ್ಪಕರಾದ ನ್ಯಾಯಾಧಿಪತಿಗಳೆಂದು ಭಾವಿಸಿಕೊಂಡಿದ್ದರು (ನೋಡಿರಿ 2:1, 3), ಆದರೆ ಸರಿಯಾದದ್ದನ್ನು ಮಾಡಿದ ಅನ್ಯಜನರು ತಪ್ಪು ಮಾಡಿದ ಯೆಹೂದ್ಯರಿಗೆ “ದೋಷಿಯೆಂದು ನಿರ್ಣಯಿಸುವರು” (κρίνω, *krinō*) ಎಂದು ಪೌಲನು ಹೇಳುತ್ತಾನೆ! “ನ್ಯಾಯತೀರಿಸುವದು . . . ಇಲ್ಲಿ ಪರೋಕ್ಷವಾಗಿ ಹೋಲಿಕೆಯನ್ನು ತೀರ್ಪು ಮಾಡುವದು ಎಂಬದನ್ನು ಸೂಚಿಸುತ್ತದೆ”[65] ನಿನೆವೆಯ ಜನರು ಸಹ ಯೇಸುವನ್ನು ತಿರಸ್ಕರಿಸುವವರಿಗೆ ತೀರ್ಪು ಮಾಡುವರು ಎಂಬುದರ ರೀತಿಯಲ್ಲಿ (ಮತ್ತಾಯ 12:41).

**ವಚನ 28.** ಪೌಲನ ಕ್ರಾಂತಿಕಾರಿ ಹೇಳಿಕೆಗಳು ಅನೇಕ ಯೆಹೂದ್ಯರು ನಿಜವಾಗಿ “ಒಬ್ಬ ಯೆಹೂದಿ” ಯಾರೆಂಬುದನ್ನು ಮರು-ವ್ಯಾಖ್ಯಾನ ಮಾಡುವ ಬಗ್ಗೆ ಅವಲೋಕಿಸಿಕೊಳ್ಳುವಂತೆ ನಡಿಸುವದಾಗಿತ್ತು. ವಚನವು ಹೀಗೆ ಆರಂಭಗೊಳ್ಳುತ್ತದೆ, ಹೊರಗೆ ಮಾತ್ರ ಯೆಹೂದ್ಯನಾಗಿರುವವನು ಯೆಹೂದ್ಯನಲ್ಲ**.** ಹಲವಾರು ಭಾಷಾಂತರದ ಆವೃತ್ತಿಗಳು “ನಿಜ ಯೆಹೂದ್ಯ” (ನೋಡಿರಿ RSV; AB; TEV; LB; CEV; CJB) ಅಥವಾ “ಸತ್ಯವಾದ ಯೆಹೂದ್ಯ” (ನೋಡಿರಿ NEB; NCV; Phillips). “ಹೊರಗೆ ಮಾತ್ರ” ಎಂಬುದು ಮೂರು ಪದಗಳಿಂದ ಅನುವಾದಿಸಲ್ಪಟ್ಟಿದೆ (ἐν τῷ φανερῷ, *en tōi phanerōi*) ಅದರರ್ಥವು “ಗೋಚರ”—ಕಣ್ಣಿಗೆ ಗೋಚರವಾಗಬಹುದಾದ ರೀತಿಯಲ್ಲಿ. AB ಆವೃತ್ತಿಯಲ್ಲಿ “ಬಹಿರಂಗದಲ್ಲಿ ಮತ್ತು ಜನರೆದುರು,” ಎಂದಿದ್ದರೆ McCordನ ಭಾಷಾಂತರದ ಆವೃತ್ತಿಯಲ್ಲಿ “ಗೋಚರಿಸುವ ರೀತಿ” ಎಂದಿದೆ. ಇಲ್ಲಿ ಸೂಚಿಸಿ ಹೇಳಲ್ಪಟ್ಟಿರುವ ಸಂಗತಿಯು ಪ್ರತಿಯೊಬ್ಬ ಯೆಹೂದ್ಯನಿಗೆ ಬಹಳ ಪ್ರಿಯವಾಗಿರುತ್ತಿದ್ದ ಹೊರಗಿನ ಆಚಾರ ಮತ್ತು ಸಂಸ್ಕಾರ ಹಾಗೂ ಬಹಿರಂಗದ ನಿಷ್ಠೆಗಳ ಕುರಿತಾಗಿದೆ.

**ಹೊರಗೆ ಶರೀರದಲ್ಲಿ ಮಾತ್ರ ಮಾಡಿರುವ ಸುನ್ನತಿಯು ಸುನ್ನತಿಯಲ್ಲ.** “ಹೊರಗೆ” ಎಂಬುದು ಗ್ರೀಕ್ ಪದದ “ಬಹಿರಂಗವಾಗಿ” ಎಂಬದರಂತೆಯೇ ಆಗಿದೆ. “ಶರೀರದಲ್ಲಿ ಹೊರಗೆ” ಎಂಬದರ ಬದಲಿಗೆ NIV ಯಲ್ಲಿ “ಬಹಿರಂಗ ಮತ್ತು ಶಾರೀರಕವಾಗಿ” ಎಂದಿದೆ.

**ವಚನ 29.** ಹೊರಗಿನ ಆಚಾರಗಳು ಒಬ್ಬ ಯೆಹೂದ್ಯನನ್ನು ಯೆಹೂದ್ಯನಾಗಿಸಲಿಲ್ಲ

ವಾದಲ್ಲಿ, ಇನ್ನಾವದು ಆತನನ್ನು ಯೆಹೂದ್ಯನನ್ನಾಗಿಸಿತು? ಪೌಲನು ಹೇಳಿದನು, **ಆದರೆ ಒಳಗೆ ಯೆಹೂದ್ಯನಾಗಿರುವವನೇ ಯೆಹೂದ್ಯನು.** "ಒಳಗೆ" ಎಂಬುದು ಸಹ ಮೂರು ಪದಗಳಿಂದ (ἐν τῷ κρυπτῷ, *en tōi kruptōi)* ಅನುವಾದಿಸಲ್ಪಟ್ಟಿದೆ; ಈ ಪದಗಳ ಅರ್ಥವು "*ರಹಸ್ಯದಲ್ಲಿ*"-ಗೋಚರವಾಗದಂಥದ್ದು[66] ಎಂದಾಗಿರುತ್ತದೆ. McCord ನಲ್ಲಿ ಇದು "ಅದೃಶ್ಯ" ಎಂದಿರುತ್ತದೆ.

ಪೌಲನು ಮುಂದುವರೆಸುತ್ತಾನೆ, **ಮತ್ತು ಹೃದಯದಲ್ಲಿ ಆಗುವ ಸುನ್ನತಿಯೇ ಸುನ್ನತಿ.** ಈ ರೀತಿಯ ಪ್ರತಿಪಾದನೆಯನ್ನು ಯೆಹೂದ್ಯರು ಮುಂಚೆ ಎಂದಿಗೂ ಕೇಳಿರಲಿಲ್ಲ. ಹಳೆ ಒಡಂಬಡಿಕೆಯ ಲೇಖಕರು "ಹೃದಯಗಳ ಸುನ್ನತಿಯನ್ನು" ಹೊಂದಿರುವದರ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಿದ್ದರು (ನೋಡಿರಿ ಯಾಜಕಕಾಂಡ 26:41; ಧರ್ಮೋಪದೇಶಕಾಂಡ 30:6; ಯೆರೆಮೀಯ 9:25, 26; ಯೆಹೆಜ್ಕೇಲ 44:7, 9). ಮೋಶೆಯು ಇಸ್ರಾಯೇಲ್ಯರಿಗೆ, "ಆದದರಿಂದ ನೀವು ಆಜ್ಞೆಗೆ ಮಣಿಯದ ನಿಮ್ಮ ದುಸ್ವಭಾವವನ್ನು ಬಿಟ್ಟುಬಿಟ್ಟು ನಿಮ್ಮ ಹೃದಯದಲ್ಲೇ ಸುನ್ನತಿ ಮಾಡಿಕೊಳ್ಳಿರಿ" ಎಂದು ಆಜ್ಞಾಪಿಸಿದ್ದನು (ಧರ್ಮೋಪದೇಶಕಾಂಡ 10:16). ಯೆರೆಮೀಯನು ದೇವರಿಂದ ಈ ಸಂದೇಶವನ್ನು ಸಾರಿದ್ದನು: "ಯೆಹೂದದವರೇ, ಯೆರೂಸಲೇಮಿನ ನಿವಾಸಿಗಳೇ, ನಿಮ್ಮ ಹೃದಯದ ಮುಂದೋಗಲನ್ನು ತೆಗೆದುಹಾಕಿ ಯೆಹೋವನಿಗಾಗಿ ಸುನ್ನತಿಯಾಗಿರಿ; ಇಲ್ಲವಾದರೆ ನಿಮ್ಮ ದುಷ್ಕೃತ್ಯಗಳ ನಿಮಿತ್ತ ನನ್ನ ರೋಷವು ಜ್ವಾಲೆಯಂತೆ ಹೊರಟು ಯಾರೂ ಆರಿಸಲಾಗದಷ್ಟು ರಭಸವಾಗಿ ಧಗಧಗಿಸುವದು" (ಯೆರೆಮೀಯ 4:4).

ಶಾರೀರಿಕವಾದ ಸುನ್ನತಿಯು ಮುಂದೊಗಲನ್ನು ತೆಗೆಯುವದಕ್ಕಾಗಿ "ಸುತ್ತಲು ಕತ್ತರಿಸುವದಾಗಿತ್ತು." ಆತ್ಮೀಕ ಸುನ್ನತಿಯು ದುಷ್ಟತನ ಮತ್ತು ಅವಿಧೇಯತೆಗಳನ್ನು ಹೃದಯದಿಂದ ತೆಗೆದುಹಾಕುವದು-" ಕತ್ತರಿಸುವದಾಗಿತ್ತು," ಹೀಗೆ ಮಾನವನು ತನ್ನ ಕರ್ತನಿಗೆ ಘನತರುವದಕ್ಕೆ ಸಮರ್ಪಿತನಾಗುವದಾಗಿತ್ತು. ಶಾರೀರಕ ಸುನ್ನತಿಗೆ ಶಸ್ತ್ರಚಿಕಿತ್ಸೆ ಅಗತ್ಯವಿತ್ತು, ಆದರೆ ಹೃದಯದ ಸುನ್ನತಿಗೆ "ಆತ್ಮೀಕ ಶಸ್ತ್ರಚಿಕಿತ್ಸೆ" ಯ ಅಗತ್ಯವಿತ್ತು.

ಈ ಹೃದಯದ ಸುನ್ನತಿಯು **ಬಾಹ್ಯಾಚಾರಕ್ಕೆ ಸಂಬಂಧ ಪಟ್ಟದ್ದಲ್ಲ, ಆತ್ಮಕ್ಕೆ ಸಂಬಂದಪಟ್ಟದ್ದೇ.** "ಬಾಹ್ಯಾಚಾರ" ಎಂಬುದು 27ನೇ ವಚನದಲ್ಲಿನ "ಶಾಸ್ತ್ರವು" ಎಂಬರ್ಥ ಬರುವ ಪದದಿಂದ ಅನುವಾದಿಸಲ್ಪಟ್ಟಿದೆ. ಪುನಃ NIVಯಲ್ಲಿ "ಬರೆಯಲ್ಪಟ್ಟ ವಿಧಿ" ಎಂದಿರುತ್ತದೆ. ಈ ಸನ್ನಿವೇಶದಲ್ಲಿ, ಇದು ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತದೆ.

"ಬಾಹ್ಯಾಚಾರವು" "ಆತ್ಮ" ಕ್ಕೆ ತದ್ವಿರುದ್ಧಗೊಳಿಸಲ್ಪಟ್ಟಿದೆ (πνεῦμα, *pneuma*). ಇಲ್ಲಿ "ಆತ್ಮ" (spirit) ಎಂಬದಕ್ಕೆ ಆಂಗ್ಲದಲ್ಲಿ ದೊಡ್ಡ "S" ನಿಂದ ಉಚ್ಚರಿಸಬೇಕೋ ಅಥವಾ ಚಿಕ್ಕ "s" ನಿಂದ ಉಚ್ಚರಿಸಬೇಕೋ ಎಂಬ ಸಹಜವಾದ ಗೊಂದಲವು ಇರುತ್ತದೆ. ಕೆಲವು ಭಾಷಾಂತರಗಳು ಇದನ್ನು ಒಂದು ವಿಧದಲ್ಲಿಯೂ ಬೇರೆ ಭಾಷಾಂತರಗಳು ಇನ್ನೊಂದು ವಿಧದಲ್ಲಿಯೂ ಉಚ್ಚರಿಸುತ್ತವೆ. ಈ ಗೊಂದಲವು KJV ಮತ್ತು NKJVಯಲ್ಲಿ ದೃಷ್ಟಾಂತಪಡಿಸಲ್ಪಟ್ಟಿದೆ: KJV ಯಲ್ಲಿ ಚಿಕ್ಕ "s" ನಿಂದ ಇದ್ದರೆ NKJVಯಲ್ಲಿ ದೊಡ್ಡ "S" ಉಪಯೋಗಿಸಲ್ಪಟ್ಟಿದೆ.

ಆ ಪದವು ಚಿಕ್ಕ "s "ನಿಂದ ಆರಂಭಗೊಳ್ಳಬೇಕಿದ್ದಲ್ಲಿ ಬಹುಶಃ RSV ಯಲ್ಲಿ ಸರಿಯಾದ

ರೀತಿಯಲ್ಲಿರುತ್ತದೆ: "ನಿಜವಾದ ಸುನ್ನತಿಯು ಹೃದಯಕ್ಕೆ ಸಂಭಂದಿಸಿದ್ದು, *ಆತ್ಮೀಕವಾದದ್ದು* ಮತ್ತು ಅಕ್ಷರಶಃ ಅಲ್ಲ [ಅಂದರೆ, ಅಕ್ಷರಶಃ ಚರ್ಮವನ್ನು ಕತ್ತರಿಸುವದಲ್ಲ]" (ಒತ್ತಿ ಹೇಳಿದ್ದು ನನ್ನದು).

ಇಲ್ಲಿ ಪದವು ದೊಡ್ಡ "S" ನಿಂದ ಉಚ್ಚರಿಸತಕ್ಕದ್ದಾಗಿದ್ದರೆ, ಹೃದಯದ ಸುನ್ನತಿಯು ಒಂದು ದೈವೀಕ ಕ್ರಿಯೆಯೇ ಹೊರತು ಮಾನವನ ಕ್ರಿಯೆ ಆಗಿರುವದಿಲ್ಲ ಎಂಬದನ್ನು ಪೌಲನು ಬಹುಶಃ ಒತ್ತಿ ಹೇಳುತ್ತಿರಬಹುದಾಗಿದೆ. (ಒಬ್ಬ ಯೆಹೂದ್ಯನಿಗೆ "ಆತ್ಮಸಂಬಂಧ ದಿಂದ" ಅಂದರೆ "ದೇವರಾತ್ಮನಿಂದ" ಎಂಬ ಅರ್ಥವಾಗಿರುತ್ತಿತ್ತು. ಒಬ್ಬ ಪ್ರತ್ಯೇಕನಾದ ದೈವಿಕ ವ್ಯಕ್ತಿಯು ಪವಿತ್ರಾತ್ಮನಾಗಿ ಇರುವನೆಂಬುದು ಒಂದು ಹೊಸ ಒಡಂಬಡಿಕೆಯ ಸಿದ್ಧಾಂತವಾಗಿದೆ, ಹೊರತು ಹಳೆ ಒಡಂಬಡಿಕೆಯದ್ದಲ್ಲ.)[67] Eugene Peterson ಇದನ್ನು ಈ ರೀತಿಯಾಗಿ ವಿವರಿಸುತ್ತಾನೆ, "ಒಬ್ಬನನ್ನು ಯೆಹೂದ್ಯನನ್ನಾಗಿಸುವದು ನಿನ್ನ ಹೃದಯದ ಮೇಲಿನ ದೇವರ ಗುರುತೇ, ಹೊರತು ನಿಮ್ಮ ಚರ್ಮದ ಮೇಲೆ ಕತ್ತಿಯಿಂದಾದ ಗುರುತು ಅಲ್ಲ" (MSG).

Leon Morris ಗಮನಕ್ಕೆ ತಂದದ್ದೇನೆಂದರೆ "ಆತ್ಮ" ಎಂಬುದು ದೊಡ್ಡ "S" ನಿಂದ ಅಥವಾ ಚಿಕ್ಕ "s" ನಿಂದ ಉಚ್ಚರಿಸಲ್ಪಡುತ್ತದೆ, ಯಾವ ರೀತಿಯಿದ್ದರೂ ಅದೊಂದು ಉತ್ತಮ ಅರ್ಥವನ್ನು ಕೊಡುತ್ತದೆ. ಯಾವ ರೀತಿಯಲ್ಲಿ ಹೇಳಿದರೂ, ಪೌಲನು ಇಲ್ಲಿ ಒಂದು ವಿಷಯವನ್ನು ಮನದಟ್ಟು ಮಾಡುತ್ತಿದ್ದಾನೆ, "ಏನೆಂದರೆ ಧರ್ಮಶಾಸ್ತ್ರವು ಕೇಳುವಂಥ ಬಹಿರಂಗದ ನೇಮನಿಷ್ಠಗಳಲ್ಲಿ ಅರ್ಥವೇ ಇಲ್ಲದಂತಾಗದಿರಲು ಒಂದು ದೃಢೀಕರಣ ಇರುವದಕ್ಕೆ ಸಾಧ್ಯ ಎಂಬದೇ."[68] ಒಬ್ಬ ಯೆಹೂದ್ಯನು ಶರೀರದಲ್ಲಿ ಸುನ್ನತಿ ಹೊಂದಿದವನಾಗಿದ್ದು ಆತನ ಹೃದಯ ಹಾಗೆಯೇ ಉಳೀದುಬಿಟ್ಟರೆ, ಆತನ ಸುನ್ನತಿಯು ನಿಷ್ಪ್ರಯೋಜಕವಾಗುತ್ತದೆ.

ಪೌಲನು ಹೀಗೆ ಮುಕ್ತಾಯಗೊಳಿಸುತ್ತಾನೆ, **ಇಂಥಾ ಸುನ್ನತಿಯಿದ್ದವನಿಗೆ ಬರುವಂಥ ಹೊಗಳಿಕೆಯು ದೇವರಿಂದಲೇ ಹೊರತು ಮನುಷ್ಯರಿಂದಲ್ಲ.** ಮನುಷ್ಯರು ತಮ್ಮ ಕಣ್ಣಿಗೆ ಕಾಣಿಸಬಲ್ಲದ್ದನ್ನು ನೋಡಿ ಪ್ರಶಂಸಿಸುತ್ತಾರೆ, ಆದರೆ ದೇವರು ಕಾಣುವದಕ್ಕೆ ಸಾಧ್ಯವಿಲ್ಲದ್ದನ್ನು ಪ್ರಶಂಸಿಸುತ್ತಾನೆ: ಹೃದಯದ ಸುನ್ನತಿ (ನೋಡಿರಿ 1 ಸಮುವೇಲ 16:7). ಕರ್ತನನ್ನು ಪ್ರೀತಿಸುವವರು "ಮನುಷ್ಯರನ್ನು ಮೆಚ್ಚಿಸಬೇಕೆಂದಲ್ಲ, ಆದರೆ ದೇವರನ್ನೇ ಮೆಚ್ಚಿಸಬೇಕೆಂದು ಜೀವಿಸುತ್ತಾರೆ" (2:29; Phillips).

ಪೌಲನು ಇಲ್ಲಿ 29ನೇ ವಚನದ ಅಂತ್ಯದಲ್ಲಿ ಪದಗಳನ್ನು ಚಾಣಕ್ಷ್ಯತೆಯಿಂದ ಉಪಯೋಗಿಸಿದನೆಂದು ಕೆಲವರು ಭಾವಿಸುತ್ತಾರೆ. "ಯೆಹೂದ್ಯ" ಎಂಬ ಬಿರುದು "ಯೆಹೂದ" ಎಂಬದರಿಂದ ತೆಗೆದುಕೊಳ್ಳಲ್ಪಟ್ಟಿದೆ, ಅದು "ಪ್ರಶಂಸೆ" ಎಂಬ ಅರ್ಥ ಬರಿಸುತ್ತದೆ (ನೋಡಿರಿ ಆದಿಕಾಂಡ 29:35; 49:8). ಆದ್ದರಿಂದ, ಒಬ್ಬ ಯೆಹೂದ್ಯನು ತನ್ನನ್ನು "ಪ್ರಶಂಸಿಸಲ್ಪಟ್ಟವನು" ಎಂಬದಾಗಿ ಭಾವಿಸಿಕೊಳ್ಳಬಹುದಿತ್ತು. ಹೇಗೂ, "ಸ್ತುತಿಪಾತ್ರನ" ಹೃದಯವು ಸುನ್ನತಿಯಾಗಿರುವ ಹೊರತು, ಆತನಿಗೆ ಕೇವಲ ಮನುಷ್ಯರ ಪ್ರಶಂಸೆ ಸಿಕ್ಕಬಹುದಿತ್ತೇ ಹೊರತು ದೇವರಿಂದಲ್ಲ.

# ಅನ್ವಯಿಸುವಿಕೆ

**ಒಂದು ಮಹಾದಿನವು ಬರಲಿದೆ (2:1-11)**

ರೋಮಾ 2ರ ಮೊದಲ ಐದು ವಚನಗಳು ಸಾರುವದೇನೆಂದರೆ ದೇವರು ತೀರ್ಪುಮಾಡುವವರಿಗೆ (2:1-3) ಮತ್ತು ಪಶ್ಚಾತ್ತಾಪಪಡದವರಿಗೆ (2:4, 5) ನ್ಯಾಯತೀರಿಸುವನು. ಅನಂತರದ ವಚನಗಳಲ್ಲಿ, ಪೌಲನು ಸಾರಿದ್ದೇನೆಂದರೆ ಕರ್ತನು "ಪ್ರತಿಯೊಬ್ಬನಿಗೂ" (2:6), "ಪ್ರತಿ ನರಪ್ರಾಣಿ" (2:9), "ಪ್ರತಿಯೊಬ್ಬರಿಗೂ" ,(2:10) ಯೆಹೂದ್ಯರಿಗೂ ಅನ್ಯಜನರಿಗೂ (2:10, 11) ನ್ಯಾಯತೀರಿಸುವನು. ಯೇಸು ತನ್ನ ನ್ಯಾಯ ಸಿಂಹಾಸನದ ಮೇಲೆ ಕೂತುಕೊಳ್ಳುವಾಗ, "*ಎಲ್ಲಾ* ಜನಾಂಗಗಳು ಆತನ ಮುಂದೆ ಕೂಡಿಬರುವರು" (ಮತ್ತಾಯ 25:32; ಒತ್ತಿ ಹೇಳಿದ್ದು ನನ್ನದು). ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವರು, ಮತ್ತು ಅವರಲ್ಲಿ "ಪ್ರತಿಯೊಬ್ಬನಿಗೂ ಅವರವರ ಕೃತ್ಯಗಳಿಕೆ ತಕ್ಕಂತೆ ನ್ಯಾಯತೀರ್ಪಾಯಿತು" (ಪ್ರಕಟನೆ 20:12, 13; ನೋಡಿರಿ RSV).

ಅನೇಕರಿಗೆ ಪರಿಚಿತವಿರುವ ಒಂದು ಹಳೆಯ ಗೀತೆ, "ಒಂದು ಮಹಾ ದಿನ ಬರಲಿದೆ" ಎಂಬದು ಸಾರುವದೇನೆಂದರೆ,

ಒಂದು ಮಹಾ ದಿನವು ಬರಲಿದೆ,
ಒಂದು ಮಹಾ ದಿನವು ಬರಲಿದೆ,
ಒಂದು ಮಹಾ ದಿನವು ಸಮೀಪ, ಸಮೀಪ ಬರುತ್ತಿದೆ;
ಆಗ ದೇವಜನರು ಮತ್ತು ಪಾಪಿಗಳು ಬಲಕ್ಕೆ ಮತ್ತು ಎಡಕ್ಕೆ ವಿಂಗಡಿಸಲ್ಪಡುವರು,
ನೀನು ಬರಲಿರುವ ಆ ದಿನಕ್ಕಾಗಿ ಸಿದ್ಧನೋ?
ನೀನು ಸಿದ್ಧನೋ ನೀನು ಸಿದ್ಧನೋ?
ನೀನು ನ್ಯಾಯತೀರ್ಪಿನ ದಿನಕ್ಕಾಗಿ ಸಿದ್ಧನೋ?

ಕಡೇ ಚರಣವು ಈ ವಿಷಾದದ ಮಾತುಗಳನ್ನು ಹೊಂದಿದೆ:

ಒಂದು ದುಃಖದ ದಿನ ಬರಲಿದೆ,
ಒಂದು ದುಃಖದ ದಿನ ಬರಲಿದೆ
ಒಂದು ದುಃಖದ ದಿನ ಸಮೀಪ, ಸಮೀಪ ಬರುತ್ತಿದೆ;
ಆಗ ಪಾಪಿಯು ತನ್ನ ನಾಶನವನ್ನು ಆಲಿಸುವನು,
"ನನ್ನಿಂದ ತೊಲಗು, ನಿನ್ನನ್ನು ಅರಿಯೆನು,"
ನೀನು ಬರಲಿರುವ ಆ ದಿನಕ್ಕಾಗಿ ಸಿದ್ಧನೋ?[69]

ಆ ದಿನವು ಯಾವಾಗ ಬರುವದೆಂದು ನಮಗೆ ತಿಳಿಯದು (ಮತ್ತಾಯ 24:36). ಅದು

ಬರಲಿದೆ ಎಂಬದನ್ನು ಮಾತ್ರ ನಾವು ಬಲ್ಲೆವು ಮತ್ತು ಅದು ನಿನ್ನೆಯ ದಿನಕ್ಕಿಂತಲೂ ಈ ಹೊತ್ತು ಬಹಳ ಹತ್ತಿರವಾಗಿದೆ ಎಂದು ಬಲ್ಲೆವು!

ಇಬ್ರಿಯ ಪುಸ್ತಕದ ಲೇಖಕನು ಹೀಗೆ ಹೇಳಿದನು, "ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ನೇಮಕವಾಗಿದೆ" (ಇಬ್ರಿಯ 9:27). ಪೌಲನು ಅಥೆನೆಯ ತತ್ವಜ್ಞಾನಿಗಳಿಗೆ ಹೇಳಿದ್ದೇನೆಂದರೆ ದೇವರು "ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿನವನ್ನು ಗೊತ್ತುಮಾಡಿದ್ದಾನೆ" (ಅಪೊಸ್ತಲರ ಕೃತ್ಯಗಳು 17:31). ಆತನು ಹೇಳಿದ್ದೇನೆಂದರೆ, "ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10) ಇತಿಹಾಸವು ಎಡೆಬಿಡದೆ ಆ ಪರಾಕಾಷ್ಠೆಯ ದಿನದೆಡೆಗೆ ಸಾಗುತ್ತಿದೆ, ಆಗ ನ್ಯಾಯ ಒದಗಿಸಲ್ಪಡುವದು ಮತ್ತು ಎಲ್ಲಾ ತಪ್ಪುಗಳು ಸರಿ ಮಾಡಲ್ಪಡುವವು. ನೀನು ಆ ದಿನಕ್ಕಾಗಿ *ಸಿದ್ಧನಿದ್ದೀಯೋ*?

## ನೈತಿಕವಾಗಿ ಒಳ್ಳೇ ಮನುಷ್ಯ (2:1-3)

ಪೌಲನು ಯೆಹೂದಿ ವಾಚಕರಿಂದ ಒಂದು ಪ್ರತಿಕ್ರಿಯೆಯನ್ನು ಎದುರು ನೋಡುತ್ತಿದ್ದನು: "ಈಗಷ್ಟೇ ಬಣ್ಣಿಸಲಾದಂಥ ಆ ಭಯಂಕರ ಪಾಪಿಗಳ ಹಾಗೆ ನಾವಿರುವದಿಲ್ಲ ಎಂಬದಕ್ಕಾಗಿ ಕೃತಜ್ಞರಾಗಿದ್ದೇವೆ! ಅನ್ಯಜನರಂತಲ್ಲದೆ, ನಮ್ಮ ಬಳಿಯಲ್ಲಿ ಧರ್ಮಶಾಸ್ತ್ರದ ಮಾನದಂಡಗಳಿವೆ! ಈ ಕಾರಣದಿಂದ ನಾವು ನೈತಿಕವಾಗಿ ಉನ್ನತ ರಾಗಿದ್ದೇವೆ!" ಅದಕ್ಕೆ ಪ್ರತ್ಯುತ್ತರವಾಗಿ ಅಪೊಸ್ತಲನು ನುಡಿದ ಮಾತುಗಳು "ತಾವು ಒಳ್ಳೇಯವರು" ಎಂಬುದರ ಆಧಾರದ ಮೇಲೆ ರಕ್ಷಿಸಲ್ಪಟ್ಟಿದ್ದೇವೆಂದು ಭಾವಿಸಿಕೊಳ್ಳುವ ವರ ಕುರಿತಾಗಿ ಇರುತ್ತವೆ.

> ದೇವರ ವಿರುದ್ಧದ ಎಲ್ಲಾ ಅವಿಧೇಯತೆಯು ಸಹ ಹಾದರ ರೂಪವನ್ನು ಧರಿಸಿಕೊಳ್ಳುವದಿಲ್ಲ . . . . ನೈತಿಕವಾಗಿ ತೋರ್ಪಡಿಸಿಕೊಳ್ಳುವಂತ ಒಂದು ರೀತಿಯ ಕಳೆದು ಹೋಗಿರುವಿಕೆಯು ಇರುತ್ತದೆ. ಅದು ದೇವರ ವಿರುದ್ಧ ಅವಿಧೇಯತೆಯಂತೆ ಕಾಣಿಸುವದಿಲ್ಲ ಯಾಕೆಂದರೆ ಅದು ನೈತಿಕತೆಯೊಂದಿಗೆ ಸಂಬಂಧ ಹೊಂದಿರುತ್ತದೆ. ಹಾಗಿದ್ದರೂ, ಹೊರಗೆ ಕಳಂಕವಿಲ್ಲದದ್ದರ ಅಡಿಯಲ್ಲಿ ಒಂದು ಕತ್ತಲೆಯ ಮತ್ತು ಪಶ್ಚಾತ್ತಾಪವಿಲ್ಲದ ಹೃದಯ ಅಡಗಿಕೊಂಡಿರಬಹುದಾಗಿದೆ (ನೋಡಿರಿ ಮತ್ತಾಯ 23:25-28).[70]

ಮತ್ತೊಬ್ಬರಲ್ಲಿ ಪಾಪವನ್ನು ಕಾಣುವದು ಸುಲಭ ಆದರೆ ತನ್ನಲ್ಲಿ ಅದನ್ನು ಕಾಣುವದು ಬಹಳ ಕಷ್ಟಕರವಾಗಿರುತ್ತದೆ! "ನಮ್ಮ ಸ್ವಂತ ಪಾಪಗಳ ವಿಷಯಕ್ಕೆ ಬರುವಾಗ, ನಮ್ಮೆಲ್ಲರಿಗೂ ಕಣ್ಣು ಕುರುಡಾಗುತ್ತವೆ!"

NLTಯು 2ನೇ ಅಧ್ಯಾಯದ ಆರಂಭದ ಮಾತುಗಳನ್ನು ಈ ಭಾವಾರ್ಥದಲ್ಲಿ ಹೇಳುತ್ತದೆ: "ನೀನು ಹೇಳಿಕೊಳ್ಳು ತ್ತಿರಬಹುದು 'ನೀನು ಮಾತಾಡುತ್ತಿರುವ ಈ ಜನರು ಎಂಥಾ ಭಯಂಕರ ಜನರಾಗಿದ್ದೀರಬಹುದು!' ಎಂಬದಾಗಿ, ಆದರೆ ನೀನು ಸಹ ಅಷ್ಟೇ ಕೆಟ್ಟವನು."

## ಜೀವನದಲ್ಲಿ ಸ್ಥಿರತೆ (2:1)

ಸ್ಥಿರತೆಯಿಂದ ಇರುವದು ಕಷ್ಟಕರವಾದದ್ದು! ನಮ್ಮ ಕರ್ತನು ಸ್ಥಿರನಾಗಿದ್ದಾನೆ (ಇಬ್ರಿಯ 13:8; ಯಾಕೋಬ 1:17), ಆದರೆ ಅನೇಕ ವೇಳೆ ನಾವು ಹಾಗಿರುವದಿಲ್ಲ. "ದೇವರ ಆಲಯವನ್ನು ಹಾಳು ಮಾಡುವದಕ್ಕಾಗಿ" ಕಾನೂನುಬಾಹಿರ ಮಾದಕ ದ್ರವ್ಯ ಉಪಯೋಗಿಸುವವರನ್ನು ನಾವು ಖಂಡಿಸಬಹುದು (ನೋಡಿರಿ 1 ಕೊರಿಂಥ 3:16, 17; 6:19), ಆದರೆ ಅದೇ ವೇಳೆಯಲ್ಲಿ ನಮ್ಮ ಸ್ವದೇಹಗಳನ್ನು ಆರೈಕೆ ಮಾಡಿಕೊಳ್ಳಲು ವಿಫಲರಾಗುತ್ತೇವೆ.[71] ಕೆಲವರು ದಗಾಕೋರರು ಹಾಗೂ ಕೊಲೆಗಾರರಾದ ಅಪರಾಧಿಗಳನ್ನು ಕೀಳಾಗಿ ಕಾಣುವರು, ಆದರೆ ಅದೇ ವೇಳೆಯಲ್ಲಿ ಸಂಚಾರಿ ನಿಮಯಗಳನ್ನು ಉಲ್ಲಂಘಿಸುವಾಗ ಯಾವ ಯೋಚನೆಯೂ ಬರುವದಿಲ್ಲ (ನೋಡಿರಿ 13:1-5). ಇನ್ನು ಕೆಲವರು ಬ್ಯಾಂಕ್ ದರೋಡೆಕೋರರನ್ನು ಖಂಡಿಸುವರು, ಅದೇ ವೇಳೆಯಲ್ಲಿ ತಾವು ಸರ್ಕಾರಕ್ಕೆ ಸುಂಕ ಕಟ್ಟದೆ ಮೋಸ ಮಾಡುವದಕ್ಕೆ ಹಿಂಜರಿಯುವದಿಲ್ಲ (ನೋಡಿರಿ 13:6, 7). ಕೆಲವರು ವಾದ ಮಾಡುವದೇ ತಪ್ಪು ಎಂದು ವಾದಿಸುತ್ತಾರೆ, ಮತ್ತು ಇತರರು ಟೀಕಿಸುವವರನ್ನೇ ಟೀಕಿಸುತ್ತಾರೆ ಮತ್ತು ತೀರ್ಪುಮಾಡುವವರಿಗೇ ತೀರ್ಪು ಮಾಡುತ್ತಾರೆ.[72] ಬೇರೆಯವರಲ್ಲಿ ಪಾಪವನ್ನು ಕಾಣುವದು ಬಹಳ ಸುಲಭ ಮತ್ತು ತನ್ನಲ್ಲಿ ಅದನ್ನು ಕಂಡುಕೊಳ್ಳುವದು ಬಹಳ ಕಷ್ಟಕರವಾಗಿರುತ್ತದೆ (ಮತ್ತಾಯ 7:3-5; 23:24)!

ಯೆಹೂದ್ಯರು ತಮ್ಮನ್ನು ತಾವೇ ದೋಷಿಯೆಂದು ನಿರ್ಣಯಿಸಿಕೊಂಡು ನಿಂತಿದ್ದರು ಯಾಕೆಂದರೆ ಮತ್ತೊಬ್ಬರಲ್ಲಿ ಪಾಪವನ್ನು ಗುರುತಿಸುವದಕ್ಕೆ ಅವರಿಗಿದ್ದ "ತಲಾಂತು (ಪ್ರತಿಭೆ)" ಸ್ವತಃ ಅವರು ಪಾಪವನ್ನು ಗುರುತಿಸಬಲ್ಲರೆಂಬುದಕ್ಕೆ ಸಾಕ್ಷಿಯಾಗಿತ್ತು. ಅಷ್ಟು ಮಾತ್ರವಲ್ಲದೆ, ಪಾಪವು ದೇವರ ಚಿತ್ತಕ್ಕೆ ವಿರುದ್ಧವಾದದ್ದೆಂಬುದು ಅವರಿಗೆ ಗೊತ್ತಿತ್ತೆಂದು ಸ್ಪಷ್ಟವಾಗುತ್ತದೆ. ಈ ಸಂಗತಿಗಳು ಸತ್ಯವಾಗಿದ್ದವಾದ್ದರಿಂದ, ಸ್ವನೀತಿಯಿಂದ ತುಂಬಿರುವದರ ಬದಲಾಗಿ, ಅವರು ನೋವಿನಿಂದ-ಮತ್ತು ದೀನತೆಯಿಂದ—ತಮ್ಮ ಸ್ವಂತ ಪಾಪದ ಬಗ್ಗೆ ಪ್ರಜ್ಞೆಯುಳ್ಳವರಾಗಿರಬೇಕಿತ್ತು.

## ನಾವು ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವೆವೋ? (2:3)

ರೋಮಾ 2:3ರಲ್ಲಿನ ಪ್ರಶ್ನೆಯು ಇಂದಿಗೂ ಸಮಂಜಸವಾಗಿರುತ್ತದೆ: "ನೀನು ದೇವರ ದಂಡನೆಯ ತೀರ್ಪಿಗೆ ತಪ್ಪಿಸಿಕೊಂಡೇನೆಂದು ಯೋಚಿಸುತ್ತೀಯಾ?" ಕೆಲವು ಸಾರಿ ಅಪರಾಧ ಮಾಡಿದವರು *ಮನುಷ್ಯರ* ತೀರ್ಪಿನಿಂದ ತಪ್ಪಿಸಿಕೊಳ್ಳಬಹುದು. ಅವರ ಅಪರಾಧಗಳು ಬೆಳಕಿಗೆ ಬರದೇ ಹೋಗಬಹುದು, ಅಥವಾ ಸಿಕ್ಕಿ ಬೀಳದಿರಬಹುದು. ಸಿಕ್ಕಿಬಿದ್ದರೆ, ಅವರು ದುಬಾರಿ ವಕೀಲರನ್ನು ನೇಮಿಸಿಕೊಳ್ಳಲು ಶಕ್ತರಾಗಬಹುದು, ಆ ವಕೀಲರು ಕೆಲವು ತಾಂತ್ರೀಕ ದೋಷಗಳನ್ನು ಉಪಯೋಗಿಸಿ ಅವರನ್ನು ನಿರ್ದೋಷಿಗಳೆಂದು ಸಾಭಿತುಪಡಿಸುವರು. ಅವರಿಗೆ ದಂಡನೆ ತೀರ್ಪು ಆಗಿಬಿಟ್ಟರೂ, ಅವರು ಜೈಲಿನಿಂದ ತಪ್ಪಿಸಿಕೊಳ್ಳಲು ಶಕ್ತರಾಗಬಹುದು. *ದೇವರ* ನ್ಯಾಯತೀರ್ಪಿನ ವಿಷಯದಲ್ಲಿ ಈ ಯಾವ ಸಾಧ್ಯತೆಗಳೂ ಅನ್ವಯವಾಗುವದಿಲ್ಲ. ಯಾವ ಪಾಪವೂ ಬೆಳಕಿಗೆ ಬಾರದೇ ಹೋಗಲಾರದು (ಇಬ್ರಿಯ 4:13), ಮತ್ತು ನ್ಯಾಯತೀರ್ಪಿನ ದಿನದಲ್ಲಿ ಯಾವ ಪಾಪಿಯೂ ಗೈರುಹಾಜರನಾಗಲು ಸಾಧ್ಯವಿಲ್ಲ (ಪ್ರಕಟನೆ 20:12). ದೇವರ ವಾಕ್ಯದಲ್ಲಿ

“ಲೋಪದೋಷ” ಗಳಿಲ್ಲ (ನೋಡಿರಿ ಕೀರ್ತನೆ 18:30) ಮತ್ತು ನಿತ್ಯವಾದ ದಂಡಣೆಯ ಸ್ಥಳವಾದ ನರಕದಿಂದ ತಪ್ಪಿಸಿಕೊಳ್ಳಲು ದಾರಿಯೇ ಇಲ್ಲ (ಮಾರ್ಕ 9:44; ನೋಡಿರಿ ಲೂಕ 16:26).

ಕೆಲವು ಸಾರಿ ಜೀವನದಲ್ಲಿ ಯಾವದೇ ಖಚಿತತೆಗಳಿರುವದಿಲ್ಲ ಎಂದು ಅನ್ನಿಸುತ್ತದೆ, ಆದರೆ ಇದಂತೂ ಖಚಿತ: ಒಂದು ದಿನ ನ್ಯಾಯತೀರ್ಪಿನ ದಿನ *ಇರುವದು*; ಮತ್ತು ಇದುವರೆಗೂ ಜೀವಿಸಿದ ಪ್ರತಿಯೊಬ್ಬನೂ ಅಲ್ಲಿ *ಇರುವನು*. ನಾನು ಅಲ್ಲಿರುವೆನು, ಮತ್ತು ನೀವು ಇರುವಿರಿ. ನ್ಯಾಯತೀರ್ಪುನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ!

## ಒಂದು ಪ್ರಾಮುಖ್ಯವಾದ ಎಚ್ಚರಿಕೆ (2:4)

ಯೆಹೂದ್ಯರು ಬಿದ್ದಂಥ ಬಲೆಯಲ್ಲಿ ಬೀಳುವದು ಸುಲಭವಾಗಿರುತ್ತದೆ. ಬಹುಶಃ ಒಬ್ಬನು ತನ್ನ ಆದಾಯ ತೆರಿಗೆಯಲ್ಲಿ ವಂಚಿಸಬಹುದು . . . ಅಥವಾ ಬೇರೆ ಜಾತಿನಿಂದನೆ ಮಾಡುವ ಹಾಸ್ಯಚಟಾಕಿಗೆ ನಗಬಹುದು . . . ಅಥವಾ ಒಳಗೊಳಗೇ ಶಾಪದ ಮಾತುಗಳನ್ನು ಗುಣುಗುಟ್ಟಬಹುದು . . . ಅಥವಾ ಮತ್ತೊಬ್ಬನ ಹೆಂಡತಿಯನ್ನು ಆಶಿಸಬಹುದು. ಆತನು ಇದೆಲ್ಲವನ್ನೂ ಮಾಡುತ್ತಾನೆ ಮತ್ತು ಆತನಿಗೆ ಏನೂ ಸಂಭವಿಸುವದಿಲ್ಲ. ದೇವರು ಆ ಕ್ಷಣದಲ್ಲೇ ಅವನನ್ನು ಹೊಡೆದುಹಾಕುವದಿಲ್ಲ. ಅವನಿಗೆ ಆಕಾಶದಿಂದ ಸಿಡಿಲು ಬೀಳುವದಿಲ್ಲ. ಅವನು ಆ ಕ್ಷಣದಲ್ಲಿ “ನಾನು ತಪ್ಪಿಸಿಕೊಂಡೆನು,” ಆತನ ಮತ್ತು ದೇವರ ನಡುವೆ ಎಲ್ಲವೂ ಸರಿಯಿದೆ ಎಂದು ಭಾವಿಸುವದು ಸುಲಭವಾಗಿರಬಹುದು.

ತತ್ಪರಿಣಾಮವಾಗಿ, ನಮ್ಮಲ್ಲಿ ಯಾರೂ ಸಹ ದೇವರ ಸಹನೆಯನ್ನು ಸ್ವೀಕಾರ ಎಂಬದಾಗಿ ಅಪಾರ್ಥ ಮಾಡಿಕೊಳ್ಳಬಾರದೆಂದು ಪೌಲನು ಎಚ್ಚರಿಸುತ್ತಿದ್ದಾನೆ. ನಾವು ಈಗಲೂ ಉಸಿರಾಟದಿಂದ ಮತ್ತು ಜೀವದಿಂದಿರುವದಕ್ಕೆ ಕಾರಣವೇನೆಂದರೆ ಪಶ್ಚಾತ್ತಾಪಡುವದಕ್ಕೆ ದೇವರು ನಮಗೊಂದು ಅವಕಾಶವನ್ನು ಕೊಡುತ್ತಿದ್ದಾನೆಂದರ್ಥ ವಾಗಿದೆ (ನೋಡಿರಿ 2 ಪೇತ್ರ 3:9). ದೇವರ ಒಳ್ಳೇತನವನ್ನು ಅಸಡ್ಡೆ ಮಾಡದಂತೆ ಜಾಗ್ರತೆಯಾಗಿರೋಣ (ರೋಮಾ 2:4; KJV). ಬದಲಾಗಿ, ದೇವರ ಪ್ರೀತಿಯ ಕ್ರಿಯೆಗಳು ನಮ್ಮನ್ನು ಪಶ್ಚಾತ್ತಾಪಕ್ಕೆ ನಡಿಸುವಂತೆ ಅನುಮತಿಸೋಣ!

## “ಕೋಪವನ್ನು ಕೂಡಿಟ್ಟುಕೊಳ್ಳುವದು” (2:5)

ಭವಿಷ್ಯದ ಬಗ್ಗೆ ಸಿದ್ಧಮಾಡಿಕೊಳ್ಳುವ ವಿಷಯದಲ್ಲಿ ಒಂದು ವಾಡಿಕೆಯ ಮಾತು ಇರುತ್ತದೆ: “ಮಳೆಯ ದಿನಕ್ಕಾಗಿ ಸೇರಿಸಿಡುವದು.” ಕೋಪದ ದಿನಕ್ಕೋಸ್ಕರ ಕೋಪವನ್ನು ಕೂಡಿಟ್ಟುಕೊಳ್ಳುವದು ಒಂದು ರೀತಿ ಮಳೆಯ ದಿನಕ್ಕಾಗಿ ಒಂದು ದೊಡ್ಡ ಬ್ಯಾರೆಲ್.ನಲ್ಲಿ ನೀರನ್ನು ಶೇಖರಿಸಿಟ್ಟುಕೊಳ್ಳುವದಕ್ಕೆ ಸಮವಾಗಿರುತ್ತದೆ. ಪಶ್ಚಾತ್ತಾಪವಿಲ್ಲದವರು ಮಾಡುತ್ತಿದ್ದದ್ದು ವಿನಾಶಕಾರಿ ಸಂಗತಿ ಮಾತ್ರವಲ್ಲದೆ ಅದೊಂದು ಹಾಸ್ಯಾಸ್ಪದವೂ ಆಗಿತ್ತು!

## ನಮ್ಮ ಕ್ರಿಯೆಗಳನ್ನೇಕೆ ಉಲ್ಲೇಖಿಸಬೇಕು? (2:6-11)

ವಾಕ್ಯವು ಏಕೆ ನಮ್ಮ ಕೃತ್ಯಗಳಿಗನುಸಾರವಾಗಿ ನ್ಯಾಯತೀರಿಸಲ್ಪಡುವೆವೆಂದು ಹೇಳುತ್ತದೆ ಎಂಬದಕ್ಕೆ Stott ಒಂದು ಆಸಕ್ತಿಕರ ಸಿದ್ಧಾಂತವನ್ನು ತಿಳಿಸುತ್ತಾನೆ:

. . . ನ್ಯಾಯತೀರ್ಪಿನ ದಿನವು ಒಂದು ಸಾರ್ವಜನಿಕ ಸಮಾರಂಭವಾಗಿರಲಿದೆ . . .

> ಅಂಥ ಸಾರ್ವಜನಿಕ ಘಟನೆಯಲ್ಲಿ, ಸಾರ್ವಜನಿಕವಾಗಿ ತೀರ್ಪು ಕೊಡಲ್ಪಟ್ಟು ಸಾರ್ವಜನಿಕವಾಗಿಯೇ ದಂಡನೆಯು ಪ್ರಕಟಿಸಲ್ಪಡುವಾಗ, ಅವುಗಳಿಗೆ ಸಾರ್ವಜನಿಕರ ಹಾಗೂ ಸಾಕ್ಷ್ಯಾಧಾರಗಳನ್ನು ಪರೀಕ್ಷಿಸಿ ಬೆಂಬಲಿಸಬೇಕಾದ ಅಗತ್ಯವಿರುತ್ತದೆ. ಮತ್ತು ಸಾರ್ವಜನಿಕವಾಗಿ ಲಭ್ಯವಿರುವ ಏಕೈಕ ಸಾಕ್ಷ್ಯಾಧಾರವೆಂದರೆ ನಮ್ಮ ಕ್ರಿಯೆಗಳೇ, ನಾವು ಮಾಡಿದ ಮತ್ತು ಮಾಡುವದನ್ನು ನೋಡಲ್ಪಟ್ಟವುಗಳು.[73]

Stottರ ಈ ದೃಶ್ಯದೊಂದಿಗೆ ನಾವು ಒಪ್ಪುತ್ತೇವೋ ಇಲ್ಲವೋ, ಅಲ್ಲಿ ನಮ್ಮನ್ನು ನಮ್ಮ ಕ್ರಿಯೆಗಳನ್ನಾಧರಿಸಿ ನ್ಯಾಯ ತೀರಿಸುವದಕ್ಕಿಂತ ಹೆಚ್ಚು ನ್ಯಾಯಸಮ್ಮತವಾದದ್ದು ಮತ್ತೊಂದಿರುವದಿಲ್ಲ ಎಂಬದನ್ನಂತೂ ಎಲ್ಲರೂ ಒಪ್ಪಿಕೊಳ್ಳಲೇಬೇಕು. ನಾನು ನಿಮ್ಮ ಕೃತ್ಯಗಳನುಸಾರ ನ್ಯಾಯತೀರಿಸಲ್ಪಡುವದಿಲ್ಲ; ನೀವು ನನ್ನ ಕೃತ್ಯಗಳನುಸಾರ ನ್ಯಾಯತೀರಿಸಲ್ಪಡುವದಿಲ್ಲ; ಪ್ರತಿಯೊಬ್ಬನೂ *ಅವನ* ಅಥವಾ *ಅವಳ* ಕೃತ್ಯಗಳ ಪ್ರಕಾರ ನ್ಯಾಯತೀರಿಸಲ್ಪಡುವನು. ಸಾಕ್ಷ್ಯಾಧಾರವನ್ನು ಯಾರೂ ಪ್ರಶ್ನಿಸುವಂತಿರುವದಿಲ್ಲ; ತೀರ್ಪು ನ್ಯಾಯವಾಗಿಯೇ ಇರಲಿದೆ.

## ಒಂದು ದೊಡ್ಡ ಸಮಸ್ಯೆ (2:6-8)

*ಸಮಸ್ಯೆಯನ್ನು ಒತ್ತಿಹೇಳಿದ್ದು.* ಅವುಗಳನ್ನು ಓದುವದಾದರೆ 6-8ರ ವರೆಗಿನ ವಚನಗಳು ಬೈಬಲಿನುದ್ದಕ್ಕೂ ಅದೇ ರೀತಿ ಹೋಲಿಕೆಯ ವಾಕ್ಯಭಾಗಗಳಲ್ಲಿ ಹೇಳಲಾದ ಸಂಗತಿಗಳು ಪುನರಾವರ್ತಿಸುತ್ತವಷ್ಟೇ. ಹಾಗಿದ್ದರೂ, ಈ ವಚನಗಳಲ್ಲಿ ಪೌಲನ ಹೇಳಿಕೆಯು ವಿವಾದಾತ್ಮಕವಾಗಿದೆ. ಇದು ವಿಶೇಷವಾಗಿ "ನಂಬಿಕೆಯಿಂದ ಮಾತ್ರವೇ ರಕ್ಷಿಸಲ್ಪಟ್ಟಿದ್ದೇವೆ" ಮತ್ತು ನಮ್ಮ ರಕ್ಷಣೆಗೋಸ್ಕರ ನಾವು ಏನೂ ಮಾಡಬೇಕಾಗಿಲ್ಲ ಎಂದು ಕಲಿಸುವವರಿಗೆ ದೊಡ್ಡ ಚಿಂತೆಯನ್ನುಂಟು ಮಾಡುವದಾಗಿದೆ. ಅದನ್ನು ಹೊರತುಪಡಿಸಿ, ಈ ವಾಕ್ಯಭಾಗವು ಎಲ್ಲಾ ವ್ಯಾಖ್ಯಾನಕಾರರನ್ನು ಗಲಿಬಿಲಿಗೊಳಿಸುತ್ತದೆ, ಯಾಕೆಂದರೆ ಪೌಲನು ಇಲ್ಲಿ ನಾವು ರಕ್ಷಣೆ ಹೊಂದಿದ್ದು ನಮ್ಮ ಕ್ರಿಯೆಗಳಿಂದಲ್ಲ ಆದರೆ ಕೃಪೆಯ ಮೂಲಕ-ನಂಬಿಕೆಯ ಆಧಾರದ ಮೇಲೆಯೇ ಎಂಬದನ್ನು ಒತ್ತಿ ಹೇಳುತ್ತಿದ್ದಾನೆಂದು ಅವರಿಗೆ ಗೊತ್ತಿದೆ (ನೋವಿನಿಂದ ತಿಳಿದಿರುತ್ತಾರೆ) (ಉದಾಹರಣೆಗೆ, ನೋಡಿರಿ 4:1-8; 11:6).

ಬೋಧನೆ, ಉಪದೇಶ ಮತ್ತು ಬೈಬಲ್.ನ ಬಗ್ಗೆ ಬರೆಯುವವರಾದ ನಮ್ಮಲ್ಲಿ ಬಹು ಮಂದಿಯು ಹೊಂದಾಣಿಕೆಯಿಲ್ಲದಂತೆ ತೋರುವ ಯಾವದನ್ನಾದರೂ ಸಂಪೂರ್ಣವಾಗಿ ಸಾಮರಸ್ಯಗೊಳಿಸುವದಕ್ಕೆ ಒತ್ತಾಯಿಸಲ್ಪಡುತ್ತೇವೆ. ಸ್ಪಷ್ಟವಾಗಿ, ಅಂಥ ವಿಷಯಗಳು ಪ್ರೇರಣೆಗೊಂಡು ಬರೆದವರಿಗೆ ಅಷ್ಟೇನೂ ಮುಖ್ಯವಾಗಿರಲಿಲ್ಲ. ಉದಾಹರಣೆಗೆ, 8 ರಿಂದ 11 ಅಧ್ಯಾಯಗಳಲ್ಲಿ, ಪೌಲನು ಪೂರ್ವಸಂಕಲ್ಪ ಹಾಗೂ ದೇವರ ಸಾರ್ವಭೌಮ ಚಿತ್ತದ ಬಗ್ಗೆ ಇತರೇ ಮಾತುಗಳನ್ನು ಬರೆಯುತ್ತಾನೆ. ಅದೇ ವೇಳೆಯಲ್ಲಿ, ರೋಮಾಪುರದವರಿಗೆ ಬರೆದ ಈ ಪತ್ರಿಕೆಯು ಸ್ಪಷ್ಟವಾಗಿ ತೋರಿಸಿಕೊಡುವದೇನೆಂದರೆ ಅಪೊಸ್ತಲನು ಮನುಷ್ಯನಿಗೆ ಸ್ವೇಚ್ಛಾ-ಚಿತ್ತವಿದೆ ಎಂಬದನ್ನು ನಂಬಿದ್ದನೆಂಬದು. ನೀವು ಮತ್ತು ನಾನು 8ನೇ ಅಧ್ಯಾಯಕ್ಕೆ ತಲುಪುವಾಗ, ನಿಮ್ಮ ಸ್ವೇಚ್ಛಾ-ಚಿತ್ತದೊಂದಿಗೆ ಹಸ್ತಕ್ಷೇಪ ಮಾಡದೆಯೇ ದೇವರು ಹೇಗೆ ಪೂರ್ವಸಂಕಲ್ಪ ಮಾಡಿ ಭವಿಷ್ಯವನ್ನು ಮುಂದಾಗಿ ತಿಳಿಯಲು ಸಾಧ್ಯವೆಂಬುದನ್ನು

ಅರ್ಥಮಾಡಿಕೊಳ್ಳುವದಕ್ಕೆ ನಾವು ಕಷ್ಟಪಡುವೆವು. ಪೌಲನು ಇಲ್ಲಿ ಈ ಎರಡು ಪರಿಕಲ್ಪನೆಗಳನ್ನು ಪರಸ್ಪರ ಸಂಬಂಧಗೊಳಿಸುವ ಅಗತ್ಯವಿಲ್ಲವೆಂದು ಕಂಡನೆಂಬದು ಸ್ಪಷ್ಟವಾಗುತ್ತದೆ. ಆತನು ಸತ್ಯವನ್ನು ದೇವರ ಸಾರ್ವಭೌಮತೆಯ ಮೇಲೆ ಮತ್ತು ಸತ್ಯವನ್ನು ಮಾನವರ ಸ್ವೇಚ್ಛಾ-ಚಿತ್ತದ ಮೇಲೆ ಆಧಾರಗೊಳಿಸಿ ಮುಂದಿಟ್ಟನು-ಮತ್ತು ಅದರ ಬಗ್ಗೆ ಹೆಚ್ಚಿನದೇನನ್ನೂ ಹೇಳಲಿಲ್ಲ.

ವಾಕ್ಯದಲ್ಲಿ "ಎಲ್ಲವನ್ನೂ ಹೊಂದಾಣಿಕೆಯಾಗುವಂತೆ ಜೋಡಿಸುವ" ನಮ್ಮ ಪ್ರಯತ್ನಗಳು ಕೆಲವು ಸಾರಿ ನನಗೆ, ಒಂದು ಮಗುವು ಒಂದು ಕಷ್ಟಕರ ಒಗಟನ್ನು (puzzle) ಜೋಡಿಸುವದಕ್ಕೆ ಪ್ರಯತ್ನಿಸುವದನ್ನು ನೆನಪಿಸುತ್ತದೆ. ಆತನು ಎಲ್ಲಾ ತುಣುಕುಗಳನ್ನು ಒಟ್ಟಿಗೆ ಜೋಡಿಸಲು ವಿಫಲನಾಗುವದಾದರೆ ಬಹಳ ಹತಾಶೆಗೊಳ್ಳುತ್ತಾನೆ. ಅಲ್ಲದೆ ಒಂದು ತುಣುಕು ಸುಲಭವಾಗಿ ಸಂಧಿಯಲ್ಲಿ ಕೂತುಕೊಳ್ಳದಿದ್ದಲ್ಲಿ "ಸರಿಯಾಗಿ ಹೊಂದಾಣಿಕೆ" ಆಗುವಂತೆ ಅದನ್ನು ಗುದ್ದಿಗುದ್ದಿ ಸಹ ಪ್ರಯತ್ನಿಸುವದಕ್ಕೆ ಮುಂದಾಗಬಹುದು.

ಸಾಂಕೇತಿಕವಾಗಿ ಹೇಳುವದಾದರೆ, ಕೆಲವು ಸಾರಿ ಪೌಲನು 2:6-8 ರಲ್ಲಿ ನ್ಯಾಯತೀರ್ಪಿನ ಕುರಿತು ಮಾಡುವ ಉಪದೇಶದ ವಿಷಯವು ಸಹ ಅದೇ ರೀತಿಯಲ್ಲಿರುತ್ತದೆ: ಅನೇಕ ಲೇಖಕರು ಈ ವಚನಗಳನ್ನು ರೋಮಾಪುರ ಪತ್ರಿಕೆಯಲ್ಲಿನ ನಂತರ ಭಾಗಕ್ಕೆ ಸರಿಹೊಂದುವಂತೆ ಮಾಡಬೇಕೆಂಬ ತವಕದಲ್ಲಿದ್ದವರಾಗಿ, ಈ ಶಕ್ತಿಯುತ ವಾಕ್ಯಭಾಗವನ್ನು ಏಕಾಏಕಿ ವಿಸರ್ಜಿಸಿ ಮುಂದೆ ಹೋಗಿಬಿಡುತ್ತಾರೆ. ಈ ವಾಕ್ಯ ಭಾಗವು ಕೇವಲ ನ್ಯಾಯದಂಡನೆಯ ಬಗ್ಗೆ ಸೂಚಿಸುತ್ತದೆಂದು ಕೆಲವರು ಹೇಳುತ್ತಾರೆ-ಆದರೆ 7 ಮತ್ತು 10 ವಚನಗಳು ಖಂಡಿತವಾಗಿಯೂ ರಕ್ಷಣೆಯ ಬಗ್ಗೆ ಮಾತಾಡುತ್ತಿರುವದು ಕಂಡು ಬರುತ್ತದೆ. ಇನ್ನು ಕೆಲವರು ಇಲ್ಲಿ "ಕೃತ್ಯಗಳು" ಎಂಬದು ನಂಬಿಗಸ್ತ ಕ್ರೈಸ್ತರಿಂದ ಮಾಡಲ್ಪಟ್ಟ ಕೃತ್ಯಗಳಾಗಿವೆ ಎಂದು ಪ್ರತಿಪಾದಿಸುತ್ತಾರೆ ಮತ್ತು ಅಷ್ಟಕ್ಕೇ ಬಿಟ್ಟುಬಿಡುತ್ತಾರೆ-ಆದರೆ ಆ ತೀರ್ಮಾನವು "ನಮ್ಮ ಕೃತ್ಯಗಳಿಗನುಸಾರವಾಗಿ ಹೇಗೆ (ಯಾವದರ ಆಧಾರದಲ್ಲಿ) ನ್ಯಾಯತೀರಿಸಲ್ಪಡುವೆವು" ಎಂಬ ಪ್ರಶ್ನೆಗೆ ಉತ್ತರ ಕೊಡುವದಿಲ್ಲ. ಇನ್ನೂ ಕೆಲವರು ವಾದಿಸುವದೇನೆಂದರೆ ಕ್ರಿಯೆಗಳನ್ನು ರಕ್ಷಣೆಯೊಂದಿಗೆ ಜೋಡಿಸುವದು ಕೇವಲ ಕಲ್ಪಿತವಾಗಿರುತ್ತದಷ್ಟೇ, ಯಾಕೆಂದರೆ ಯಾರೊಬ್ಬರ ಕ್ರಿಯೆಗಳೂ ಪರಿಪೂರ್ಣವಾಗಿಲ್ಲ. ಅದೇ ಅರ್ಥದಲ್ಲಿ, ಬೇರೆ ಕೆಲವರು ಹೇಳುವದೇನೆಂದರೆ, ಪೌಲನ ಉದ್ದೇಶವು ಅಸಾಧ್ಯವಾದಂಥ ಒಂದು ನ್ಯಾಯನಿರ್ಣಯದ ವ್ಯವಸ್ಥೆಯನ್ನು ವರ್ಣಿಸುವದಾಗಿತ್ತು ಯಾಕೆಂದರೆ ಯಾವನಿಗೂ ದೇವರ ಧರ್ಮಶಾಸ್ತ್ರವನ್ನು ದೋಷವಿಲ್ಲದೆ ಕೈಕೊಂಡು ನಡೆಯಲು ಸಾಧ್ಯವಿಲ್ಲ.

ಇವರಲ್ಲಿ ಬಹಳ ಮಂದಿ ಹೇಳುವದು ನನಗೆ ಅರ್ಥವಾಗುತ್ತದೆ, ಮತ್ತು ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳಲು ಸಾಕಾಗುವಷ್ಟು ಒಳ್ಳೆ ಕ್ರಿಯೆಗಳನ್ನು ನಮ್ಮಲ್ಲಿ ಯಾರೊಬ್ಬರೂ ಮಾಡಲಾರರು ಎಂದು ಗ್ರಹಿಸಿಕೊಳ್ಳುತ್ತೇನೆ. ಪೌಲನು ಪ್ರತಿಫಲಗಳ ದಂಡನೆಗಳನ್ನೊಳಗೊಂಡ ನ್ಯಾಯತೀರ್ಪಿನ ದಿನದ ಬಗ್ಗೆ ಅಷ್ಟೊಂದು ರಾರಾಜಿಸುವಂಥ ಒಂದು ಚಿತ್ರಣವನ್ನು ಬಿಡಿಸಿಡುವ ವೇಳೆ ಈ ಗುರಿಗಳನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೋ ಎಂಬ ಗೊಂದಲ ನನ್ನಲ್ಲಿರುತ್ತದೆ.

ಪೌಲನು ಕೊರಿಂಥದವರಿಗೆ "ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ

ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ ಸರಿಯಾದ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10) ಎಂದು ಹೇಳಿದಾಗ, ವಿಮೋಚನೆಯ ಅಸಾಧ್ಯ ವ್ಯವಸ್ಥೆಯನ್ನು ಬಣ್ಣಿಸುವ ಉದ್ದೇಶ ಆತನದಾಗಿತ್ತೋ? ಕ್ರಿಸ್ತನು ತನ್ನ ಶಿಷ್ಯರಿಗೆ ತಾನು "ಪ್ರತಿಯೊಬ್ಬನಿಗೂ ಅವನವನ ಕೃತ್ಯಗಳಿಗೆ ತಕ್ಕ ಪ್ರತಿಫಲವನ್ನು ಕೊಡುವೆನು" ಎಂದು ಹೇಳಿದಾಗ (ಮತ್ತಾಯ 16:27), ಆತನು ಕೇವಲ ದಂಡನೆಯ ತೀರ್ಪಿನ ಕುರಿತಾಗಿ ಮಾತಾಡಿದನೋ? 2:6ರಲ್ಲಿ ಉಲ್ಲೇಖಿಸಲಾದ ವಾಕ್ಯಭಾಗದಲ್ಲಿ, ದಾವೀದನು ದೇವರ "ಪ್ರೀತಿಸ್ವರೂಪ" ದ ಬಗ್ಗೆ ಸೂಚಿಸುತ್ತಾನೆ, ಕರ್ತನು ಒಬ್ಬನಿಗೆ "ಅವನ ಕೃತ್ಯಗಳಿಗೆ ತಕ್ಕ" ಪ್ರತಿಫಲವನ್ನು ಕೊಡುವಾಗ *ಒಳ್ಳೇದು* ಸಂಭವಿಸುವ ಸಾಧ್ಯತೆಯಿದೆ ಎಂಬ ಅರ್ಥವನ್ನು ನೀಡುತ್ತದೆ (ಕೀರ್ತನೆ 62:12).

ಒಂದು ವೇಳೆ 4 ರಿಂದ 10 ವಚನಗಳು ಬೈಬಲ್.ನಲ್ಲಿ ಬೇರೆ ಎಲ್ಲಾದರೂ ಸಿಕ್ಕಿದ್ದರೆ, ಈ ವಾಕ್ಯಭಾಗವನ್ನು ನಾವು ಕೆಟ್ಟದ್ದನ್ನಲ್ಲ ಆದರೆ ಒಳ್ಳೇದನ್ನು ಮಾಡಬೇಕೆಂದು ಒತ್ತಾಯಪಡಿಸುವಂಥ ಪ್ರೋತ್ಸಾಹವಾಗಿ ತೆಗೆದುಕೊಳ್ಳುತ್ತಿದ್ದೆವು. ರೋಮಾ 2ರಲ್ಲಿ ಪೌಲನ ಉದ್ದೇಶವು ಇದೇ ಆಗಿರುವ ಸಾಧ್ಯತೆಯಿರಬಹುದೋ? ಆತನು ಆಗಷ್ಟೇ ಯೆಹೂದ್ಯರ ಮೇಲೆ ಅವರು ಸಹ ಅನ್ಯಜನರಂತೆಯೇ ಅದೇ ಪಾಪಗಳನ್ನು ಮಾಡಿದ್ದಾರೆಂಬ ಆರೋಪ ಮಾಡಿದ್ದನು. ಅವರ ಅಪರಾಧದ ಹೊರತಾಗಿಯೂ, ಅವರು ಪಶ್ಚಾತ್ತಾಪವಿಲ್ಲದವರಾಗಿದ್ದರು. ಆತನು ಅಷ್ಟಕ್ಕೆ ನಿಲ್ಲಿಸಿ, "ನೀವು ಪಶ್ಚಾತ್ತಾಪಟ್ಟು ಸರಿಯಾಗಿ ಜೀವಿಸಲು ಆರಂಭಿಸದಿದ್ದರೆ, ನೀವು ದೇವರ ನೀತಿಯುಳ್ಳ ನ್ಯಾಯತೀರ್ಪನ್ನು ಎದುರಿಸುವಿರಿ! ನೀವು ನಿಮ್ಮ ಹೃದಯಗಳನ್ನು ಮತ್ತು ಜೀವನಗಳನ್ನು ಬದಲಾಯಿಸಿಕೊಂಡರೆ, ಮುಂದೆ ನಿಮಗೆ ಒಳ್ಳೇ ಕಾರ್ಯಗಳು ಕಾದಿರುತ್ತವೆ, ಆದರೆ ನೀವು ಕರ್ತನ ಹಾಗೂ ಆತನ ಚಿತ್ತಕ್ಕೆ ಬಂಡಾಯತೆಯನ್ನು ಮುಂದುವರೆಸಿದರೆ, ಭಯಂಕರ ಸಂಗತಿಗಳು ನಿಮಗಾಗಿ ಕಾದಿರುತ್ತವೆ" ಎಂದು ಹೇಳಿದ್ದರೆ ಅಸಮಂಜಸವಾಗಿರುತ್ತಿತ್ತೋ?

*ಸಾಧ್ಯತೆಗಳ ವಿಶ್ಲೇಷಣೆ.* ನಮ್ಮಲ್ಲಿ ಅನೇಕರಿಗೆ ಈ ಎರಡು ಅಭಿಪ್ರಾಯಗಳ ನಡುವೆ ಘರ್ಷಣೆಯಿರುತ್ತದೆಂಬ ನಮ್ಮ ಅನಿಸಿಕೆಯಿಂದಾಗಿ ಈಗಲೂ ನಮ್ಮೊಳಗೆ ತಳಮಳ ಅನುಭವಿಸುತ್ತೇವೆ. ವಿಷಯ ಹಾಗಿರುವಾಗ, ಈ ಕೆಳಗಿನ ವ್ಯಾಖ್ಯಾನಗಳು ಕ್ರಮಾಂಕದಲ್ಲಿರುತ್ತವೆ.

ಬಹುಶಃ ನಾನು ಹೇಳಬಹುದಾದ ಅತ್ಯಂಥ ಪ್ರಾಮುಖ್ಯವಾದ ಸಂಗತಿಯೆಂದರೆ, "ಒಳ್ಳೇದನ್ನು ಮಾಡುವ" ವಿಚಾರಕ್ಕೆ ಸಹ ಸಂಬಂಧಿಸಿದಂತೆ, *ಕೃತ್ಯಗಳಲ್ಲಿ ವಿವಿಧ ರೀತಿಯ "ಕೃತ್ಯಗಳಿರುತ್ತವೆ."* ಒಂದೆಡೆಯಲ್ಲಿ, ಸ್ವನೀತಿಯ ಕ್ರಿಯೆಗಳಿವೆ (ನೋಡಿರಿ ಲೂಕ 18:9) ಮತ್ತು ಅಂತರಂಗದಲ್ಲಿನ ಭ್ರಷ್ಟತೆಗೆ ಮುಖವಾಡ ಹಾಕುವಂಥ ಬಹಿರಂಗದ ಕ್ರಿಯೆಗಳಿರುತ್ತವೆ (ನೋಡಿರಿ ಮತ್ತಾಯ 23:28). ದೇವರು ಅಂಥ ಕಾರ್ಯಗಳನ್ನು ಮೆಚ್ಚುವವನಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಿದೆ. ಇನ್ನೊಂದೆಡೆಯಲ್ಲಿ, "ವಿಧೇಯತೆಯ ನಂಬಿಕೆಯಿಂದಾಗುವ" ಕ್ರಿಯೆಗಳೂ ಇರುತ್ತವೆ (1:5; 16:26). ಇವುಗಳು ಯೇಸುವಿನಲ್ಲಿ ನಾವು ಇಟ್ಟಿರುವ ನಂಬಿಕೆಯಿಂದಾಗುವ ಕ್ರಿಯೆಗಳಾಗಿವೆ. ಪೌಲನ ತಾತ್ಪರ್ಯವು ಒಳ್ಳೇದನ್ನು ಮಾಡುವವರು ನಿತ್ಯಜೀವವನ್ನು ಪಡೆಯುವರು ಎಂದಾಗಿದ್ದಲ್ಲಿ (2:7), ಆತನ ಮನಸ್ಸಿನಲ್ಲಿ ನಂಬಿಕೆಯ ಕ್ರಿಯೆಗಳನ್ನು ಇಟ್ಟುಕೊಂಡು ಹಾಗೆ ಹೇಳಿರಬೇಕು. Morris ಬರೆದದ್ದೇನೆಂದರೆ ಕ್ರಿಯೆಗಳು

(ಕೃತ್ಯಗಳು) "ಒಬ್ಬ ವ್ಯಕ್ತಿಯು ಅಂತರ್ಯದಲ್ಲಿ ಏನಾಗಿದ್ದಾನೋ ಅದರ ಬಹಿರಂಗದ ವ್ಯಕ್ತಪಡಿಸುವಿಕೆಯಾಗಿದೆ. ವಿಶ್ವಾಸಿಯಲ್ಲಿ ಅವುಗಳು ನಂಬಿಕೆಯ ಫಲಿತವಾಗಿರುವ ಕೃತ್ಯಗಳಾಗಿರುತ್ತವೆ."[74]

ಪೌಲನು ಇಲ್ಲಿ ದೇವರ-ಹುಡುಕುವವರು (2:7) ಮತ್ತು *ಸ್ವಾರ್ಥ-ಹುಡುಕುವವರು (2:8)* ನಡುವಿನ ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ. ದೇವರ-ಹುಡುಕುವವರ ಒಳ್ಳೇ ಕ್ರಿಯೆಗಳೇ ಪ್ರತಿಫಲ ಹೊಂದುವವೆಂದು ಆತನು ಹೇಳಿದನು (2:7). ಅಂಥ ಜನರು ಕರ್ತನಲ್ಲಿ ವಿಶ್ವಾಸಿಸುತ್ತಾರೆ ಹೊರತು ಸ್ವಂತದ್ದರಲ್ಲಿ ಅಲ್ಲ.

ಅಲ್ಲದೆ, ಪೌಲನು *ಸತ್ಯವನ್ನು ಅನುಸರಿಸುವವರ* ಮತ್ತು *ಅನ್ಯಾಯವನ್ನು ಅನುಸರಿಸುವವರ* ನಡುವಿನ ವ್ಯತ್ಯಾಸವನ್ನು ತೋರಿಸುತ್ತಾನೆ (2:8). ನಾವು ಒತ್ತಿ ಹೇಳಿರುವ ಪ್ರಕಾರ, ರೋಮಾಪುರ ಪತ್ರಿಕೆಯಲ್ಲಿ *ನಂಬಿಕೆ* ಹಾಗೂ *ವಿಧೇಯತೆ* ಪರಿಕಲ್ಪನೆಗಳ ನಡುವೆ ಒಂದು ಬಲವಾದ ಸಂಬಂಧವಿರುತ್ತದೆ. ಇದರ ವಿಷಯವಾಗಿ J. D. Thomas ಹೀಗೆ ಹೇಳುತ್ತಾರೆ:

> ವಚನ 8 ರಲ್ಲಿ ಕಾಣಿಸುವ ಪ್ರಕಾರ, "ನಂಬಿಕೆ" ಎಂಬ ಪದವು . . . ವ್ಯಕ್ತಗೊಂಡಿರುವಂತ ದೇವರ ಚಿತ್ತಕ್ಕೆ ವಿಧೇಯರಾಗುವ ಹೊರತು ರಕ್ಷಣೆ ದೊರಕುವದಿಲ್ಲ ಎಂಬದನ್ನು ಒತ್ತಿಹೇಳುತ್ತದೆ. ಹೇಗೂ, ಅದು ಕೇವಲ ಕೆಲವೊಂದು ಆಜ್ಞೆಗಳಿಗೆ ವಿಧೇಯರಾಗುವದಕ್ಕಿಂತಲೂ ಹೆಚ್ಚನದನ್ನು ಒಳಗೊಂಡಿರುತ್ತದೆ. ಅದರರ್ಥವು "ಅಧೀನನಾಗಿ ಕಿವಿಗೊಡು," ಎಂದಾಗಿರುತ್ತದೆ, ಅದರಲ್ಲಿ ಸಂಪೂರ್ಣ ಸಮರ್ಪಣೆ ಸೇರಿರುತ್ತದೆ.[75]

"ಸಂಪೂರ್ಣ ಸಮರ್ಪಣೆ" ಯನ್ನು ಉಂಟುಮಾಡುವದು ನಂಬಿಕೆಯೇ ಆಗಿದೆ.

1 ರಿಂದ 16 ವಚನಗಳನ್ನು ಜಾಗರೂಕತೆಯಿಂದ ಓದಿರಿ, ಮತ್ತು ಪೌಲನ ಚಿಂತೆಯು ಕೇವಲ "ಒಳ್ಳೇ ಕೃತ್ಯಗಳನ್ನು ಮಾಡುವ" ಕುರಿತಾಗಿರಲಿಲ್ಲ; ಆತನು *ಆ ಕೃತ್ಯಗಳ ಹಿಂದಿನ ಉದ್ದೇಶದ* ಬಗ್ಗೆ ಸಹ ಅಷ್ಟೇ ಚಿಂತೆಯುಳ್ಳವನಾಗಿದ್ದನು ಎಂಬುದು ನಿಮಗೆ ಅರ್ಥವಾಗುತ್ತದೆ. ಆತನು ವಚನ 5ರಲ್ಲಿ ಹೃದಯದ ಬಗ್ಗೆ ಉಲ್ಲೇಖಿಸುತ್ತಾನೆ. ಆತನು 16ನೇ ವಚನದಲ್ಲಿ ಮನುಷ್ಯರ "ಗುಟ್ಟುಗಳ" ಬಗ್ಗೆ ಮಾತಾಡಿದನು-ಅವರ ಆಲೋಚನೆ ಹಾಗೂ ಉದ್ದೇಶಗಳು ಸೇರಿದಂತೆ (ನೋಡಿರಿ AB). MacArthur ಕೃತ್ಯಗಳನ್ನು ಒಂದು ಸೂಚಿಕೆ ಎಂದು ಬಣ್ಣಿಸುತ್ತಾನೆ: "ಒಬ್ಬ ವ್ಯಕ್ತಿಯ ಕೃತ್ಯಗಳು ಆತನ *ಗುಣನಡತೆಗೆ* ಒಂದು ದೋಷಾತೀತವಾದ ಸೂಚಿಕೆಯನ್ನು ರೂಪಿಸುತ್ತದೆ."[76] (ನೋಡಿರಿ ಮತ್ತಾಯ 7:16, 20.)

ಅಲ್ಲದೆ, ಬೈಬಲಿನಲ್ಲಿ *ಯಾವ ವಾಕ್ಯಭಾಗವನ್ನು ಸಹ ಬೇರ್ಪಡಿಸಬಾರದು* ಎಂಬದಾಗಿ ಜ್ಞಾಪಿಸಿಕೊಳ್ಳುವದು ಯಾವಾಗಲೂ ಸೂಕ್ತವಾಗಿರುತ್ತದೆ. ರೋಮಾಪುರ ಪತ್ರಿಕೆಯ ಮತ್ತು ಬೇರೆ ಕಡೆಗಳಲ್ಲಿನ ವಾಕ್ಯ ಭಾಗಗಳ ಬೆಳಕಿನಲ್ಲಿ, 8 ಮತ್ತು 9ನೇ ವಚನದಲ್ಲಿನ ದುಷ್ಕೃತ್ಯಮಾಡುವವರು ಕರ್ತನಲ್ಲಿ ವಿಶ್ವಾಸವಿಡದ ಅಥವಾ ತಮ್ಮ ಜೀವಿತಗಳನ್ನು ಆತನಿಗೆ ಸಮರ್ಪಿಸಿಕೊಳ್ಳದ ವ್ಯಕ್ತಿಗಳು ಎಂಬದಾಗಿ ಭಾವಿಸಿಕೊಳ್ಳಬಹುದು. ನ್ಯಾಯತೀರ್ಪಿನ ದಿನದಂದು ಅವರ ಪಾಪದ ದಾಖಲೆಗಳನ್ನು ಸರಿಯಾಗಿ ಕಾಯ್ದುಕೊಂಡವರಾಗಿ ದೇವರ ಮುಂದೆ ನಿಲ್ಲುವರು. ವಚನ 7 ಮತ್ತು 10ರಲ್ಲಿನ ಒಳ್ಳೇ

ಕೃತ್ಯಮಾಡಿದವರು ಕರ್ತನ ಆಜ್ಞೆಗಳಿಗೆ *ವಿಧೇಯರಾದವರು* ಮತ್ತು ಆತನ ಕೃಪೆಯನ್ನು ಅಂಗೀಕರಿಸಿದವರು ಎಂದು ಊಹಿಸಿಕೊಳ್ಳಬಹುದು. ಹಳೆ ಒಡಂಬಡಿಕೆಯ ಅಡಿಯಲ್ಲಾಗಿರಲಿ ಅಥವಾ ಹೊಸ ಒಡಂಬಡಿಕೆಯಲ್ಲಾಗಿರಲಿ, ಅವರ ಪಾಪಗಳು ಯೇಸುವಿನ ರಕ್ತದಿಂದ ತೊಳೆಯಲ್ಪಟ್ಟಿರುತ್ತವೆ (ನೋಡಿರಿ ಇಬ್ರಿಯ 9:15). ಹೀಗೆ ಅವರು ಯಾವ ಭಯವೂ ಇಲ್ಲದವರಾಗಿ ನ್ಯಾಯತೀರ್ಪಿನ ದಿನವನ್ನು ಎದುರಿಸುವರು.

Thomasನು ರೋಮಾ 2:6 ವಚನವನ್ನು ಪರಿಗಣಿಸಿ ಹೇಳುವದೇನೆಂದರೆ, "ಇದನ್ನು ಗಮನಿಸುವದಕ್ಕೆ ಸಾಕಾಗುತ್ತದೆ. . . ಏನೆಂದರೆ ಕ್ರೈಸ್ತನ ಅಂತಿಮ ಪ್ರತಿಫಲವು *ಒಂದಲ್ಲಾ ಒಂದು ರೀತಿಯಲ್ಲಿ* ಮತ್ತು *ಸ್ವಲ್ಪ ಮಟ್ಟಿಗೆ* ಆತನ ಕ್ರಿಯೆಗಳ ಮೇಲೆ ಸಂಭವನೀಯವಾಗಿ ಇರುತ್ತದೆ."[77] ಮತ್ತೊಬ್ಬ ಲೇಖಕನು ಹೀಗೆ ಹೇಳಿದ್ದಾನೆ, "ನಾವು ನಮ್ಮ ಕ್ರಿಯೆಗಳ *ಮೂಲಕ* ರಕ್ಷಿಸಲ್ಪಟ್ಟಿಲ್ಲ, ಆದರೆ *ಅವುಗಳಿಲ್ಲದೆ* ಸಹ ನಾವು ರಕ್ಷಿಸಲ್ಪಡಲಾರೆವು-ಯಾಕೆಂದರೆ ನಮ್ಮ ಕೃತ್ಯಗಳೇ ನಮ್ಮ ನಂಬಿಕೆಯನ್ನು ವ್ಯಕ್ತಪಡಿಸುತ್ತವೆ [ನೋಡಿರಿ ಯಾಕೋಬ 2:18, 20]."

## ನೈತಿಕ ಒಳ್ಳೇತನ ಹಾಗೂ ರಕ್ಷಣೆ (2:12)

ನಾನು ಪ್ರಪಂಚದ ಅನೇಕ ಸ್ಥಳಗಳಿಗೆ ಪ್ರಯಾಣಿಸಿದ್ದೇನೆ ಮತ್ತು ವಿವಿಧ ರೀತಿಯ ಧಾರ್ಮಿಕ ತತ್ವಜ್ಞಾನಗಳನ್ನು ಎದುರ್ಗೊಂಡಿದ್ದೇನೆ. ಹೇಗೂ, ನಾನು ಭೇಟಿ ಕೊಟ್ಟ ಬಹುಪಾಲು ದೇಶಗಳಲ್ಲಿ ನನಗೊಂದು ಸಾಮಾನ್ಯವಾದ ನಂಬಿಕೆ ಕಂಡಿರುತ್ತದೆ: ಜನರು *ಒಳ್ಳೇಯವರಾಗಿದ್ದರೆ* ಪರಲೋಕಕ್ಕೆ ಹೋಗುವರೆಂಬ ನಂಬಿಕೆ. ಅಷ್ಟುಮಾತ್ರವಲ್ಲದೆ, ಜನರು ಎಲ್ಲೇ ವಾಸಿಸುವವರಾಗಿದ್ದರೂ, ಅವರಲ್ಲಿ ಬಹುಪಾಲು ಮಂದಿ ತಮ್ಮನ್ನು ಒಳ್ಳೆಯವರು ಎಂದೇ ಭಾವಿಸಿಕೊಂಡಿದ್ದಾರೆ ಮತ್ತು ದೇವರ (ಅಥವಾ ದೇವರುಗಳ) ಮುಂದೆ ನಿಲ್ಲುವದಕ್ಕೆ "ಸಿದ್ಧರೆಂದು" ನೆನಸುತ್ತಾರೆ. ಅಂಥಹ ನಿರ್ಧಾರಕ್ಕೆ ಬರುವಂತದ್ದು ಅನೇಕ ವೇಳೆ ಈ ರೀತಿಯ ತಪ್ಪಾದ ತರ್ಕದ ಮೇಲೆ ಆಧಾರವಾಗಿರುತ್ತದೆ: "ಕೆಲವು ಜನರು ಮಾಡುವಂಥ ಕೆಟ್ಟಕಾರ್ಯಗಳನ್ನು ನಾನು ಮಾಡುವದಿಲ್ಲ. ನಾನು ಹಾಗೆ ಮಾಡುವದಿಲ್ಲವಾದ್ದರಿಂದ, ನಾನು ಅವರಿಗಿಂತಲೂ ಉತ್ತಮನಾಗಿದ್ದೇನೆ- ಮತ್ತು ನಾನು ಅವರಿಗಿಂತ ಉತ್ತಮನಾದ್ದರಿಂದ, ನಾನು ಯಾವ ತಪ್ಪು ಇಲ್ಲದವನಾಗಿರಬೇಕಲ್ಲಾ!" ಈ ರೀತಿಯ ವಾದವು ಯೋಚಿಸುವದಕ್ಕೂ ಹಾಸ್ಯಾಸ್ಪದವಾಗಿರುವದು, "ನಿನಗೆ ಎರಡು ಕೋಟಿ ಸಾಲವಿದೆ, ಆದರೆ ನನಗೆ ಒಂದೇ ಕೋಟಿ ಸಾಲವಿದೆ. ನಾನು ನಿನ್ನಷ್ಟು ಸಾಲಗಾರನಲ್ಲ ವಾದ್ದರಿಂದ, ನಾನು ಸಾಲದಿಂದ ಮುಕ್ತನಾದವನಾಗಿರಬೇಕಲ್ಲವೆ!"[78]

ನಾವು ನಮ್ಮನ್ನು ನೈತಿಕವಾಗಿ ಉತ್ತಮರೆಂದು ಪರಿಗಣಿಸಿಕೊಳ್ಳುತ್ತೇವೋ ಅಥವಾ ನೈತಿಕವಾಗಿ ಕೆಟ್ಟವರೆಂದು ಪರಿಗಣಿಸಿಕೊಳ್ಳುತ್ತೇವೋ, ಆದರೆ ಸತ್ಯವೇನೆಂದರೆ ನಾವೆಲ್ಲರೂ ಪಾಪಿಗಳಾಗಿದ್ದೇವೆ (3:10, 23), ನಾವು ಆತ್ಮೀಕ ಹಾಗೂ ನಿತ್ಯವಾದ ಮರಣಕ್ಕೆ ಯೋಗ್ಯರಾಗಿದ್ದೇವೆ (6:23). ಒಬ್ಬ ವ್ಯಕ್ತಿಯು ಒಳ್ಳೇ ಕೃತ್ಯಗಳ ಆಧಾರದಿಂದ ರಕ್ಷಿಸಲ್ಪಡಲು ಸಾಧ್ಯವಿರುವ ದಾದರೆ, ಇಬ್ಬರು ಸಹ ರಕ್ಷಿಸಲ್ಪಡಬಹುದು. ಇಬ್ಬರಿಗೆ ಸಾಧ್ಯವಿದ್ದರೆ, ನೂರಾರು ಜನರು ರಕ್ಷಿಸಲ್ಪಡಬಲ್ಲರು. ಒಂದು ನೂರು ಜನರು ರಕ್ಷಿಸಲ್ಪಡಲು ಸಾಧ್ಯವಿದ್ದಲ್ಲಿ, ಎಲ್ಲಾ ಜನರಿಗೂ ಸಾಧ್ಯವಿರುವದು-ಯಾಕೆಂದರೆ "ದೇವರು ಪಕ್ಷಪಾತಿಯಲ್ಲ" (ಅಪೊಸ್ತಲರ ಕೃತ್ಯಗಳು 10:34). ಎಲ್ಲರೂ ತಮ್ಮ ಒಳ್ಳೇತನದಿಂದ ರಕ್ಷಿಸಲ್ಪಡುವದು ಸಾಧ್ಯವಿದ್ದರೆ,

ಕ್ರಿಸ್ತನಿಗೆ ಸಾಯಬೇಕಾದ ಅಗತ್ಯತೆ ಇರುತ್ತಿರಲಿಲ್ಲ. ಹೇಗೂ, ಆತನು ಮರಣಿಸಬೇಕಾಯಿತು ಎಂದು ಬೈಬಲ್ ತಿಳಿಸುತ್ತದೆ ಯಾಕೆಂದರೆ ಮಾನವ ಜನಾಂಗವು ರಕ್ಷಿಸಲ್ಪಡುವದಕ್ಕೆ *ಬೇರೆ ಯಾವ ಮಾರ್ಗವೂ* ಇರಲಿಲ್ಲ (ನೋಡಿರಿ ಮತ್ತಾಯ 26:39).

ಯೇಸು ಹೇಳಿದನು, "ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು" (ಮಾರ್ಕ 2:17). ಯೇಸು "ನೀತಿವಂತರನ್ನು" ಎಂದು ಸೂಚಿಸಿದಾಗ *ನಿಜವಾಗಿಯೂ* ನೀತಿವಂತರಾಗಿದ್ದವರು ಎಂದಲ್ಲ ಆದರೆ *ತಮ್ಮನ್ನು ನೀತಿವಂತರೆಂದು ಎಣಿಸಿಕೊಂಡವರನ್ನು* ಎಂಬ ಅರ್ಥದಲ್ಲಿ ಹೇಳಿದನು. ಅವರು ಎಲ್ಲಿಯ ವರೆಗೆ ತಮ್ಮನ್ನು ಪಾಪಿಗಳಲ್ಲ, ತಾವು ನೀತಿವಂತರೆಂದು ಪರಿಗಣಿಸಿಕೊಳ್ಳುತ್ತಾರೋ ಅಲ್ಲಿಯ ವರೆಗೆ ಆತನ ಬಳಿಗೆ ಬರಲಾರರು- ಹೇಗೆ ತಾನು ವೈದ್ಯನ ಬಳಿಗೆ ಹೋಗುವ ಅಗತ್ಯವಿಲ್ಲವೆಂದು ನಂಬಿರುವವನು ಆತನ ಬಳಿಗೆ ಹೋಗುವದು ಅಸಂಭವವೋ ಹಾಗೆಯೇ. ಒಬ್ಬನು ರಕ್ಷಿಸಲ್ಪಡಬೇಕಾದರೆ, ಆತನು ಮಾಡತಕ್ಕ ಮೊದಲ ಕೆಲಸವು ತನ್ನ ಪಾಪವನ್ನು ಒಪ್ಪಿಕೊಳ್ಳುವದು, ತನಗೆ ಕರ್ತನ ಅಗತ್ಯತೆಯಿದೆ ಎಂದು ಒಪ್ಪಿಕೊಳ್ಳುವದು.

ನಾವು ಕೇವಲ ಒಳ್ಳೇ ಜೀವನ ನಡಿಸುವದರಿಂದ ಮಾತ್ರವೇ ರಕ್ಷಿಸಲ್ಪಡಲಾರೆವು ಎಂದು ನಾನು ಹೇಳುವಾಗ ನನ್ನನ್ನು ಅಪಾರ್ಥ ಮಾಡಿಕೊಳ್ಳಬೇಡಿರಿ. ಉನ್ನತವಾದ ನೈತಿಕ ಮಾನದಂಡಗಳು ಪ್ರಾಮುಖ್ಯವಲ್ಲವೆಂದು ನಾನು ಹೇಳುತ್ತಿಲ್ಲ. ರೋಮಾಪುರ ಪತ್ರಿಕೆಯ ನಂತರದ ಭಾಗದಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ಇಹಲೋಕದ ನಡವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ" (12:2). ಆತನು ಇದನ್ನು ಸಹ ಹೇಳಿದನು, "ನೀವು ಒಳ್ಳೇತನದ ವಿಷಯದಲ್ಲಿ ಜಾಣರೂ ಕೆಟ್ಟತನದ ವಿಷಯದಲ್ಲಿ ಕಳಂಕವಿಲ್ಲದವರೂ ಆಗಿರಬೇಕೆಂದು ಅಪೇಕ್ಷಿಸುತ್ತೇನೆ" (16:19). ಕರ್ತನನ್ನು ಮೆಚ್ಚಿಸುವದಕ್ಕೆ ಇಚ್ಚಿಸುವ ಯಾವದೇ ವ್ಯಕ್ತಿಯು ಪಾಪ ತುಂಬಿದ ಲೋಕಕ್ಕಿಂತಲೂ ವ್ಯತ್ಯಾಸವಾದ ಜೀವಿತವನ್ನು ನಡಿಸುವದಕ್ಕೆ ಶ್ರಮಿಸುವನು. ನಾನು ಇಲ್ಲಿ ಹೇಳುತ್ತಿರುವದೇನೆಂದರೆ ನಾವು ಒಳ್ಳೆಯವರಾಗಿರುವದಕ್ಕೆ ಎಲ್ಲಾ ರೀತಿ ಶ್ರಮಿಸಿದ ಬಳಿಕವೂ ನಮ್ಮ ರಕ್ಷಣೆಯನ್ನು ಸಂಪಾದಿಸಿಕೊಳ್ಳುವಷ್ಟು ಒಳ್ಳೇವರಾಗಿರುವದಕ್ಕೆ ಸಾಧ್ಯವೆ ಇಲ್ಲವೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕೆಂಬುದೇ. ನಾವು ದೇವರ ಕೃಪೆಯಿಂದ ರಕ್ಷಿಸಲ್ಪಡಬೇಕು, ಅಥವಾ ನಾವು ರಕ್ಷಣೆಯನ್ನೇ ಹೊಂದುವದಿಲ್ಲ!

**"ಬೇಕು ಅಥವಾ (ಕೂಡದು)" ಎಂಬ ಪದದ ವಿಷಯವೇನು? (2:14, 15)**

Prentice Meador, Jr., ಒಮ್ಮೆ ಒಬ್ಬ ನಾಸ್ತಿಕನಾದ ಮಿತ್ರನ ಸಂಗಡ ಊಟಕ್ಕೆ ಕುಳಿತಿದ್ದನು. ಆ ಮಿತ್ರನು ತಾನು ದೇವರಲ್ಲಿ ನಂಬಿಕೆಯಿಡದಿರುವದಕ್ಕೆ ಕಾರಣಗಳ ಪಟ್ಟಿಯನ್ನು ಮುಂದಿಡುತ್ತಾ ಇರುವಾಗ, ಸಹೋದರ Meador ಮೇಜಿನ ಕೆಳಗಿನಿಂದ ಆತನ ಕಾಲಿಗೆ ಒದ್ದನು. ಆ ಮನುಷ್ಯನು ಆಘಾತಗೊಂಡವನಾಗಿ ಕಂಡನು, ಆದರೆ ಆಕಸ್ಮಿಕವಾಗಿ ಕಾಲು ತಾಗಿರಬೇಕೆಂದುಕೊಂಡು ತನ್ನ ಮಾತನ್ನು ಮುಂದುವರೆಸಿದನು. ಒಂದು ಕ್ಷಣದಲ್ಲಿ, ಈ ಬೋಧಕನು ಪುನಃ ಅವನ ಕಾಲಿಗೆ ಒದೆ ಕೊಟ್ಟನು. ಇದು ಹೀಗೆಯೇ ಅನೇಕ ಸಲ ನಡೆದಾಗ, ಆ ಮನುಷ್ಯನು ಮಾತನ್ನು ನಿಲ್ಲಿಸಿ, "ನೀನು ಅದನ್ನು

ಮಾಡಕೂಡದು!" ಎಂದು ಹೇಳಿದನು. ಆಗ ಸಹೋದರ Meador ಆತನನ್ನು ದೃಷ್ಟಿಸಿ ನೋಡಿ, "'ಕೂಡದು' ಎಂಬ ಅಲೋಚನೆಯು ನಿನಗೆ ಎಲ್ಲಿಂದ ಗೊತ್ತಾಯಿತು?" ಎಂದು ಕೇಳಿದನು. ಮತ್ತು ಆತನು ಮುಂದುವರೆದು "ಪ್ರತಿಯೊಬ್ಬ ವ್ಯಕ್ತಿಯೂ 'ಮಾಡತಕ್ಕದ್ದು' (ಕೂಡದು) ಮತ್ತು 'ಬೇಕು' (ಅಥವಾ 'ಬಾರದು') ಎಂಬ ಪ್ರಜ್ಞೆಯನ್ನು ಹೊಂದಿದ್ದಾನೆ" ಎಂದು ಮನವರಿಕೆ ಮಾಡಿಸಿದನು.[79]

## ನೀನು ಮತ್ತು ನಿನ್ನ ಮನಸಾಕ್ಷಿ (2:14, 15)

ರೋಮಾ 2:14, 15 ರ ವಿಷಯಕ್ಕೆ ಸಂಬಂಧಿಸಿದಂತೆ, ನಾನು ಮನಸಾಕ್ಷಿಯ ಕುರಿತು ಕೆಲವು ಮಾತುಗಳನ್ನು ತಿಳಿಸಲು ಇಚ್ಛಿಸುತ್ತೇನೆ. ವ್ಯಾಖ್ಯಾನಕಾರರಿಗೆ ಮನಸಾಕ್ಷಿ ಎಂದರೇನೆಂದು ವ್ಯಾಖ್ಯಾನಿಸಲು ಕಷ್ಟಕರವಾಗಿರುತ್ತದೆ, ಆದರೆ ಸರಾಸರಿ ವ್ಯಕ್ತಿಗೆ ಆ ಸಮಸ್ಯೆಯಿರುವದಿಲ್ಲ. ಬಹಳ ಮಂದಿ ಹೇಳುವರು, "ಖಂಡಿತ ನನಗೆ ಮನಸಾಕ್ಷಿ ಏನೆಂದು ಗೊತ್ತಿದೆ! ನಾನು ತಪ್ಪುಮಾಡಿದಾಗ ನನ್ನಲ್ಲಿ ಕೆಟ್ಟಭಾವನೆಯುಂಟು ಮಾಡುವ ನನ್ನೊಳಗಿನ ಸಂಗತಿ!" ಎಂದು.

*"ಮನಸಾಕ್ಷಿಯಿಲ್ಲದ" ಜನರು?* ನಾನು ಈ ಮುಂಚೆ ಹೇಳಿದ್ದೆನು, ಏನೆಂದರೆ "ಪ್ರತಿಯೊಬ್ಬ ವ್ಯಕ್ತಿಯೂ ಜನ್ಮದಿಂದಲೇ ಇಂಥವುಗಳು 'ಸರಿ' ಮತ್ತು ಇನ್ನು ಕೆಲವು 'ತಪ್ಪು' ಎಂಬ ಪ್ರಜ್ಞೆಯನ್ನು ಹೊಂದಿರುತ್ತಾನೆ." ಹೇಗೂ, ಎಂದಿಗೂ ಮನಸಾಕ್ಷಿಯ ವೇದನೆಗಳನ್ನೇ ಅನುಭವಿಸದಂಥ ಕೆಲವರನ್ನು ನೀವು ನೋಡಿರಬಹುದು, ಅವರು (ಯಾರೂ ಬೇಕಾದರೂ ಹೇಳಬಹುದಾದ ರೀತಿಯಲ್ಲಿ) "ಮನಸಾಕ್ಷಿಯೆ ಇಲ್ಲದವರು." ಬೇರೊಂದು ಕಡೆಯಲ್ಲಿ, ಪೌಲನು ಬರೆದದ್ದೇನೆಂದರೆ ಒಬ್ಬನು ತನ್ನ ಮನಸ್ಸಿನಲ್ಲಿ "ಬರೆಯುಳ್ಳವನಾದರೆ" (ನೋಡಿರಿ 1 ತಿಮೊಥೆ 4:2), ಆಗ ಮನಸಾಕ್ಷಿಯು ಕ್ರಿಯೆ ಮಾಡುವದನ್ನು ನಿಲ್ಲಿಸುತ್ತದೆ. ಒಬ್ಬನು ಅದರ ಸ್ವರಕ್ಕೆ ನಿರಂತರವಾಗಿ ಕಿವಿಗೊಡುವದನ್ನು ನಿಲ್ಲಿಸಿದರೆ ಮನಸ್ಸಿನಲ್ಲಿ ಬರೆಯುಳ್ಳವನಾಗಿರುವನು, ಕೊನೆಗೆ ಅದು ಮಾತಾಡುವದನ್ನೇ ನಿಲ್ಲಿಸುವಂತೆ ಮಾಡಬಹುದು. ಒಬ್ಬನು ಎಂದಿಗೂ ತನ್ನ ಮನಸಾಕ್ಷಿಗೆ ವಿರುದ್ಧವಾಗಿ ಹೋಗಬಾರದೆಂಬದು ಅನೇಕ ವಾಕ್ಯಗಳಿಂದ ಸ್ಪಷ್ಟವಾಗುತ್ತದೆ.[80] ಒಬ್ಬನು ತನ್ನ ಮನಸಾಕ್ಷಿಗೆ ವಿರುದ್ಧವಾಗಿ ಹೋಗುವ ಪ್ರತಿ ಸಾರಿಯೂ, ಆತನು ತನ್ನ ಮನಸಾಕ್ಷಿಯನ್ನು ಕಡಿಮೆ ಪ್ರಭಾವಕಾರಿಯಾಗುವಂತೆ ಮಾಡುವನು. ಇದನ್ನೇ ನಿರಂತರವಾಗಿ ಮಾಡುವ ಮೂಲಕ ಆತನು ದೇವರಿಂದ ಅನುಗ್ರಹಿಸಲ್ಪಟ್ಟ ಸುರಕ್ಷಾ ಕವಚವನ್ನು ಹಾಳುಮಾಡುತ್ತಾನೆ.

*"ನಿನ್ನ ಮನಸಾಕ್ಷಿಯೇ ನಿನಗೆ ಮಾರ್ಗದರ್ಶಿಯಾಗಿರಲಿ"* ಮನಸಾಕ್ಷಿ ಮತ್ತು ಅದನ್ನು ಮೀರಿ ಜೀವಿಸದಿರುವದರ ಪ್ರಾಮುಖ್ಯತೆಯ ಕುರಿತ ಪೌಲನು ಮಾಡಿದ ಉಪದೇಶದ ಕಾರಣದಿಂದ, ಒಬ್ಬನು "ತನ್ನ ಮನಸಾಕ್ಷಿಗೆ ಅನುಗುಣವಾಗಿ ಜೀವಿಸುವದೇ ಬಹು ಮುಖ್ಯ" ಎಂಬ ನಿರ್ಧಾರಕ್ಕೆ ಕೆಲವರು ಬರುತ್ತಾರೆ. ಜಗತ್ತಿನ ಕೆಲವು ಭಾಗಗಳಲ್ಲಿ ಆಗಾಗ ಕೇಳಿಸಕೊಳ್ಳಲ್ಪಡುವಂಥ ತತ್ವಜ್ಞಾನ ಏನೆಂದರೆ, "ನಿನ್ನ ಮನಸಾಕ್ಷಿಯೇ ನಿನಗೆ ಮಾರ್ಗದರ್ಶಿಯಾಗಿರಲಿ." ನಾವು ನಮ್ಮ ಮನಸಾಕ್ಷಿಯನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂಬದೇನೋ ನಿಜ, ಆದರೆ ಮನಸಾಕ್ಷಿಯೇ ನಮಗೆ ದೋಷಾತೀತವಾದ ಮಾರ್ಗದರ್ಶಿ ಎಂಬ ತೀರ್ಮಾನಕ್ಕೆ ಬರಬಾರದು. ಪೌಲನು ಕ್ರೈಸ್ತರನ್ನು ಹಿಂಸಿಸುತ್ತಿದ್ದಾಗ,

ಆತನು ಅದನ್ನು ಶುದ್ಧವಾದ ಮನಸಾಕ್ಷಿಯಿಂದಲೇ ಮಾಡಿದನು (ನೋಡಿರಿ ಅಪೊಸ್ತಲರ ಕೃತ್ಯಗಳು 23:1, 26:9).

ನೈತಿಕ ಹಾಗೂ ಧಾರ್ಮಿಕ ವಿಚಾರದಲ್ಲಿ ಮನಸಾಕ್ಷಿಯೊಂದೇ ಸಾಕಾದ ಮಾರ್ಗದರ್ಶಿಯಾಗುವದಿಲ್ಲ ಯಾಕೆಂದರೆ ಅದು ತನಗೆ *ಲಭ್ಯವಿರುವ ತಿಳುವಳಿಕೆಗೆ* ಮಾತ್ರವೇ ಸಿಮೀತವಾಗಿರುತ್ತದೆ.[81] ಮನಸಾಕ್ಷಿಯು ಒಬ್ಬ ವ್ಯಕ್ತಿಗೆ ಸರಿ ಹಾಗೂ ತಪ್ಪಿನ ನಡುವೆ ಒಂದು ವ್ಯತ್ಯಾಸವಿರುತ್ತದೆ ಎಂದು ಹೇಳುವದು; ಆದರೆ ಒಬ್ಬನ ಮನಸಾಕ್ಷಿಯು ಯಾವದನ್ನು ಸರಿ ಅಥವಾ ತಪ್ಪೆಂದು ಪರಿಗಣಿಸುತ್ತದೆಂಬದು ಬಹಳಷ್ಟು ಮಟ್ಟಿಗೆ ಆತನಿಗೆ ಕಲಿಸಲ್ಪಟ್ಟ ಸಂಗತಿಗಳ ಮೇಲೆ ಅವಲಂಭಿತವಾಗಿರುತ್ತದೆ. ಬಹಳ ಜನರು ವಿಗ್ರಹಗಳನ್ನು ಪೂಜಿಸುತ್ತಾರೆ ಅಥವಾ ಬಹುಪತ್ನಿತ್ವವನ್ನು ಹೊಂದಿರುತ್ತಾರೆ, ಆದರೆ ಅವರ ಮನಸಾಕ್ಷಿಯು ಅವರಿಗೆ ತೊಂದರೆ ಮಾಡುವದಿಲ್ಲ ಯಾಕೆಂದರೆ ಅವರಿಗೆ ಚಿಕ್ಕಂದಿನಿಂದ ಅದನ್ನೇ ಕಲಿಸಲಾಗಿರುತ್ತದೆ.

ಮನಸಾಕ್ಷಿಯನ್ನು ಒಬ್ಬ ನ್ಯಾಯಾಧೀಶನಿಗೆ, ಸಾಕ್ಷಿಗಾರನಿಗೆ, ಮತ್ತು ನ್ಯಾಯವನ್ನು ಜಾರಿಗೊಳಿಸುವವನಿಗೆ ಹೋಲಿಸಬಹುದು. ಕಾನೂನುಗಳನ್ನು ರೂಪಿಸುವದು ನ್ಯಾಯಾದೀಶನ ಕೆಲಸ, ಅದು ಸಾಕ್ಷಿ ಅಥವಾ ನ್ಯಾಯವನ್ನು ಜಾರಿಗೊಳಿಸುವವನ ಕೆಲಸವಾಗಿರುವದಿಲ್ಲ. ಬದಲಾಗಿ, ಅವರ ಉದ್ದೇಶವು ಕಾನೂನುಗಳನ್ನು ಕಾರ್ಯರೂಪಕ್ಕೆ ತರುವದೇ ಆಗಿರುತ್ತದೆ. ಅದೇ ರೀತಿಯಲ್ಲಿ, ಮನಸಾಕ್ಷಿಯು ಒಂದು ನ್ಯಾಯಾಂಗ ವ್ಯವಸ್ಥೆ ಹಾಗೂ ಜಾರಿಗೆ ತರುವ ಶಾಖೆಯಾಗಿದೆ, ಹೊರತು ಶಾಸಕಾಂಗ ಸಂಸ್ಥೆಯಲ್ಲ. ಅದು ತನಗೆ ಲಭ್ಯವಿರುವ ಆತ್ಮೀಕ ಹಾಗೂ ನೈತಿಕ ವಿಧಿಗಳನ್ನು ಜಾರಿಗೆ ತರಬಲ್ಲದಷ್ಟೇ. "ಒಂದು ಮನಸಾಕ್ಷಿಯು ಎಷ್ಟರ ಮಟ್ಟಿಗೆ ಸುರಕ್ಷಿತವಾಗಿ ಮಾರ್ಗದರ್ಶಿಸಲ್ಪಡುತ್ತದೋ ಅಷ್ಟರ ಮಟ್ಟಿಗೆ ಮಾತ್ರವೇ ಅದು ಸುರಕ್ಷಿತ ಮಾರ್ಗದರ್ಶಿ ಆಗಿರಬಲ್ಲದು" ಎಂದು ಹೇಳುತ್ತಾರೆ- ಅಂದರೆ ಅದು ದೇವರ ವಾಕ್ಯದ ಉಪದೇಶಗಳಿಂದ ಸುರಕ್ಷಿತವಾಗಿ ಮಾರ್ಗದರ್ಶಿಸಲ್ಪಟ್ಟರೆ ಮಾತ್ರ.

*ಒಂದು ನಿಷ್ಕಳಂಕ ಮನಸಾಕ್ಷಿಯನ್ನು ಕಾಪಾಡಿಕೊಳ್ಳುವದು.* ಫೇಲಿಕ್ಸನ ಮುಂದೆ ಪೌಲನು ತನ್ನನ್ನು ಸಮರ್ಥಿಸಿಕೊಳ್ಳುತ್ತಾ ಹೇಳಿದ್ದೇನೆಂದರೆ, ". . . ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸಮಾಡಿಕೊಳ್ಳುತ್ತೇನೆ . . ." (ಅಪೊಸ್ತಲರ ಕೃತ್ಯಗಳು 24:16). "ನಾನು ಅಭ್ಯಾಸ ಮಾಡಿಕೊಳ್ಳುತ್ತೇನೆ . . ." ಎಂಬ ಅನುವಾದಿಸಲ್ಪಟ್ಟ ಗ್ರೀಕ್ ಪದವು ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಕ್ರೀಡಾಪಟುಗಳು ಹುರುಪಿನಿಂದ ಕೈಗೊಳ್ಳುತ್ತಿದ್ದ ತರಬೇತಿಯನ್ನು ಸೂಚಿಸುವದಕ್ಕಾಗಿ ಗ್ರೀಕ್.ರಿಂದ ಉಪಯೋಗಿಸಲ್ಪಡುತ್ತಿತ್ತು. ಇಲ್ಲಿ ಅಕ್ಷರಶಃ ಪೌಲನು ಹೇಳುತ್ತಿದ್ದದ್ದೇನೆಂದರೆ, "ನಾನು ನಿಷ್ಕಳಂಕ ಮನಸಾಕ್ಷಿಯನ್ನು ಹೊಂದಿರುವದಕ್ಕಾಗಿ *ತರಬೇತಿ* (*ಅಭ್ಯಾಸ*) *ಮಾಡಿಕೊಳ್ಳುತ್ತೇನೆ.*"[82] ಒಬ್ಬ ಗಂಭೀರ ಕ್ರೀಡಾಪಟುವು ಕೈಗೊಳ್ಳುವ ಶಕ್ತಿಹಿಂಡುವ ವ್ಯಾಯಾಮ, ತಾಸು ಗಟ್ಟಲೆ ಸಮಯ ಕಳೆಯುವದು ಮತ್ತು ಸುಸ್ತುಗೊಳಿಸುವಂಥ ತರಬೇತಿ ಬಗ್ಗೆ ಯೋಚಿಸಿರಿ. ಪೌಲನು "ಯಾವಾಗಲೂ ನಿರ್ದೋಷಿ ಮನಸಾಕ್ಷಿಯನ್ನು ಹೊಂದಿರಬೇಕೆಂದು" ಆ *ರೀತಿಯ* ಶ್ರಮವನ್ನು ತೆಗೆದುಕೊಳ್ಳುತ್ತಿದ್ದನು. ನಿಮ್ಮ

ಮನಸಾಕ್ಷಿಯು ಉತ್ತಮವಾದ ಕೆಲಸಮಾಡುವ ಕ್ರಮದಲ್ಲಿರುವದನ್ನು ಖಚಿತಪಡಿಸಲು ನೀವು ಕೈಕೊಳ್ಳುವದಕ್ಕೆ ಕೆಲವು ಸಲಹೆಗಳು ಇಲ್ಲಿವೆ:

ದೇವರ ವಾಕ್ಯವನ್ನು ಅಧ್ಯಯನಮಾಡುವ ಕುರಿತು ಗಂಭೀರರಾಗಿರಿ.

ಪಾಪದ ವಿಷಯದಲ್ಲಿ ಗಂಭೀರತೆಯನ್ನು ತೆಗೆದುಕೊಳ್ಳಿರಿ (ಯಾವದು ಸರಿ ಹಾಗೂ ತಪ್ಪು ಎಂಬದನ್ನು ತಿಳಿಯಿರಿ).

ಪಾಪದ ಬಗ್ಗೆ ಸತ್ಯವೇದ ಹೇಳುವದನ್ನು *ಸ್ವೀಕರಿಸಿಕೊಳ್ಳಲು* ಗಂಭೀರವಾಗಿ ತೆಗೆದುಕೊಳ್ಳಿರಿ.

ನಿಮ್ಮ ಮನಸಾಕ್ಷಿಯ ಮಾತನ್ನು ಕೇಳಬೇಕೆಂಬದನ್ನು ಗಂಭೀರತೆವಾಗಿ ತೆಗೆದುಕೊಳ್ಳಿರಿ.

ನೀವು ತಪ್ಪು ಮಾಡುತ್ತಿರುವಿರೆಂದು ಮನಸಾಕ್ಷಿಯು ಹೇಳುವಾಗ ಸರಿಪಡಿಸಿಕೊಳ್ಳುವ ಬಗ್ಗೆ ಗಂಭೀರತೆಯನ್ನು ವಹಿಸಿಕೊಳ್ಳಿರಿ.

ಎಲ್ಲಕ್ಕಿಂತ ಮೇಲಾಗಿ, "ಒಂದು ನಿರ್ಮಲ ಮನಸಾಕ್ಷಿಯನ್ನು" ಹೊಂದುವ ಬಗ್ಗೆ ಗಂಭೀರತೆ ತೆಗೆದುಕೊಳ್ಳಿರಿ.

ನೀವು ತಪ್ಪು ಮಾಡಿದ್ದೀರೆಂದು ನಿಮ್ಮ ಮನಸಾಕ್ಷಿಯು ಹೇಳುವಾಗ, ನಿಮ್ಮ ಪಾಪದ ಬಗ್ಗೆ ಪಶ್ಚಾತ್ತಾಪ ಪಡಿರಿ ಮತ್ತು ಶುದ್ಧಗೊಳ್ಳುವದಕ್ಕೆ ಕರ್ತನ ಬಳಿಗೆ ಹೋಗಿರಿ (ನೋಡಿರಿ ಇಬ್ರಿಯ 9:14; 10:22).

## ಎಲ್ಲಾ ಜನರಿಗೆ ಒಂದು ಅಗತ್ಯತೆ ಇದೆ (2:14, 15)

*ಒಂದು ಪ್ರಶ್ನೆ.* ನಾನು ಬಾಲಕನಾಗಿದ್ದಾಗ, ಹಿರಿಯರು ಹೀಗೆ ಹೇಳುವದನ್ನು ಕೇಳಿಸಿಕೊಳ್ಳುತ್ತಿದ್ದೆನು, "ಆ ಬೇರೆ ದೇಶಗಳಲ್ಲಿ ಇದುವರೆಗೂ ಸುವಾರ್ತೆಯನ್ನೇ ಕೇಳಿಲ್ಲದ ಜನರ ವಿಷಯವೇನು: ಅವರು ಯೇಸುವಿನ ಬಗ್ಗೆ ಕೇಳುವದಕ್ಕೆ ಎಂದಿಗೂ ಅವಕಾಶವೇ ಸಿಕ್ಕಲಿಲ್ಲವೆಂದರೂ ಅವರು ನಾಶಗೊಳ್ಳುವರೋ?" ಕೆಲವು ಸಾರಿ ಈ ಭಾವನಾತ್ಮಕ ಹೇಳಿಕೆಯು ಕೊಡಲ್ಪಡುತ್ತದೆ: "ಖಂಡಿತ, ಅವರು ತಮಗೆ ಎಷ್ಟು ಗೊತ್ತು ಅಷ್ಟರ ಮಟ್ಟಿಗೆಯಾದರೂ ಸಾಧ್ಯವಾದಷ್ಟು ಉತ್ತಮವಾಗಿ ಜೀವಿಸಿದರೆ, ದೇವರು ಅವರನ್ನು ರಕ್ಷಿಸುವನು!" ಆಗಾಗ, ಈ ಅಭಿಪ್ರಾಯವನ್ನು ಬೆಂಬಲಿಸುವದಕ್ಕಾಗಿ ರೋಮಾ 2:14, 15 ವಚನಗಳನ್ನು ಉಪಯೋಗಿಸ ಲಾಗುತ್ತಿತ್ತು. ಇಂಥ ರೀತಿಯ ಮನೋಭಾವದ ನಿಮಿತ್ತವಾಗಿ, ಕೆಲವರು ಬೇರೆ ದೇಶಗಳಿಗೆ ಹೋಗಿ ಸೇವೆಯನ್ನು ಕೈಗೆತ್ತಿಕೊಳ್ಳಲು ಕಾಳಜಿಯಿಲ್ಲದವರಾಗಿ ಮಾರ್ಪಟ್ಟಿದ್ದರು.

ನೀವು ಮತ್ತು ನಾನು "ದೇವರಂತೆ ವರ್ತಿಸುವ" ಧೈರ್ಯಮಾಡದಿರೋಣ; ಯಾರು ರಕ್ಷಿಸಲ್ಪಡುವರು ಅಥವಾ ರಕ್ಷಿಸಲ್ಪಡುವದಿಲ್ಲ ಎಂಬದನ್ನು ನಿರ್ಧರಿಸುವವನು ದೇವರೇ, ಹೊರತು ನಾವಲ್ಲ. ಈ ವಿಷಯದಲ್ಲಿ, ಬೇರೆ ಎಲ್ಲಾ ವಿಷಯಗಳ ಪ್ರಕಾರವೇ, ದೇವರು ನ್ಯಾಯವಾದದ್ದನ್ನೇ ಮಾಡುವನೆಂದು ಬಲ್ಲೆವು (ನೋಡಿರಿ ಆದಿಕಾಂಡ 18:25). ಅದೇ ವೇಳೆಯಲ್ಲಿ, ಇಂದು ಜನರು ಸುವಾರ್ತೆಯಿಲ್ಲದೆ ರಕ್ಷಿಸಲ್ಪಡಬಲ್ಲರು ಅವರು "ತಮಗೆ

ತಿಳಿದಿರುವದರ ಮಟ್ಟಿಗೆ ಒಳ್ಳೇದನ್ನು ಮಾಡಿದರೆ ಸಾಕು" ಎಂಬ ಬಗ್ಗೆ ರೋಮಾ 2:14, 15 ಉಪದೇಶಿಸುತ್ತದೋ ಅಥವಾ ಇಲ್ಲವೋ ಎಂಬ ಕುರಿತು ನಾವು ನ್ಯಾಯಯುತವಾಗಿ ಚರ್ಚೆಯನ್ನು ಮಾಡಬಹುದು. ಈ ವಾಕ್ಯಭಾಗವು ಇದನ್ನು ಕಲಿಸುತ್ತದೆಂದು ನನಗೆ ಅನ್ನಿಸುವದಿಲ್ಲ. ನಾನು ಈ ತೀರ್ಮಾನಕ್ಕೆ ಬರಲು ಕಾರಣಗಳೇನೆಂದು ನಿಮಗೆ ತಿಳಿಸುವೆನು.

*ಹಳೆ ಒಡಂಬಡಿಕೆಯ ಪರಿಸ್ಥಿತಿ, ಹೊರತು ಹೊಸ ಒಡಂಬಡಿಕೆಯ ವ್ಯವಸ್ಥೆಯಲ್ಲ.* ಮೊಟ್ಟಮೊದಲನೆಯದಾಗಿ, ಪೌಲನು ಯೆಹೂದ್ಯರು ಹಾಗೂ ಅನ್ಯಜನರ ನಡುವಿನ ವ್ಯತ್ಯಾಸದ ಬಗ್ಗೆ ತಿಳಿಸುವದಕ್ಕೆ ಇರುವ ಹಿನ್ನಲೆಯು ಹಳೆ ಒಡಂಬಡಿಕೆಯಲ್ಲಿನ ಪರಿಸ್ಥಿತಿಯಾಗಿದೆ ಹೊರತು ಅದು ಹೊಸ ಒಡಂಬಡಿಕೆಯದ್ದಲ್ಲ. Douglas J. Moo ಹೇಳಿದ್ದೇನೆಂದರೆ, 1:18-3:20ರಲ್ಲಿ, ಪೌಲನು "ಕ್ರಿಸ್ತನ ಮುಂಚಿನ ಕಾಲಘಟ್ಟವನ್ನು" ಕುರಿತು ಬಣ್ಣಿಸುತ್ತಾನೆ.[83] ಕ್ರಿಸ್ತನು ಬರುವದಕ್ಕೆ ಮುಂಚೆ, ದೇವರು ಯೆಹೂದ್ಯರ (ಅವರ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರವಿತ್ತು) ವಿಷಯದಲ್ಲಿ ಅನ್ಯಜನರಿಗಿಂತಲೂ (ಅವರ ಬಳಿಯಲ್ಲಿ ಲಿಖಿತ ಧರ್ಮಶಾಸ್ತ್ರವಿರಲಿಲ್ಲ) ವ್ಯತ್ಯಾಸವಾಗಿ ನಡೆದುಕೊಂಡನು. ಹೇಗೂ, ಯೇಸು, . . . .

> . . . ಯೇಸು ಎರಡೂ ಗುಂಪುಗಳನ್ನು [ಯೆಹೂದ್ಯರು ಮತ್ತು ಅನ್ಯಜನರು] ಒಂದಾಗಿ ಮಾಡಿದನು ಹಾಗೂ ಇಬ್ಭಾಗಿಸುವ ಗೋಡೆಯನ್ನು (ಧರ್ಮಶಾಸ್ತ್ರ) ಕೇಡವಿ ಹಾಕಿದನು, . . . ಧರ್ಮಶಾಸ್ತ್ರವನ್ನು ನಿರರ್ಥಕಗೊಳಿಸಿ.. . ಹೀಗೆ ಆತನು ಸ್ವತಃ ಇಬ್ಬರನ್ನು [ಯೆಹೂದ್ಯರು ಮತ್ತು ಅನ್ಯಜನರು] ಒಂದೇ ನೂತನ ವ್ಯಕ್ತಿಯಾಗಿ ಮಾಡುವಂತಾಗಲು, ಅವರಿಬ್ಬರನ್ನೂ ಶಿಲುಬೆಯ ಮೂಲಕವಾಗಿ ದೇವರೊಂದಿಗೆ ಸಮಾಧಾನ ಏರ್ಪಡಿಸಿ, ಸಂಧಾನಮಾಡಿ ಒಂದೇ ದೇಹವಾಗಿ [ಸಭೆ; ಎಫೆಸ 1:22, 23] ಮಾಡಿದನು (ಎಫೆಸ 2:14-16).

ಈಗ, ಕರ್ತನಲ್ಲಿ, "ಯೆಹೂದ್ಯನೂ ಗ್ರೀಕನೂ (ಅನ್ಯಜನ) ಎಂದು ಭೇದವಿಲ್ಲ," ಯಾಕೆಂದರೆ ಎಲ್ಲರೂ "ಕ್ರಿಸ್ತಯೇಸುವಿನಲ್ಲಿ ಒಂದೇ" ಆಗಿದ್ದಾರೆ (ಗಲಾತ್ಯ 3:28). ಇಂದು ಕೆಲವರು ಒಂದು ವಿಷಯದ ಆಧಾರದಿಂದ (ಯೇಸುವಿನಲ್ಲಿ ನಂಬಿಕೆಯಿಡುವದರಿಂದ) ರಕ್ಷಿಸಲ್ಪಟ್ಟಿದ್ದಾರೆ, ಮತ್ತು ಇನ್ನು ಕೆಲವರು ಇನ್ನೊಂದು ವಿಷಯದ ಆಧಾರದಿಂದ (ತಮಗೆ ಸಾಧ್ಯವಾದಷ್ಟು ಉತ್ತಮವನ್ನು ಮಾಡುವದರಿಂದ) ರಕ್ಷಿಸಲ್ಪಟ್ಟಿದ್ದಾರೆಂದು ಕಲಿಸುವದು ಹೊಸ ಒಡಂಬಡಿಕೆಯ "ಒಂದೇ ನಂಬಿಕೆ [ಉಪದೇಶ[" ಗೆ ತದ್ವಿರುದ್ಧವಾಗಿರುತ್ತದೆ (ಎಫೆಸ 4:1-6).

*ನ್ಯಾಯತೀರ್ಪು, ಹೊರತು ರಕ್ಷಣೆಯಲ್ಲ.* ಎರಡನೆಯದಾಗಿ, (ಮತ್ತು ಅತ್ಯಂಥ ಪ್ರಾಮುಖ್ಯವಾಗಿ) ರೋಮಾ 2:14, 15ರಲ್ಲಿ (ಮತ್ತು ಅದರ ಸನ್ನಿವೇಶದ ಪ್ರಕಾರ), "ಪೌಲನು ಇಲ್ಲಿ ನ್ಯಾಯತೀರ್ಪಿನ ವಿಷಯವಾಗಿ ಬರೆಯುತ್ತಿದ್ದಾನೆ ಹೊರತು ರಕ್ಷಣೆ ಬಗ್ಗೆಯಲ್ಲ."[84] ಆತನು ಇಲ್ಲಿ ಕೆಲವರು ತಮಗೆ ಸಿಕ್ಕ ಜ್ಞಾನೋದಯದ ಪ್ರಕಾರ ಜೀವಿಸುತ್ತಿದ್ದಾರೆ ಮತ್ತು ಆದ್ದರಿಂದ ಅವರು ರಕ್ಷಿಸಲ್ಪಡುವರೆಂದು ಸ್ಥಾಪಿಸುತ್ತಿಲ್ಲ. ಬದಲಾಗಿ, ಒಬ್ಬನೂ ಸಹ ತನಗೆ ತಿಳಿದಿರುವ ಸತ್ಯದ ಅನುಸಾರವಾಗಿ ಜೀವಿಸುತ್ತಿಲ್ಲ, ಹಾಗೂ ಈ ಕಾರಣದಿಂದ ಎಲ್ಲರೂ *ಕಳೆದು ಹೋಗಿದ್ದಾರೆ* ಎಂಬದನ್ನು ಒತ್ತಿಹೇಳುತ್ತಿದ್ದಾನೆ (ನೋಡಿರಿ 2:12). Batey ಯವರ

ಅಭಿಪ್ರಾಯ ಹೀಗಿತ್ತು:

> ಒಬ್ಬ ಅನ್ಯದೇವರ ಆರಾಧಕನು ಪ್ರಾಮಾಣಿಕನಾಗಿ ತನ್ನ ಸಾಧ್ಯವಾದಷ್ಟು ಒಳ್ಳೇದನ್ನು ಮಾಡುತ್ತಾ ಮನಸಾಕ್ಷಿಯಿಂದ ಜೀವಿಸಿದನೆಂಬದಕ್ಕಾಗಿ ಪೌಲನು ಅವನಿಗೆ ಯಾವದೇ ನಿರೀಕ್ಷೆಯಿದೆಯೆಂದು ಹೇಳುತ್ತಿಲ್ಲ. ಒಬ್ಬ ಅನ್ಯನು ಆತನ ಪ್ರಾಮಾಣಿಕತೆಯಿಂದಾಗಿ ದೇವರಿಗೆ ಸ್ವೀಕಾರ ಯೋಗ್ಯನೆಂದು ಪೌಲನು ಪರಿಗಣಿಸಿದ್ದೇಯಾಗಿದ್ದರೆ, ಅದು ಆತನಿಗಿದ್ದ ಸುವಾರ್ತೆಯನ್ನು ಸಾರಬೇಕೆಂಬ ವೈರಾಗ್ಯಕ್ಕೆ ತೀವ್ರವಾಗಿ ಹಿನ್ನಡೆಯಾಗಿರುತ್ತಿತ್ತು.[85]

ಎಲ್ಲಾ ಮಾನವರು-ಯೆಹೂದ್ಯರಾಗಿರಲಿ ಅಥವಾ ಅನ್ಯಜನರಾಗಲಿ-ಕ್ರಿಸ್ತನಿಲ್ಲದೆ ಕಳೆದು ಹೋಗಿದ್ದಾರೆಂಬುದನ್ನು ಪೌಲನು ದೃಢಪಡಿಸುತ್ತಿದ್ದಾನೆ. ಒಂದು ಸಾಮಾನ್ಯವಾಗಿರುವ ತಪ್ಪು ಅಭಿಪ್ರಾಯವೇನೆಂದರೆ ಜನರು *ಸುವಾರ್ತೆಯನ್ನು ತಿರಸ್ಕರಿಸುವ ಕಾರಣದಿಂದ* ಕಳೆದುಹೋಗಿದ್ದಾರೆ ಎಂಬುದು. ಇಲ್ಲ, ಇಲ್ಲ, ಇಲ್ಲ, ಜನರು *ಪಾಪಿಗಳಾಗಿದ್ದಾರಾದ್ದರಿಂದ* ಕಳೆದು ಹೋಗಿದ್ದಾರೆ. Chris Bullard ಈ ಅಂಶದ ಬಗ್ಗೆ ಕಲಿಸುವ ವೇಳೆ ಆತನು ಘೋರ ವಿಷಸರ್ಪದಿಂದ ಕಚ್ಚಲ್ಪಟ್ಟ ಒಬ್ಬ ಮನುಷ್ಯನ ಬಗ್ಗೆ ಹೇಳಿದನು.[86] ಸ್ನೇಹಿತರು ಆತನನ್ನು ತಕ್ಷಣವೇ ಆತನಿಗೆ ವಿಷ-ನಿರೋಧಕ ಚುಚ್ಚುಮದ್ದನ್ನು ಹಾಕಿಸುವಂತೆ ಒಂದು ಆಸ್ಪತ್ರೆಗೆ ಕರೆದೊಯ್ದರು. ಹೇಗೂ, ಅವರು ತಕ್ಕ ಸಮಯದಲ್ಲಿ ಆಸ್ಪತ್ರೆಯನ್ನು ತಲುಪುವದಕ್ಕಾಗಲಿಲ್ಲ, ಮತ್ತು ಆ ವ್ಯಕ್ತಿಯು ಮರಣಿಸಿದನು. Bullard ಹೀಗೆ ಕೇಳುತ್ತಾನೆ, "ಆ ವ್ಯಕ್ತಿಯು ಚುಚ್ಚುಮದ್ದು ಸಿಕ್ಕಲಿಲ್ಲವೆಂಬದಕ್ಕಾಗಿ ಸತ್ತನೋ?" ಸಹಜವಾಗಿ ಇದಕ್ಕೆ ಹೌದೆಂಬ ಉತ್ತರ ಬರಬಹುದು. ನಂತರ ಆತನು ಹೀಗೆ ಪ್ರತಿಕ್ರಿಯಿಸಿದನು, "ಇಲ್ಲ, ಆತನು ಸತ್ತಿದ್ದು *ಒಂದು ಘೋರವಿಷಕಾರಿ ಸರ್ಪ ಕಚ್ಚಿದ್ದರಿಂದಲೇ!."* ಅದೇ ರೀತಿಯಲ್ಲಿಯೇ, ಒಬ್ಬನು ಕಳೆದುಹೋಗಿದ್ದರೆ, ಅದಕ್ಕೆ ಕಾರಣವು ಅವನ ವೈಯಕ್ತಿಕ ಪಾಪವೇ ಆಗಿರುತ್ತದೆ.

ಜನರು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು, ಮತ್ತು ಹೀಗೆ ಅವರು ರಕ್ಷಣೆ ಹೊಂದಲಿ ಅಥವಾ ಹೊಂದದಿರಲಿ ಎಂದುಕೊಂಡು ಸುವಾರ್ತೆಯನ್ನು ಕೊಡುವದಕ್ಕಾಗಿ ಯೇಸು ಭೂಮಿಗೆ ಬರಲಿಲ್ಲ. ಇಲ್ಲ, ಮಾನವ ಜನಾಂಗವು *ಈಗಾಗಲೇ ಕಳೆದುಹೋಗಿರುವುದರಿಂದಲೇ* (ಲೂಕ 19:10) ಮತ್ತು ಆತನು ಶಿಲುಬೆಯ ಮೇಲೆ ಮರಣಿಸಿದ ಹೊರತು ಅವರು ನಿರೀಕ್ಷೆಯಿಲ್ಲದವರಾಗಿದ್ದಾರೆ (ಎಫೆಸ 2:12) ಎಂಬ ಕಾರಣಕ್ಕಾಗಿಯೇ ಆತನು ಭೂಮಿಗೆ ಬಂದನು! ಇಂದು ಕೆಲವರು ಸುವಾರ್ತೆಯನ್ನು ಕೇಳದೆಯೇ ರಕ್ಷಿಸಲ್ಪಡುವರು ಎಂಬ ವಿಚಾರದ ಬಗ್ಗೆ Thomas ವ್ಯಾಖ್ಯಾನಿಸಿದ್ದಾನೆ. ಆತನು ಹೇಳಿದ್ದೇನೆಂದರೆ:

> ಈ ಅಭಿಪ್ರಾಯದ ಬಗ್ಗೆ ಹೇಳುವದಾದರೆ, . . . ಇಡೀ ಲೋಕವನ್ನು ರಕ್ಷಣೆ ನಡಿಸುವ ದಾರಿಯೆಂದರೆ ಪ್ರತಿಯೊಬ್ಬರನ್ನು ಅಜ್ಞಾನದಲ್ಲಿ ಬೆಳೆಯುವದಕ್ಕೆ ಬಿಟ್ಟುಬಿಡುವದು. ಬೈಬಲ್.ಗಳನ್ನು ಸುಟ್ಟುಬಿಡಿರಿ ಮತ್ತು ಯಾರೊಬ್ಬರೂ ಎಂದೂ ಸುವಾರ್ತೆಯ ಸಂದೇಶವನ್ನು ಉಲ್ಲೇಖಿಸಬೇಡಿರಿ. ಮತ್ತು ಆಗ ಎಲ್ಲಾ ಮಾನವರು ಅಜ್ಞಾನದ ಮೂಲಕವಾಗಿ ರಕ್ಷಿಸಲ್ಪಡುವರು! ಇದು, ಖಂಡಿತವಾಗಿ, ಒಂದು ದುರ್ಬಲ ಹಾಗೂ

ಅಸಂಬದ್ಧ [ಅರ್ಥಹೀನ ವಾದ[, ಆದರೆ ಇದೊಂದು ತಾರ್ಕಿಕವಾಗಿದೆ.[87]

ಒಬ್ಬ ವ್ಯಕ್ತಿಗೆ ಸುವಾರ್ತೆಯನ್ನು ಆಲಿಸುವ ಅವಕಾಶವು ಎಂದಿಗಾದರೂ ಸಿಕ್ಕುತ್ತದೋ ಅಥವಾ ಸಿಕ್ಕುವದಿಲ್ಲವೋ ,ಆದರೆ ಆತನು ಕ್ರಿಸ್ತನಿಲ್ಲದೆ ತನ್ನ ಪಾಪದಲ್ಲಿ ಕಳೆದು ಹೋದವನು ಎಂಬ ಬೈಬಲಿನ ಉಪದೇಶವನ್ನು ನಾನು ಬಹಳ ಬಲವಾಗಿ ಒತ್ತಿ ಹೇಳಲಿಕ್ಕಾಗದು (ಎಫೆಸ 2:1)! ನಾನು ಈ ಅನ್ವಯಿಕೆಗೆ "ಎಲ್ಲಾ ಜನರಿಗೂ ಒಂದು ಅಗತ್ಯತೆ ಇದೆ" ಎಂದು ಶಿರೋನಾಮೆ ಕೊಟ್ಟಿದ್ದೇನೆ. ಆ ಅಗತ್ಯತೆಯು ಕ್ರಿಸ್ತನ ಸುವಾರ್ತೆ ಯೇ! ಪುನಃ, ನಾನು ಹೇಳುತ್ತೇನೆ, ಏನೆಂದರೆ ದೇವರೊಬ್ಬನೇ ನ್ಯಾಯಾಧಿಪತಿ; ಯಾರು ರಕ್ಷಿಸಲ್ಪಡುವರು ಮತ್ತು ಯಾರು ಕಳೆದುಹೋಗುವರು ಎಂಬ ಬಗ್ಗೆ ಅಂತಿಮ ನಿರ್ಧಾರ ವನ್ನು ತೆಗೆದುಕೊಳ್ಳುವವನು ಆತನೇ. ಅದೇ ವೇಳೆಯಲ್ಲಿ, ವಾಕ್ಯಗಳ ವಿಷಯದಲ್ಲಾದರೋ, ಒಬ್ಬನು ಸುವಾರ್ತೆಯನ್ನು ಆಲಿಸಿ ಅದಕ್ಕೆ ವಿಧೇಯನಾಗಿಲ್ಲವಾದರೆ ಆತನು ರಕ್ಷಿಸಲ್ಪಟ್ಟ ಸ್ಥಿತಿಯಲ್ಲಿದ್ದಾನೆಂದು ಪರಿಗಣಿಸುವದಕ್ಕೆ ನಮಗೆ ಯಾವ ಅಧಿಕಾರವೂ ಇಲ್ಲ (2 ಥೆಸಲೋನಿಕ 1:8; 1 ಪೇತ್ರ 4:17). ಆದುದರಿಂದ, ಕಳೆದು ಹೋಗಿರುವ ಹಾಗೂ ಸಾಯುತ್ತಿರುವ ಲೋಕಕ್ಕೆ ಸುವಾರ್ತೆಯನ್ನು ಕೊಂಡೊಯ್ಯದಿರುವದಕ್ಕೆ ನೆಪಗಳನ್ನು ಹುಡುಕುವ ಬದಲಾಗಿ, ನಾವು ಎಲ್ಲೆಡೆಯೂ ಇರುವ ಎಲ್ಲರಿಗೂ ಯೇಸುವಿನ ಕಥೆಯನ್ನು ಹಂಚಿಕೊಳ್ಳುವದಕ್ಕೆ ದಾರಿಗಳನ್ನು ಹುಡುಕಬೇಕಾದ ಅಗತ್ಯವಿರುತ್ತದೆ.

ಪೌಲನು ಒಬ್ಬನ ಮನಸಾಕ್ಷಿಯು ಆತನನ್ನು "ವಾದಿ ಪ್ರತಿವಾದಿಯಂತೆ- ಇದು ತಪ್ಪೆಂದು ತಪ್ಪಲ್ಲವೆಂದು ಸೂಚಿಸುವ" ಬಗ್ಗೆ ಹೇಳುವಾಗ (ರೋಮಾ 2:15), ಆ ವ್ಯಕ್ತಿಗೆ ಬಹುಶಃ ಪೌಲನ ಮಾತುಗಳು ಅರ್ಥವಾಗಿರಬೇಕು. ನೀವು ನಿಮ್ಮ ಮನಸಾಕ್ಷಿಯು "ತಪ್ಪು ಮಾಡಿದಿ! ತಪ್ಪು ಮಾಡಿದಿ!" ಎಂದು ಕೂಗುವ ಸ್ವರವನ್ನು "ಆಲಿಸಿರುತ್ತೀರಿ" ಎಂಬದರಲ್ಲಿ ಸಂಶಯವಿಲ್ಲ. ಅದರಲ್ಲಿ ಯಾವದೇ ತಪ್ಪಿಲ್ಲ. ಅದು ನಿಮ್ಮ ಮನಸಾಕ್ಷಿಯು ಉತ್ತಮ ಕ್ರಿಯಾಶೀಲ ಸ್ಥಿತಿಯಲ್ಲಿದೆ ಎಂಬದನ್ನು ತೋರಿಸುತ್ತದೆ. ಹೇಗೂ, ಅಪರಾಧ ಭಾವನೆ ನಿಮ್ಮ ಆತ್ಮವನ್ನು ತುಂಬಿಕೊಳ್ಳುವಾಗ, ನೀವು ಏನು ಮಾಡತಕ್ಕದ್ದು?

ಅಪರಾಧಭಾವನೆಯ ಬಗ್ಗೆ ಬೈಬಲಿನ ಉತ್ತರವು ಏನೆಂದರೆ ಅದನ್ನು ಯೇಸುವಿನ ರಕ್ತದ ಮೂಲಕ ಶಾಶ್ವತವಾಗಿ ತೊಲಗಿಸಿಕೊಂಡು ಬಿಡು ಎಂದಾಗಿರುತ್ತದೆ. ಒಬ್ಬ ಪ್ರೇರಿತ ಬರಹಗಾರನು ಹೀಗೆ ಹೇಳುತ್ತಾನೆ, "ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು . . . ಬಿಡಿಸಿ ಜೀವಸ್ವರೂಪನಾದ ದೇವರನ್ನು ಆರಾಧಿಸುವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ" (ಇಬ್ರಿಯ 9:14). ನಾವು ಯೇಸುವಿಗೆ ನಮ್ಮನ್ನು ಒಪ್ಪಿಸಿ ಕೊಡುವಾಗ, ನಮ್ಮ ಮನಸಾಕ್ಷಿಗಳು ಯೇಸುವಿನ ರಕ್ತದಿಂದ ಶುದ್ಧೀಕರಿಸಲ್ಪಡುವವು, "ನಮ್ಮ ಮನಸ್ಸು ನಮಗೆ ಸಾಕ್ಷಿಹೇಳದಂತೆ ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿ ನೀರಿನಿಂದ ತೊಳೆದುಕೊಂಡವರಾಗುತ್ತೇವೆ" (ಇಬ್ರಿಯ 10:22). "ತಿಳಿ ನೀರಿನಿಂದ ದೇಹವನ್ನು ತೊಳೆದುಕೊಳ್ಳುವದು" ದೀಕ್ಷಾಸ್ನಾನವನ್ನು ಸೂಚಿಸುತ್ತದೆಂದು ಅನೇಕ ಪಂಡಿತರು ಒಪ್ಪಿಕೊಳ್ಳುತ್ತಾರೆ. ಪೇತ್ರನು ದೀಕ್ಷಾಸ್ನಾನದ ಬಗ್ಗೆ ಮಾತಾಡುವ ವೇಳೆ ಮನಸಾಕ್ಷಿಯ ಶುದ್ಧೀಕರಣ ಮತ್ತು ವಿಶ್ವಾಸದಿಂದ ವಿಧೇಯವಾಗುವದನ್ನು ಒಂದಾಗಿ ಜೋಡಿಸುತ್ತಾನೆ, "ಒಳ್ಳೇ ಮನಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ"

(1 ಪೇತ್ರ 3:21).

ಒಂದು ಶುದ್ಧೀಕರಿಸಲ್ಪಟ್ಟ ಮನಸಾಕ್ಷಿಯ ಆಶೀರ್ವಾದದ ಬಗ್ಗೆ ನಿಮಗೆ ಗ್ರಹಿಕೆಯಾಗುವದಾದರೆ, ಯೇಸುವಿನ ಯಜ್ಞದಲ್ಲಿ ನಿಮ್ಮ ವಿಶ್ವಾಸವನ್ನು ಇಟ್ಟು ಆತನಿಗೆ ನಿಮ್ಮ ಜೀವಿತವನ್ನು ಸಮರ್ಪಿಸಿಕೊಳ್ಳಿರಿ -ಈ ದಿನವೇ!

## ರಹಸ್ಯ ಪಾಪಗಳು ಹಾಗೂ ನ್ಯಾಯತೀರ್ಪಿನ ಅನಿರೀಕ್ಷಿತ ಅಚ್ಚರಿಗಳು (2:16)

ಪ್ರತಿಯೊಬ್ಬರ ಜೀವನಗಳಲ್ಲಿಯೂ ಬೇರೆ ಯಾರಿಗೂ ಗೊತ್ತಿಲ್ಲವೆಂದು ನೆನಸುವ ಸಂಗತಿಗಳು ಇರುತ್ತವೆ. ಉದಾಹರಣೆಗೆ, ಒಬ್ಬನು ವೇಗದ ಮೀತಿಯನ್ನು ಮೀರಿ ವಾಹನ ಚಲಾಯಿಸುತ್ತಾನೆ ಅಥವಾ ಕೆಂಪು ದ್ವೀಪವಿದ್ದರೂ ಮುನ್ನುಗ್ಗುತ್ತಾನೆ. ಆತನು ತಕ್ಷಣವೇ ಆ ಕಡೆ ಮತ್ತು ಈ ಕಡೆ ನೋಡುತ್ತಾನೆ- ಆದರೆ ಕಣ್ಣಿಗೆ ಯಾವ ಪೋಲಿಸನೂ ಕಾಣಿಸುವದಿಲ್ಲ. ಆಗ ಅವನು ದೊಡ್ಡ ಉಸಿರು ಬಿಟ್ಟು, "ಅಬ್ಬಾ, ಯಾರೂ ನೋಡಲಿಲ್ಲ!" ಎಂದುಕೊಳ್ಳುತ್ತಾನೆ. ತಿದ್ದುಪಡಿ: ಆತನನ್ನು ಯಾವ *ಮನುಷ್ಯನೂ* ಗಮನಸಲಿಲ್ಲ, ಆದರೆ ದೇವರು ನೋಡಿದನು. ಕರ್ತನು ಸರ್ವವನ್ನೂ ಬಲ್ಲನು ಹಾಗೂ ಸರ್ವನ್ನೂ ನೋಡುತ್ತಾನೆ (ನೋಡಿರಿ 1 ಸಮುವೇಲ 16:7; ಕೀರ್ತನೆ 139:1-4; ಯೆರೆಮೀಯ 17:10; ಲೂಕ 16:15; ಯೋಹಾನ 2:25; ಇಬ್ರಿಯ 4:12, 13)—ಕಡೇ ದಿನದಲ್ಲಿ ಎಲ್ಲವೂ ಬಯಲಿಗೆ ಬರುವದು! ಅದು ನಿಮ್ಮ ನೆರೆಯವರಿಗೆ, ನಿಮ್ಮ ಮಿತ್ರರಿಗೆ, ನಿಮ್ಮ ಕುಟುಂಬದವರಿಗೆ ತಿಳಿದುಬರುವದು. ಯೇಸುವಿನ ರಕ್ತದಿಂದ ಮುಚ್ಚಲ್ಪಡದಿರುವ ಪ್ರತಿಯೊಂದು ಪಾಪವೂ (ಮತ್ತಾಯ 26:28; 1 ಯೋಹಾನ 1:7) ಬಹಿರಂಗಗೊಳಿಸಲ್ಪಡುವದು! ಅದು ಎಷ್ಟು ಮುಜುಗರ ತರುವಂತದ್ದು! ಎಷ್ಟು ವಿನಾಶಕಾರಿ!

ರೋಮಾ 2:16 ರಲ್ಲಿ ಹಲವಾರು ಅನಿರೀಕ್ಷಿತ ಅಚ್ಚರಿಗಳಿರುತ್ತವೆ, ಉದಾಹರಣೆಗೆ ನ್ಯಾಯತೀರ್ಪಿನ ಕಥೆಯು ಸುವಾರ್ತೆ ಯಲ್ಲಿನ ಅವಿಭಾಜ್ಯ ಅಂಗವಾಗಿದೆ ಎಂಬುದು: ನಾನು ಸಾರುವ ಸುವಾರ್ತೆಯಲ್ಲಿ *ಬೋಧಿಸಿರುವ ಪ್ರಕಾರ*[88] ದೇವರು . . . ಮನುಷ್ಯರನ್ನು ವಿಚಾರಿಸುವನು . . ." "ಶುಭವಾರ್ತೆಯ" ಮಹಿಮೆಯನ್ನು ಸಂಪೂರ್ಣವಾಗಿ ಶ್ಲಾಘಿಸಬೇಕೆಂದರೆ, ನಾವು ನ್ಯಾಯತೀರ್ಪಿನ ಕರಾಳತೆಯ ಹಿನ್ನಲೆಗೆ ಹೋಲಿಸಿ ನೋಡುವ ಅಗತ್ಯತೆಯಿರುತ್ತದೆ.

ಅನೇಕರಿಗೆ ಉಂಟಾಗಲಿರುವ ಅತ್ಯಂಥ ದೊಡ್ಡ ಅಚ್ಚರಿಯೆಂದರೆ ಒಂದು ನ್ಯಾಯತೀರ್ಪಿನ ದಿನವಿರುತ್ತದೆಂಬದು: "ದೇವರು ಮನುಷ್ಯರ ಗುಟ್ಟುಗಳನ್ನು ಹಿಡಿದು ವಿಚಾರಿಸುವನು." ಕೆಲವರು ನ್ಯಾಯತೀರ್ಪಿನ ಸಾಧ್ಯತೆಯ ಬಗ್ಗೆ ಯೋಚಿಸುವದಕ್ಕೆ ಬಯಸುವದಿಲ್ಲ. ಇನ್ನು ಕೆಲವರಲ್ಲಿ ಒಂದು ಅನಿಶ್ಚಿತ ನಿರೀಕ್ಷೆಯಿದೆ ಏನೆಂದರೆ ಮರಣಾನಂತರ ಜೀವನ ಹೇಗೇ ಇದ್ದರೂ, "ಎಲ್ಲವೂ ಸರಿಯಾಗಿಯೇ ನಡೆಯುವದು" ಎಂಬದಾಗಿ. ಕೆಲವರಂತೂ ನ್ಯಾಯತೀರ್ಪಿನ ದಿನವೇ ಇರಲಾರದು, "ಯಾಕೆಂದರೆ ಪ್ರೀತಿ ಸ್ವರೂಪಿ ದೇವರು ಯಾರನ್ನೂ ನರಕಕ್ಕೆ ಕಳುಹಿಸಲು ಸಾಧ್ಯವೇ ಇಲ್ಲ" ಎಂಬ ದೃಢನಂಬಿಕೆಯಲ್ಲಿದ್ದಾರೆ. ಪ್ರೆಂಚ್ ಸಂದೇಹವಾದಿ Voltaire[89] ಒಮ್ಮೆ ತಾನು ಏಕೆ ಒಂದು ದಿನ ದೇವರ ಮುಂದೆ ನಿಲ್ಲುವ ವಿಷಯದಲ್ಲಿ ಚಿಂತೆಯಿಲ್ಲದೆ ಇದ್ದಾನೆಂದು ಕೇಳಲಾಯಿತು. ಆತನು ಹೇಳಿದ್ದೇನೆಂದರೆ, "ದೇವರು ಕ್ಷಮಿಸುವನು." ಆತನು ಹೇಗೆ ಅಷ್ಟೊಂದು ನಿಶ್ಚಯತೆಯಿಂದ ಹೇಳಲು ಸಾಧ್ಯವೆಂದು ಪ್ರಶ್ನಿಸಿದಾಗ, ಆತನು ಹೀಗೆ ಉತ್ತರಿಸಿದನು,

"ಯಾಕೆಂದರೆ ಕ್ಷಮಿಸುವದೇ ಆತನ ಕೆಲಸ."[90] ಅನೇಕರು ಕರ್ತನ ಮುಂದೆ ನಿಲ್ಲುವಾಗ, ಆತನು "ಕೆಲವರನ್ನು" ಪರಲೋಕಕ್ಕೂ "ಅನೇಕರನ್ನು" ನರಕಕ್ಕೂ ಕಳುಹಿಸುವಾಗ ಅದು ಅವರಿಗೆ ಎಂಥಾ ಅಚ್ಚರಿಯನ್ನುಂಟು ಮಾಡಬಹುದು! (ನೋಡಿರಿ ಮತ್ತಾಯ 7:13, 14; 25:31–34, 41, 46.)

ನಾನು ನಿಮಗೆ ಕೇಳುತ್ತೇನೆ, "ನೀವು ಆ ದಿನಕ್ಕಾಗಿ *ಸಿದ್ಧರಿದ್ದೀರೋ?*" ನೀವು ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸುವದಾದರೆ, ನಿಮ್ಮ ಜೀವನ ಇರಬೇಕಾಗಿದ್ದ ರೀತಿಯಲ್ಲಿ ಇಲ್ಲವೆಂಬದನ್ನು, ನಿಮಗೆ ದೇವರ ಕೃಪೆ ಹಾಗೂ ಕರುಣೆಯ ತೀವ್ರವಾದ ಅಗತ್ಯತೆಯಿದೆ ಎಂಬದನ್ನು ನೀವು ಗ್ರಹಿಸಿಕೊಳ್ಳಬಹುದು. ನಿಮಗೆ ಆ ಮನವರಿಕೆ ಬರುವದಾದರೆ, ಇನ್ನೊಂದು ದಿನಕ್ಕಾಗಿ ಕಾಯದೆ ತಕ್ಷಣವೇ ಕರ್ತನ ಪ್ರೀತಿಯ ಬಾಹುಗಳಿಗೆ ಓಡಿ ಹೋಗಿರಿ.

ಒಮ್ಮೆ, ಅಲೆಗ್ಸಾಂಡರ್ ಚಕ್ರವರ್ತಿಯು ಪಟ್ಟಣವೊಂದಕ್ಕೆ ಮುತ್ತಿಗೆ ಹಾಕಿರುವಾಗ, ಆತನು ಒಂದು ದೊಡ್ಡ ದೀವಿಟಿಗೆಯನ್ನು ಹೊತ್ತಿಸಿ ಇಡುತ್ತಿದ್ದನು. ಆತನು ಅದನ್ನು ಹಗಲು ರಾತ್ರಿಗಳ ವರೆಗೆ ಉರಿಸುತ್ತಾ ಮುತ್ತಿಗೆ ಹಾಕಿರುವದಕ್ಕೆ ಸಂಕೇತವಾಗಿ ಇಡುತ್ತಿದ್ದನು. ಈ ದೀಪವು ಎಲ್ಲಿಯ ವರೆಗೆ ಉರಿಯುತ್ತದೋ ಅಲ್ಲಿಯ ವರೆಗೆ ಅವರು ಬಂದು ಶರಣಾಗಿ ತಮ್ಮನ್ನು ರಕ್ಷಿಸಿಕೊಳ್ಳಲು ಸಮಯಾವಕಾಶವಿರುತ್ತದೆಂದು ಪಟ್ಟಣದ ಜನರಿಗೆ ಸುದ್ದಿಯನ್ನು ಹೇಳಿ ಕಳುಹಿಸುತ್ತಿದ್ದನು. ಹೇಗೂ, ಒಮ್ಮೆ ದೀಪವು ಆರಿ ಹೋಯಿತೆಂದರೆ, ಪಟ್ಟಣ ಹಾಗೂ ಅದರಲ್ಲಿರುವ ಎಲ್ಲರನ್ನೂ ನಿರ್ದಾಕ್ಷಣ್ಯವಾಗಿ ನಾಶಮಾಡಲಾಗುತ್ತಿತ್ತು.[91] ಇಂದು, ದೇವರ ಸಹನೆ ಹಾಗೂ ತಾಳ್ಮೆಯ "ದೀಪವು" "ಪ್ರಕಾಶಿಸುತ್ತಿದೆ," ಆತನ ಬಳಿಗೆ ಬರುವದಕ್ಕೆ ನಿಮಗೆ ಸಮಯಾವಕಾಶವನ್ನು ಕೊಡುತ್ತಿದೆ. ಒಂದು ದಿನ, ಬಹುಶಃ, ಶೀಘ್ರದಲ್ಲಿಯೇ, ಆ ಬೆಳಕು ಆರಿಸಲ್ಪಡುವದು, ಮತ್ತು ಆಗ ಬಹಳ ತಡವಾಗಿ ಹೋಗಿರಬಹುದು. ದೇವರ ಒಳ್ಳೇತನವು ನಿಮ್ಮನ್ನು ಪಶ್ಚಾತ್ತಾಪಕ್ಕೆ ನಡಿಸಲಿ!

## ನಿಜವಾದ ಯೆಹೂದ್ಯನು (2:17-29)

ನಾನು "ನಿಜವಾದ ಯೆಹೂದ್ಯನು" ಎಂಬ ಪದಗುಚ್ಛವನ್ನು ಕುರಿತು ಯೋಚಿಸುವಾಗ, ನನ್ನ ಮನಸ್ಸು 50 ಮತ್ತು 60ರ ದಶಕದಲ್ಲಿರುತ್ತಿದ್ದ "To Tell the Truth" (ಸತ್ಯವನ್ನು ಹೇಳುವದಾದರೆ) ಎಂಬ ಅಮೇರಿಕದ ಟಿವಿ ಕಾರ್ಯಕ್ರಮವನ್ನು ನೆನಪಿಸಿಕೊಳ್ಳುತ್ತದೆ. ಮೂವರು ಸ್ಪರ್ಧಿಗಳು ತೀರ್ಪುಗಾರರ ಮುಂದೆ ನಿಂತಿರುತ್ತಿದ್ದರು. ಮೊದಲನೆಯವನು, "ನನ್ನ ಹೆಸರು [ನಾವು ಆತನನ್ನು Joe Smith ಎಂದು ಕರೆಯೋಣ], ಮತ್ತು ನಾನು [ಸಹಜವಾದ ಅಥವಾ ವಿಭಿನ್ನವಾದದ್ದೊಂದನ್ನು ಮಾಡಿದ್ದೇನೆ]" ಎಂದು ಹೇಳುತ್ತಿದ್ದನು. ಎರಡನೆಯ ಮತ್ತು ಮೂರನೆಯ ಸ್ಪರ್ಧಿಗಳು ಸಹ ತಾವೂ Joe Smith ಹಾಗೆಯೇ ಎಂದು ಹೇಳಿ ಕೊಳ್ಳುತ್ತಿದ್ದರು. ಅವರು ಕುಳಿತುಕೊಂಡ ಬಳಿಕ, ತೀರ್ಪುಗಾರರು ಅವರಿಗೆ ಪ್ರಶ್ನೆಗಳನ್ನು ಕೇಳುವರು ಮತ್ತು ಅವರಲ್ಲಿ ಯಾರು ಸತ್ಯವನ್ನು ನುಡಿಯುತ್ತಿದ್ದಾರೆ ಹಾಗೂ ಯಾರು ಸತ್ಯ ಹೇಳುತ್ತಿಲ್ಲವೆಂದು ಊಹಿಸಿಕೊಳ್ಳುತ್ತಿದ್ದರು. ಅಂತ್ಯದಲ್ಲಿ, ಕಾರ್ಯಕ್ರಮದ ಮುಖ್ಯಸ್ಥನು, "ನಿಜವಾದ Joe Smith ದಯವಿಟ್ಟು ಎದ್ದು ನಿಲ್ಲುವಿಯಾ?" ಎಂದು ಹೇಳುವಾಗ, Joe Smith ಎದ್ದು ನಿಲ್ಲುತ್ತಿದ್ದನು.

ಗತಕಾಲದಲ್ಲಿದ್ದ ಮೂವರು ವ್ಯಕ್ತಿಗಳನ್ನು ಕಲ್ಪಿಸಿಕೊಳ್ಳಿರಿ. ಎಲ್ಲರೂ ಪೌಲನ ದಿನಗಳಲ್ಲಿದ್ದ ಯೆಹೂದ್ಯರಿಗೆ ವಿಶಿಷ್ಟವಾದ ಉಡುಪುಗಳನ್ನು ಧರಿಸಿದ್ದಾರೆ, ಮತ್ತು ಮುಖಚಹರೆಗಳನ್ನು ಹೊಂದಿದ್ದಾರೆ. ಮೊದಲನೆಯವನು "ನಾನೇ ನಿಜವಾದ ಯೆಹೂದ್ಯನು. ನನ್ನ ಬಳಿಯಲ್ಲಿ ಮೋಶೆಯ ಧರ್ಮಶಾಸ್ತ್ರವಿದೆ" ಎನ್ನುತ್ತಾನೆ. ಎರಡನೆಯ ವನು ಹೇಳುತ್ತಾನೆ, "ನಾನೊಬ್ಬ ನಿಜವಾದ ಯೆಹೂದ್ಯನು. ನನ್ನ ಬಳಿಯಲ್ಲಿ ಮೋಶೆಯ ಧರ್ಮಶಾಸ್ತ್ರವಿದೆ, ಮತ್ತು ನಾನು ಸುನ್ನತಿ ಮಾಡಿಸಿಕೊಂಡಿದ್ದೇನೆ." ಮೂರನೆಯವನು ಹೇಳುತ್ತಾನೆ, "ನಾನು ನಿಜವಾದ ಯೆಹೂದ್ಯನು. ನನ್ನ ಬಳಿಯಲ್ಲಿ ಮೋಶೆಯ ಧರ್ಮಶಾಸ್ತ್ರವಿದೆ. ನಾನು ಸುನ್ನತಿ ಮಾಡಿಸಿಕೊಂಡಿದ್ದೇನೆ, *ಮತ್ತು* ನಾನು ಹೃದಯದಲ್ಲಿ ದೇವರಿಗೆ ಸಮರ್ಪಿತನಾಗಿದ್ದೇನೆ" ಅನ್ನುತ್ತಾನೆ.

ನಮ್ಮ ಕಾಲ್ಪನಿಕ game showನಲ್ಲಿ, ನಾವು "ನಿಜವಾದ ಯೆಹೂದ್ಯನು ಯಾರೋ ದಯವಿಟ್ಟು ಎದ್ದು ನಿಲ್ಲುವಿರಾ?" ಎಂದು ಕೇಳಿದರೆ, ಮೊದಲ ಸ್ಪರ್ಧಿಯು ಕುಳಿತೇ ಇರುವನು. ಆತನಿಗೆ ಧರ್ಮಶಾಸ್ತ್ರವನ್ನು *ಮಾತ್ರ ಹೊಂದಿದ್ದು* ಅದು ಆತನನ್ನು "ನಿಜವಾದ ಯೆಹೂದ್ಯ" ನಾಗಿಸುವದಕ್ಕೆ ಸಾಕಾಗದ್ದಾಗಿರುತ್ತದೆ.

ಸ್ಪರ್ಧೆಯ ಮುಖ್ಯಸ್ಥನು, "ನಿಜವಾದ ಯೆಹೂದ್ಯನು ದಯವಿಟ್ಟು ಎದ್ದು ನಿಲ್ಲುವಿಯಾ?" ಎನ್ನುವಾಗ ಎರಡನೆಯ ಸ್ಪರ್ಧಿಯು ("ನನ್ನ ಬಳಿಯಲ್ಲಿ ಧರ್ಮಶಾಸ್ತ್ರವಿದೆ ಮತ್ತು ನಾನು ಸುನ್ನತಿ ಮಾಡಿಸಿಕೊಂಡಿದ್ದೇನೆ" ಎಂದು ಹೇಳಿದಾತನು) ಸಹ ಏಳದೆ ಕುಳಿತೇ ಇರುವನು. ಧರ್ಮಶಾಸ್ತ್ರ ಹೊಂದಿದ್ದು ಸುನ್ನತಿ ಮಾಡಿಸಿಕೊಂಡಿದ್ದ ಮಾತ್ರವೇ ಆತನನ್ನು ನಿಜ ಯೆಹೂದ್ಯನನ್ನಾಗಿಸಲಿಲ್ಲ.

ಪುನಃ ಆ ಪ್ರಶ್ನೆಯು ಕೇಳಲ್ಪಟ್ಟಾಗ, "ನನ್ನ ಬಳಿಯಲ್ಲಿ ಮೋಶೆಯ ಧರ್ಮಶಾಸ್ತ್ರವಿದೆ, ಸುನ್ನತಿ ಮಾಡಿಸಿಕೊಂಡಿದ್ದೇನೆ, *ಮತ್ತು* ನಾನು ಹೃದಯದಲ್ಲಿ ದೇವರಿಗೆ ಸಮರ್ಪಿತನಾಗಿದ್ದೇನೆ" ಎಂದು ಹೇಳಿದಾತನು ಮುಗುಳ್ನಗುತ್ತಾ ಎದ್ದು ನಿಲ್ಲುತ್ತಾನೆ. ಪೌಲನ ಪ್ರಕಾರವಾಗಿ, *ಈ* ರೀತಿಯ ಯೆಹೂದ್ಯನೇ *ನಿಜವಾದ* ಯೆಹೂದ್ಯನಾಗಿದ್ದನು.

ಈ ದೃಷ್ಟಾಂತವನ್ನು ನಮಗೆ ಅನ್ವಯಿಸಿಕೊಳ್ಳುವದಾದರೆ, ಈ ಪ್ರಶ್ನೆಯು ಉದ್ಭವವಾಯಿತೆಂದು ಊಹಿಸಿಕೊಳ್ಳಿರಿ: "ನಿಜವಾದ *ಕ್ರೈಸ್ತನು* ಯಾರೋ ದಯವಿಟ್ಟು ಎದ್ದು ನಿಲ್ಲುವಿಯಾ?" ಒಂದು ವೇಳೆ ನೀವು ನಿಮ್ಮ ಬಗ್ಗೆ ಪರಿಚಯವಿರುವ -ನಿಮ್ಮ ಪೂರ್ಣ ಚರಿತ್ರೆಯೇ ಗೊತ್ತಿರುವ ತೀರ್ಪುಗಾರರ ಮುಂದೆ ಕುಳಿತಿರುವದಾದರೆ-ಮತ್ತು ಈ ಪ್ರಶ್ನೆಯು ಕೇಳಲ್ಪಟ್ಟರೆ, ನೀವು ಎದ್ದು ನಿಲ್ಲುವಿರಾ? ನೀವು ಎದ್ದು ನಿಲ್ಲುವ ಧೈರ್ಯ ಮಾಡುವಿರೋ?

## ಮತ್ತೊಬ್ಬರನ್ನು ನೋಡುವದು (2:17-24)

ಕೆಲವರು ಈ ವಾಕ್ಯಭಾಗವನ್ನು ಅಪಾರ್ಥಮಾಡಿಕೊಂಡು "ತಾವು ಸರಿ ಮತ್ತು ಇತರರು ತಪ್ಪು" ಎಂದು ಭಾವಿಸುವವರನ್ನು ಖಂಡಿಸುವದಕ್ಕೆ ಉಪಯೋಗಿಸುತ್ತಾರೆ. ಯೆಹೂದ್ಯರ ಸಮಸ್ಯೆಯ ತಿರುಳು ಇದಾಗಿರಲಿಲ್ಲ. ಹಳೆ ಒಡಂಬಡಿ ಕೆಯ ಕಾಲದಲ್ಲಿ, ಅವರಿಗೆ "ಸರಿಯಾದ ಧರ್ಮ" -ದೇವರು ಅನುಗ್ರಹಿಸಿದ ಧರ್ಮ-*ಇದ್ದದ್ದು* ನಿಜ, ಮತ್ತು ಜಗತ್ತಿನ ಬಹುಪಾಲು ಜನರು "ತಪ್ಪು" *ಆಗಿದ್ದರು.* ಯೆಹೂದ್ಯರಿಗೆ ವಿಶೇಷ ಆಶೀರ್ವಾದಗಳ ಶ್ಲಾಘ್ಯವು ಕೊಡಲ್ಪಟ್ಟಿದೆ ಅಥವಾ ಪ್ರಭಾವಶಾಲಿ ಜವಾಬ್ದಾರಿಗಳು ಕೊಡಲ್ಪಟ್ಟಿದ್ದವು

ಎಂಬದು ಅವರ ಸಮಸ್ಯೆಯಾಗಿರಲಿಲ್ಲ. ಅವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಜೀವಿಸಲು ವಿಫಲರಾಗಿದ್ದರು; ಅವರು ವಿಶ್ವಾಸದ್ರೋಹ ಮಾಡಿದ್ದರು ಎಂಬದೇ ಅವರ ಸಮಸ್ಯೆಯಾಗಿತ್ತು. "ಸರಿಯಾದ ಧರ್ಮ" ಹೊಂದಿದ್ದರೆ ಮಾತ್ರ ಸಾಕು ಎಂದು ಅವರು ಭಾವಿಸಿದ್ದರು. ಕೇವಲ ಸತ್ಯವನ್ನು ಹೊಂದಿದ್ದರೆ ಸಾಕಾಗುವದಿಲ್ಲ; ಒಬ್ಬನು ಅದಕ್ಕೆ ಯಥಾರ್ಥವಾಗಿ ವಿಧೇಯನಾಗಬೇಕು ಮತ್ತು ತನಗೆ ಸಾಧ್ಯವಾದಷ್ಟು ಅದರಲ್ಲಿ ಸ್ಥಿರತೆಯಿಂದಿರಬೇಕು.

## ದೇವರ ನಾಮಕ್ಕೆ ದೂಷಣೆಯುಂಟು ಮಾಡುವದು (2:17-24)

ಯೆಹೂದ್ಯರಂತೆಯೇ, ನಮಗೆ ಒಂದು ಪವಿತ್ರ ಬಿರುದು ("ಕ್ರೈಸ್ತರು") ಇರುತ್ತದೆ, ಒಂದು ಪವಿತ್ರ ದಸ್ತಾವೇಜು (ಹೊಸ ಒಡಂಬಡಿಕೆ), ಒಂದು ಪವಿತ್ರ ದೈವ (ನಮ್ಮ ಅಮೂಲ್ಯ ಕರ್ತನು) ಇದ್ದಾನೆ ಮತ್ತು ಪವಿತ್ರ ಕರ್ತವ್ಯಗಳು (ಯೇಸು ಹಾಗೂ ಅಪೊಸ್ತಲರು ಸಂಕ್ಷಿಪ್ತ ವಿವರಣೆ ನೀಡಿದ ಪ್ರಕಾರ) ಇರುತ್ತವೆ. ನಾವು ಇದರಲ್ಲಿ ಹೆಚ್ಚಳ ಪಟ್ಟುಕೊಳ್ಳುತ್ತೇವೆ; ಆದರೆ ನಾವು ಕ್ರೈಸ್ತರಂತೆ ನಡೆದುಕೊಳ್ಳಲು ವಿಫಲರಾಗುವಾಗ, ಹೊಸ ಒಡಂಬಡಿಕೆಗೆ ವಿಧೇಯರಾಗಲು ವಿಫಲರಾಗುವಾಗ, ಮತ್ತು ನಮ್ಮ ಜೀವಿತಗಳಲ್ಲಿ ಕರ್ತನನ್ನು ಮಹಿಮೆಗೊಳಿಸಲು ವಿಫಲರಾಗುವಾಗ, ಆಗಲೂ ದೇವರ ನಾಮವು ವಿಶ್ವಾಸಿಗಳೇತರ ಮಧ್ಯದಲ್ಲಿ ದೂಷಣೆಗೆ ಗುರಿಯಾಗುತ್ತದೆ!

## ಆಗಾಧವಾಗಿ ಧಾರ್ಮಿಕರಾಗಿರುವದು (2:17-24)

ತಾವು ಒಳ್ಳೇವರಾಗಿ, ನೈತಿಕ ಜೀವನ ಜೀವಿಸುವದರ ಆಧಾರದಲ್ಲಿ ರಕ್ಷಿಸಲ್ಪಡುವರೆಂದು ಅನೇಕರು ಭಾವಿಸಿಕೊಳ್ಳುತ್ತಾರೆ. ಅಲ್ಲದೆ ತಾವು ಆಗಾಧವಾಗಿ ಧಾರ್ಮಿಕರಾಗಿರುವದರಿಂದ ರಕ್ಷಿಸಲ್ಪಡುವವೆಂದು ಯೋಚಿಸುವವರು ಸಹ ಅನೇಕರಿದ್ದಾರೆ. ಅವರು ಧಾರ್ಮಿಕ ಆಚಾರ ಹಾಗೂ ಸಂಸ್ಕಾರಗಳನ್ನು ಪಾಲಿಸುವರು; ಧಾರ್ಮಿಕ ಕ್ರಿಯೆಗಳನ್ನು ಮಾಡುವರು, ಮತ್ತು ಅವರು ಆರಾಧನೆ ಮಾಡುವರು. ಇದೆಲ್ಲಾ, ಹಾಗೂ ಇದಿಷ್ಟೇ, ಯಾರನ್ನೂ ರಕ್ಷಿಸುವದಿಲ್ಲ. ಯೇಸು ನ್ಯಾಯತೀರ್ಪಿನ ದಿನದಂದು ಇರುವಂಥ ಕೆಲವೊಂದು ಧಾರ್ಮಿಕ ಜನರ ಚಿತ್ರಣವನ್ನು ನೀಡುತ್ತಾನೆ:

> "ನನ್ನನ್ನು ಸ್ವಾಮೀ, ಸ್ವಾಮೀ, ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿ ಬಿಡುವೆನು" (ಮತ್ತಾಯ 7:21-23).

ದಯವಿಟ್ಟು ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ನಾವು ಧಾರ್ಮಿಕರಾಗಿರುವ ಅಗತ್ಯವಿದೆ. ಕೆಲವರು "ಧಾರ್ಮಿಕ" (ಭಕ್ತಿ) ಎಂಬದನ್ನು ಒಂದು ದುರುದ್ದೇಶದ ಪರಿಣಾಮವುಳ್ಳದ್ದೆಂದು ತಿರಸ್ಕರಿಸುತ್ತಾರೆ, ಆದರೆ ಬೈಬಲಿನ ಲೇಖಕರು ಆ ಪದವನ್ನು

ಉಪಯೋಗಿಸುವದಕ್ಕೆ ಹಿಂಜರಿಯಲಿಲ್ಲ. ಉದಾಹರಣೆಗೆ, ಯಾಕೋಬನು ಹೀಗೆ ಬರೆದನು, "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ *ಭಕ್ತಿ* (*ಧಾರ್ಮಿಕತೆ*)" (ಯಾಕೋಬ 1:27; ಒತ್ತಿ ಹೇಳಿದ್ದು ನನ್ನದು). "ಧಾರ್ಮಿಕತೆ" ಎಂಬ ಅನುವಾದಿಸಲ್ಪಟ್ಟ ಗ್ರೀಕ್ ಪದವು (θρησκεία, *thrēskeia*) ಧಾರ್ಮಿಕತೆಯ "ಬಹಿರಂಗದ ಅಂಶ" ವನ್ನು ಸೂಚಿಸು ತ್ತದೆ[92]-ಬೇರೆ ಮಾತುಗಳಲ್ಲಿ ಹೇಳುವದಾದರೆ, ದೇವರೊಂದಿಗಿರುವ ನಮ್ಮ ಅಂತರಂಗದ ಸಂಬಂಧವನ್ನು ನಾವು ಹೇಗೆ *ಬಹಿರಂಗದಲ್ಲಿ ವ್ಯಕ್ತಪಡಿಸುತ್ತೇವೆ* ಎಂಬದು. ನೀವು ನಿಮ್ಮ ಸಂಗಾತಿಯನ್ನು ಪ್ರೀತಿಸುತ್ತೇನೆಂದು ಹೇಳಿಕೊಂಡು ಆ ಪ್ರೀತಿಯನ್ನು ಎಂದಿಗೂ *ವ್ಯಕ್ತಪಡಿಸಲಿಲ್ಲ* ಎಂದರೆ, ನಿಮ್ಮ ಪ್ರೀತಿಯು ಎಷ್ಟು ನಿಜ ಎಂಬ ಬಗ್ಗೆ ಸಂಗಾತಿಯು ಪ್ರಶ್ನೆ ಮಾಡುವನು/ಳು. ನಾವು ನಿಜವಾಗಿಯೂ ಕರ್ತನನ್ನು ಪ್ರೀತಿಸುವದಾದರೆ, ಆತನ ಚಿತ್ತವನ್ನು ಮಾಡುವದಕ್ಕೆ ಹಾಗೂ ಆತನನ್ನು ಮೆಚ್ಚಿಸುವದಕ್ಕೆ ಶ್ರಮಿಸುವ ಮೂಲಕ ನಮ್ಮ ಪ್ರೀತಿಯನ್ನು ವ್ಯಕ್ತಗೊಳಿಸುವೆವು (ಯೋಹಾನ 14:15, 21; 1 ಯೋಹಾನ 5:3; 2 ಯೋಹಾನ 6). ಅಂದರೆ, ನಾವು "ಧಾರ್ಮಿಕತೆ (ಭಕ್ತಿ)" ಯುಳ್ಳವರಾಗಿರುವೆವು.

ಹೇಗೂ, ಕೇವಲ ಧಾರ್ಮಿಕರಾಗಿದ್ದರೆ ಮಾತ್ರವೇ ಸಾಲದು. ಧಾರ್ಮಿಕತೆಗಳಲ್ಲಿ ನಿಜವಾದ ಧಾರ್ಮಿಕತೆ (ಭಕ್ತಿ) ಇದೆ (ಯಾಕೋಬ 1:27), ಮತ್ತು ಒಂದು ಮಿಥ್ಯ ಭಕ್ತಿ ಇದೆ (ನೋಡಿರಿ ಕೊಲೊಸ್ಸೆ 2:23). ದೇವರಿಗಾಗಿ ನಾವು ಬಹಿರಂಗದಲ್ಲಿ ವ್ಯಕ್ತಪಡಿಸುವ ಪ್ರೀತಿಯು ಆತನು ನಮ್ಮಿಂದ ಇಚ್ಛಿಸುವಂಥ, ಹೊಸ ಒಡಂಬಡಿಕೆಯಲ್ಲಿ ವಿಧಿಸಲ್ಪಟ್ಟಿರುವಂಥ ಕ್ರಿಯೆಗಳೇ ಆಗಿರಬೇಕು.

ರೋಮಾ 2:17-24 ರಲ್ಲಿ, ಪೌಲನು ಸರಿಯಾದ ಬಿರುದು, ಸರಿಯಾದ ದಸ್ತಾವೇಜು, ಸರಿಯಾದ ದೇವರ ಆರಾಧನೆ, ಮತ್ತು ಸರಿಯಾದ ಕರ್ತವ್ಯಗಳನ್ನು ನೆರವೇರಿಸುವದರಲ್ಲಿ ಏನಾದರೂ ತಪ್ಪಿದೆಯೆಂಬದಾಗಿ ಹೇಳುತ್ತಿಲ್ಲ. ಖಂಡಿತವಾಗಿಯೂ, ಆತನು ಕಳ್ಳತನ, ವ್ಯಭಿಚಾರ ಹಾಗೂ ವಿಗ್ರಹಾರಾಧನೆಗಳ ವಿರುದ್ಧವಾಗಿ ಬೋಧಿಸಬಾರದೆಂದು ಎಂದಿಗೂ ಹೇಳಲಿಲ್ಲ. ಹೇಗೂ, ಆತನು ಇಲ್ಲಿ ಒತ್ತಿ ಹೇಳುತ್ತಿರುವದೇನೆಂದರೆ, ಧಾರ್ಮಿಕತೆ (ಭಕ್ತಿ) ಮಾತ್ರವೇ-ಸರಿಯಾದ ಭಕ್ತಿಯೂ- ರಕ್ಷಿಸಲಾರದು ಎಂಬದೆ. ಧಾರ್ಮಿಕತೆ (ಭಕ್ತಿ) ಮಾತ್ರವೇ ನಮ್ಮನ್ನು ರಕ್ಷಿಸಲು ಸಾಧ್ಯವಿದ್ದಿದ್ದರೆ, ದೇವರು ಕೇವಲ ಒಬ್ಬ ಧರ್ಮಬೋಧಕನನ್ನು ಕಳುಹಿಸಿರುತ್ತಿದ್ದನು. ಬದಲಿಗೆ, ಆತನು ಒಬ್ಬ ರಕ್ಷಕನನ್ನು-ತನ್ನ ಮಗನನ್ನು-ಶಿಲುಬೆಯ ಮೇಲೆ ನಮಗೋಸ್ಕರ ಮರಣಿಸುವದಕ್ಕೆ ಕಳುಹಿಸಬೇಕಾಯಿತು!

ಪೌಲನು ಅನ್ಯಜನರನ್ನು ಖಂಡಿಸುವದನ್ನು ನಿಲ್ಲಿಸಿ ಯೆಹೂದ್ಯರನ್ನು ದೋಷಿಗಳೆಂದು ನಿರೂಪಿಸುವದಕ್ಕೆ ತಿರಿಗಿಕೊಂಡಾಗ, ಯೆಹೂದ್ಯರಿಗೆ ಅಚ್ಚರಿಯಾಗಿರಬೇಕು. ಇಂದು, ನಾವು ನಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡುವ ಅಗತ್ಯವಿದೆ ಎಂಬ ಕುರಿತು ಮಾತಾಡಲಾರಂಭಿಸಿದಾಗ, ಲೋಕದ ಮನುಷ್ಯನು ಈಗಲೂ, "ಖಂಡಿತ, ಅದು ನಾನು ಅಲ್ಲವೆಂದುಕೊಳ್ಳುತ್ತೇನೆ!" ಎಂದು ಪ್ರತಿಕ್ರಿಯಿಸುತ್ತಾನೆ. ಧಾರ್ಮಿಕ ಸತ್ಯಗಳೊಂದಿಗೆ ಪ್ರಶ್ನೆಮಾಡುವಾಗ ಬಹುಶಃ ನಾವು ಸಹ ಅದೇ ರೀತಿ ಪ್ರತಿಕ್ರಿಯಿಸುವೆವು: "ನಾನೋ? ಖಂಡಿತ, ನಾನಲ್ಲ!" ನೀವು ಒಳ್ಳೇವರಾಗಿರಬಹುದು, ನೈತಿಕ ವ್ಯಕ್ತಿಯಾಗಿರಬಹುದು. ನೀನು

ಆಗಾಧ ಧಾರ್ಮಿಕತೆ ಯುಳ್ಳವರಾಗಿರಬಹುದು. ಹೇಗೂ, ಒಂದನ್ನು ಅರ್ಥ ಮಾಡಿಕೊಳ್ಳಿರಿ, ಏನೆಂದರೆ ಈ ಯಾವದೇ ಗುಣಸ್ವಭಾವಗಳು ,ಅವುಗಳಷ್ಟೇ ಆಗಲಿ ನಿಮ್ಮನ್ನು ರಕ್ಷಿಸಲಾರವು. ನೀವು ರಕ್ಷಣೆ ಹೊಂದುವದೇ ಆದಲ್ಲಿ, ಅದು ದೇವರ ಕೃಪೆಯಿಂದಲೇ ಆಗಿರಲಿದೆ.

ನೀವು *ರಕ್ಷಣೆ ಹೊಂದುವ* ಮುಂಚೆ, ನೀನು ಕಳೆದು ಹೋಗಿರುವಿ ಎಂಬದನ್ನು ಮನವರಿಕೆ ಮಾಡಿಕೊಳ್ಳತಕ್ಕದ್ದು. Stott ಇದನ್ನು ಹೀಗೆ ಹೇಳುತ್ತಾನೆ:

> ಸಮಸ್ಯೆಯನ್ನು ಅಲ್ಲಗಳೆಯಿರಿ, ಮತ್ತು ಅದರ ಬಗ್ಗೆ ಏನನ್ನೂ ಪರಿಹಾರ ಕೈಗೊಳ್ಳುವದಕ್ಕಾಗುವದಿಲ್ಲ; ಸಮಸ್ಯೆಯಿದೆ ಎಂದು ಒಪ್ಪಿಕೊಳ್ಳಿರಿ, ಮತ್ತು ತಕ್ಷಣವೇ ಅದಕ್ಕೊಂದು ಪರಿಹಾರದ ಸಾಧ್ಯತೆಯಿರುವದು. ಮದ್ಯಪಾನ ವ್ಯಸನಿಗಳ ಅನಾಮದೇಯಗಳ "ಹನ್ನೆರಡು ಹೆಜ್ಜೆಗಳಲ್ಲಿ" ಮೊದಲನೆಯದು ಮಹತ್ವವಾದದ್ದು: "ನಾವು ಮದ್ಯಪಾನದ ಮೇಲೆ ಶಕ್ತಿಯಿಲ್ಲದವರಾಗಿದ್ದೇವೆಂದು ಒಪ್ಪಿಕೊಳ್ಳುತ್ತೇವೆ- ಅಂದರೆ ನಮ್ಮ ಜೀವಿತಗಳು ನಿಯಂತ್ರಣ ಮೀರಿ ಹೋಗಿವೆ."[93]

ನೀವು ಪಾಪಿ, ನಿಮ್ಮ ಪಾಪದ ಸ್ಥಿತಿಯ ಮೇಲೆ ಶಕ್ತಿಯಿಲ್ಲದವರು ಎಂಬದನ್ನು ಒಪ್ಪಿಕೊಳ್ಳುವದಕ್ಕೆ ಮನಸ್ಸುಳ್ಳವರಾ ಗಿದ್ದೀರಾ? ಹಾಗಿದ್ದರೆ ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪ ಪಡಿರಿ ಮತ್ತು ಕರ್ತನ ಬಳಿಗೆ ಪ್ರೀತಿ, ವಿಶ್ವಾಸದಿಂದ ಕೂಡಿದ ನಂಬಿಕೆಯೊಂದಿಗೆ ಬನ್ನಿರಿ (ಯೋಹಾನ 14:15; ಅಪೊಸ್ತಲರ ಕೃತ್ಯಗಳು 2:36-38; 22:16), ಆಗ ಆತನು ನಿಮ್ಮ ಪಾಪಗಳನ್ನು ನಿವಾರಿಸಿ ನಿಮ್ಮನ್ನು ಶುದ್ಧಮಾಡುವನು!

## ನಾವು ಯಾರಾಗಿದ್ದೇವೆ? (2:17-21)

ರೋಮಾ 2:17-21 ರಲ್ಲಿ, ಪೌಲನು ಯೆಹೂದ್ಯರ ಕೆಲವೊಂದು ಮೂಲಭೂತ ಜವಾಬ್ದಾರಿಗಳ ಕುರಿತು ಮಾತಾಡುತ್ತಾನೆ. ಆತನು ಹೇಳಿದ ಇತರ ಸಂಗತಿಗಳೊಳಗೆ, ಮುಖ್ಯವಾಗಿ ಹೇಳಿದ್ದೇನೆಂದರೆ ಅವರು "ಕುರುಡನಿಗೆ ದಾರಿ ತೋರುವವರು, ಕತ್ತಲೆಯಲ್ಲಿರುವವರಿಗೆ ಬೆಳಕು, ತಿಳುವಳಿಕೆಯಿಲ್ಲದವರಿಗೆ ಬುದ್ಧಿ ಹೇಳುವವರು, ಬಾಲಕರಿಗೆ ಉಪಾಧ್ಯಾಯರು ಆಗಿರಬೇಕು." ಈ ಮಾತುಗಳು ಕ್ರೈಸ್ತರಾಗಿರುವ ನಮಗೆ ಸಹ ಅನ್ವಯವಾಗಬಹುದು: ಆತ್ಮೀಕವಾಗಿ ಕುರುಡರಾಗಿರುವವರಿಗೆ ನಾವು ದಾರಿ ತೋರುವವ*ರಾಗಿರಬೇಕು* (2 ಕೊರಿಂಥ 4:4), ಆತ್ಮೀಕ ಕತ್ತಲೆಯಲ್ಲಿರುವವರಿಗೆ ಬೆಳಕುಗಳಾಗಿರಬೇಕು (ಗಲಾತ್ಯ 3:1), ತಿಳುವಳಿಕೆಯಿಲ್ಲದವರಂತೆ ನಡೆಯುವವರಿಗೆ ಬುದ್ಧಿ ಹೇಳುವವರಾಗಿರಬೇಕು (ತೀತನು 3:1-3), ಮತ್ತು ಆತ್ಮೀಕವಾಗಿ ಬಾಲಕರಂತಿರುವವರಿಗೆ ಉಪಾಧ್ಯಾಯರಾಗಿರಬೇಕು (ನೋಡಿರಿ 1 ಕೊರಿಂಥ 3:1).

## "ನಿಮಗೆ ಧರ್ಮಶಾಸ್ತ್ರ ಬೇಕೋ?" (2:17)

ಯೆಹೂದ್ಯರಲ್ಲೊಂದು ಕಟ್ಟುಕಥೆಯಿದೆ, ಏನೆಂದರೆ ದೇವರು ಎಪ್ಪತ್ತು ದೇಶಗಳವರ ಬಳಿಗೆ ಹೋಗಿ ಅವರಿಗೆ ಧರ್ಮಶಾಸ್ತ್ರವನ್ನು ಕೊಡುವದಾಗಿ ಹೇಳಿದಾಗ, ಅವರು ಅದನ್ನು ತಿರಸ್ಕರಿಸಿದರು. ಅಂತಿಮವಾಗಿ, ಇಸ್ರಾಯೇಲರೆಂಬ ಚಿಕ್ಕ ಗುಂಪಿನ ಬಳಿಗೆ ಬಂದನು.

ಆತನು ಅವರಿಗೆ ಧರ್ಮಶಾಸ್ತ್ರವನ್ನು ಕೊಟ್ಟಾಗ, ಅವರು "ನಾವು ಅದನ್ನು ತೆಗೆದುಕೊಳ್ಳುತ್ತೇವೆ!" ಎಂದು ಹೇಳಿದರು. ಈ ಕಥೆಯು ಬರೀ ಕಲ್ಪಿತವಾದದ್ದೇ, ಆದರೆ ಧರ್ಮಶಾಸ್ತ್ರವನ್ನು ಹೊಂದಿರುವ ಬಗ್ಗೆ ಯೆಹೂದ್ಯರು ಹೇಗೆ ಭಾವಿಸಿಕೊಂಡರೆಂಬುದನ್ನು ಇದು ದೃಷ್ಟಾಂತೀಕರಿಸುತ್ತದೆ. ಧರ್ಮಶಾಸ್ತ್ರದ ಪಾಲಕರಾಗಿರುವದು ಅವರನ್ನು ವಿಶೇಷವಾದವರಾಗಿ ಮಾಡಿತ್ತು! (ಯಾಕೆಂದರೆ, ಕಟ್ಟುಕಥೆಯ ಪ್ರಕಾರ, ಅದರ ಮೌಲ್ಯವನ್ನು ಗುರುತಿಸುವಷ್ಟು ಜಾಣರು ಅವರು ಮಾತ್ರವೇ ಆಗಿದ್ದರು!)

### ವಾಕ್ಯದ "ಕನ್ನಡಿ" (2:21-23)

ನಾನು ಮಕ್ಕಳಿಗೆ ಕಲಿಸುವ ವೇಳೆ, ನನ್ನ ಬಳಿಯಲ್ಲಿ *ಕೋತಿ ಮತ್ತು ಕನ್ನಡಿ* ಎಂಬ ಶಿರೋನಾಮೆಯ ಪುಸ್ತಕವಿತ್ತು. ಅದೊಂದು ಮತ್ತೊಬ್ಬರ ಕಸದಲ್ಲಿ ಕೈಯಾಡಿಸುತ್ತಾ ಸುತ್ತಿತ್ತಿದ್ದ ತುಂಟ ಕೋತಿಯ ಕುರಿತಾಗಿತ್ತು. ಕೋತಿಯು ಹಾಗೆ ಮಾಡುತ್ತಿರುವಾಗ, ಅದರ ಮುಖಕ್ಕೆ ಕೆಂಪು ಬಣ್ಣವು ಮೆತ್ತಿಕೊಂಡಿತ್ತು. ನಂತರ ಅದಕ್ಕೊಂದು ಎಸೆಲ್ಪಟ್ಟ ಕನ್ನಡಿ ಸಿಕ್ಕಿತ್ತು. ಕನ್ನಡಿಯು ಬೆಳಕನ್ನು ಪ್ರತಿಭಿಂಬಿಸುತ್ತೆಂಬದು ಅದಕ್ಕೆ ಗೊತ್ತಾಗಿತ್ತು, ಆದ್ದರಿಂದ ಅದು ಕಾಡಿನಲ್ಲೆಲ್ಲಾ ಸುತ್ತಾಡುತ್ತಾ ಬೇರೆ ಪ್ರಾಣಿಗಳ ಕಣ್ಣುಗಳಿಗೆ ಕುಕ್ಕುವಂತೆ ಬೆಳಕನ್ನು ಹೊಳಪಿಸುತ್ತಿತ್ತು. ಕ್ರಮೇಣದಲ್ಲಿ, ಅದಕ್ಕೆ ಕನ್ನಡಿಯ ಉದ್ದೇಶವು ಅದರಲ್ಲಿ ಒಬ್ಬನು *ತನ್ನ* ಮುಖವನ್ನು ನೋಡಿಕೊಳ್ಳುವದಾಗಿದೆ ಎಂದು ಯಾರೋ ತಿಳಿಸಿ ಹೇಳಿದರು. ಅಂತಿಮವಾಗಿ, ಅದು ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಾಗ, ತನ್ನ ಮುಖದಲ್ಲಿ ಕೆಂಪು ಬಣ್ಣ ಮೆತ್ತಿರುವದನ್ನು ಕಂಡು ಆಘಾತಗೊಂಡಿತು! ಯೆಹೂದ್ಯರು ಆ ಕೋತಿಯ ಹಾಗಿದ್ದರು. ಅವರು ವಾಕ್ಯದ "ಕನ್ನಡಿಯನ್ನು" (ನೋಡಿರಿ ಯಾಕೋಬ 1:23-25) ಮತ್ತೊಬ್ಬರ ಪಾಪಗಳ ಮೇಲೆ "ಬೆಳಕು ಪ್ರಕಾಶಿಸುವದಕ್ಕೆ" ಉಪಯೋಗಿಸುತ್ತಾ ಬಂದಿದ್ದರು, ಆದರೆ ಸ್ವತಃ ತಾವೇ ಆ ಕನ್ನಡಿಯಲ್ಲಿ ಮುಖವನ್ನು ನೋಡಿಕೊಂಡಿರಲೇ ಇಲ್ಲ! ನಾವು ದೇವರ ಕನ್ನಡಿಯಲ್ಲಿ ನೋಡಿಕೊಂಡು ನಮ್ಮ ಮುಖಗಳಿಗೆ ಪಾಪದ ಬಣ್ಣವು ಅಂಟಿಕೊಂಡಿದೆಯೋ ಎಂದು ಪರೀಕ್ಷಿಸಿಕೊಳ್ಳುವದು ಎಷ್ಟು ಪ್ರಾಮುಖ್ಯವಾದದ್ದು.

### ಆತ್ಮೀಕ ಇಸ್ರಾಯೇಲ (2:25-29)

ಪೌಲನ ಹೇಳಿಕೆಗಳು ಶಾರೀರಿಕ ಯೆಹೂದ್ಯರ ಕಡೆಗೆ ಆಗಿದ್ದವು, ಆದರೆ ಅದನ್ನು ನಮ್ಮ ಕಡೆಗೆ ತಿರುಗಿಸಿಕೊಂಡರೆ ಸೂಕ್ತವಾಗಿರುತ್ತದೆ. ಅದ್ಯಾಯ 4ರಲ್ಲಿ, ಪೌಲನು ಯಾರು ಅಬ್ರಹಾಮನಲ್ಲಿದ್ದಂಥ ನಂಬಿಕೆಯನ್ನು ಹೊಂದಿದ್ದಾರೋ ಅವರು ಯೆಹೂದ್ಯರಾಗಲಿ ಅಥವಾ ಅನ್ಯಜನರಾಗಲಿ ಆತ್ಮೀಕವಾಗಿ ಅಬ್ರಹಾಮನ ಸಂತತಿಯಾಗಿದ್ದಾರೆಂದು ಹೇಳುತ್ತಾನೆ (4:12, 16; ನೋಡಿರಿ ಗಲಾತ್ಯ 3:29). ಪೌಲನು ಗಲಾತ್ಯದವರಿಗೆ ಬರೆದ ತನ್ನ ಪತ್ರಿಕೆಯಲ್ಲಿ, ಕ್ರೈಸ್ತರನ್ನು "ದೇವರ ಇಸ್ರಾಯೇಲರು" ಎಂದು ಕರೆಯುತ್ತಾನೆ (ಗಲಾತ್ಯ 6:15, 16).

ಆತ್ಮೀಕ ಇಸ್ರಾಯೇಲರಾಗಿ, ನಾವು ಇನ್ನು ಮೇಲೆ ಮೋಶೆಯ ಧರ್ಮಶಾಸ್ತ್ರದ ಅಧೀನಕ್ಕೊಳಪಟ್ಟಿಲ್ಲ (ನೋಡಿರಿ 7:4), ಆದರೆ ನಮಗೆ "ಕ್ರಿಸ್ತನ ನಿಯಮ (ಧರ್ಮಶಾಸ್ತ್ರ)" ಇರುವದು ನಿಜ (1 ಕೊರಿಂಥ 9:21), "ಪರಿಪೂರ್ಣವಾದ ಧರ್ಮಶಾಸ್ತ್ರ, ಬಿಡುಗಡೆಯ

ಧರ್ಮಶಾಸ್ತ್ರ" ಇರುತ್ತದೆ (ಯಾಕೋಬ 1:25). (ಒಂದು ವೇಳೆ ನಮಗೆ ಧರ್ಮಶಾಸ್ತ್ರ ಇದ್ದಿಲ್ಲವಾಗಿದ್ದರೆ, ನಾವು ಪಾಪಿಗಳೆಂಬ ಮನವರಿಕೆ ನಮಗಾಗುತ್ತಿರಲಿಲ್ಲ [ನೋಡಿರಿ 4:15; 5:13].) ನಿರ್ದಿಷ್ಟವಾಗಿ, ದೇವರು ನಮಗೆ ಹೊಸ (ಯೇಸುವಿನ) ಒಡಂಬಡಿಕೆಯನ್ನು ಕೊಟ್ಟಿರುತ್ತಾನೆ (ನೋಡಿರಿ ಇಬ್ರಿಯ 9:15-17)- ನಮಗೆ ಉಪದೇಶಿಸಲು, ಖಂಡಿಸಲು, ನಮ್ಮನ್ನು ತಿದ್ದುವದಕ್ಕೆ, ನಮ್ಮನ್ನು ತರಬೇತಿಗೊಳಿಸಲು ಹಾಗೂ ಸನ್ನದ್ಧುಗೊಳಿಸಲು (ನೋಡಿರಿ 2 ತಿಮೊಥೆ 3:16, 17). ಇದು ಎಂಥ ಆಶೀರ್ವಾದ! John Fawcett ಇದನ್ನು ಒಂದು ಹಾಡಿನಲ್ಲಿ ಹೇಳುತ್ತಾನೆ:

ಎಷ್ಟು ಅಮೂಲ್ಯವು ಆ ದೈವಿಕ ಪುಸ್ತಕ,
ಪ್ರೇರಣೆಯಿಂದ ಕೊಡಲ್ಪಟ್ಟಿದೆ!
ಅದರ ವಿಧಿಗಳು ದೀಪದಂತೆ ಪ್ರಕಾಶವಾಗಿ ಉರಿಯುತ್ತವೆ,
ನನ್ನ ಆತ್ಮವನ್ನು ಪರಲೋಕಕ್ಕೆ ದಾರಿನಡಿಸಲು.
ಪರಿಶುದ್ಧ ದೈವಿಕ ಪುಸ್ತಕ!
ನನ್ನ ಅಮೂಲ್ಯವಾದ ಬೊಕ್ಕಸ!
ನನ್ನ ಪಾದಗಳಿಗೆ ದೀಪ ಮತ್ತು ನನ್ನ ದಾರಿಗೆ ಬೆಳಕು
ನನ್ನನ್ನು ಸುರಕ್ಷಿತ ದಾರಿ ನಡಿಸಿ ಮನೆಗೆ ಸೇರಿಸಲು.[94]

ಹೇಗೂ, ಕೇವಲ ಸತ್ಯವೇದವನ್ನು ಇಟ್ಟುಕೊಂಡು ಅದರ ವಿಧಿಗಳನ್ನು ಅಲಕ್ಷಿಸುವದಾದರೆ ಪ್ರಯೋಜನವಿಲ್ಲದ್ದು. ಅದಕ್ಕಿಂತಲೂ ಘೋರವೆಂದರೆ ಅದು ಅರ್ಥಹೀನವಾದ್ದದ್ದು. ಅದೊಂದು ರೀತಿ ಕಾಡಿನಲ್ಲಿ ಕಳೆದುಹೋಗಿರುವ ಮನುಷ್ಯನು ತನ್ನ ಬಳಿಯಲ್ಲಿ ದಿಕ್ಸೂಚಿಯನ್ನಿಟ್ಟುಕೊಂಡಿದ್ದರೂ ಅದನ್ನು ಒಮ್ಮೆಯೂ ನೋಡದವನ ಹಾಗಿರುತ್ತದೆ . . . ಅಥವಾ ಒಂದು ಅಪರಿಚಿತವಾದ ಪ್ರಾಂತ್ಯಕ್ಕೆ ಪ್ರಯಾಣ ಮಾಡುವ ವ್ಯಕ್ತಿ ತನ್ನ ಬಳಿ ನಕ್ಷೆಯನ್ನಿಟ್ಟುಕೊಂಡಿದ್ದರೂ ಅದನ್ನು ಎಂದಿಗೂ ತೆಗೆದು ನೋಡದವನಂತೆ . . . ಅಥವಾ ಒಬ್ಬ ಪ್ರಯಾಣಿಕನು ಯಾವ ದಿಕ್ಕಿಗೆ ಹೋಗಬೇಕೆಂದು ದಿಕ್ಕುಗಳನ್ನು ಸೂಚಿಸುವ ಫಲಕದ ಮುಂದೆ ನಿಂತಿದ್ದರೂ, ತಾನು ಹೋಗಬೇಕಾದ ದಿಕ್ಕಿನೆಡೆಗೆ ಸಾಗಲು ನಿರಾಕರಿಸುವವನ ರೀತಿಯಲ್ಲಿರುತ್ತದೆ. ಕೇವಲ ಮೋಶೆಯ ಧರ್ಮಶಾಸ್ತ್ರವನ್ನು ಹೊಂದಿರುವದು ಯಾವನೊಬ್ಬನನ್ನೂ ನಿಜ ಯೆಹೂದ್ಯನನ್ನಾಗಿ ಮಾಡಲಿಲ್ಲ ಮತ್ತು ಕೇವಲ ಹೊಸ ಒಡಂಬಡಿಕೆಯ ಒಂದು ಪ್ರತಿಯನ್ನು ಹೊಂದಿರುವ ಮಾತ್ರದಿಂದ ಒಬ್ಬನನ್ನು ಅದು ನಿಜ ಕ್ರೈಸ್ತನನ್ನಾಗಿ ಮಾಡುವದಿಲ್ಲ.

ಆತ್ಮೀಕ ಇಸ್ರಾಯೇಲವಾಗಿ, ನಾವು ಯೆಹೂದ್ಯರಿಗೆ ಪೌಲನು ಹೇಳಿದ ಮಾತುಗಳಿಂದ ಕಲಿತುಕೊಳ್ಳಬಹುದಾಗಿದೆ. ಕೆಲವೊಂದು ಧಾರ್ಮಿಕ ವಿಧಿಗಳನ್ನು ಕೈಕೊಂಡು ನಡೆದರೆ ಅವರು ದೇವರ ಮುಂದೆ ನೀತಿವಂತರೆನಿಸಿಕೊಳ್ಳುರೆಂದು ಭಾವಿಸಿಕೊಂಡರು. ಧರ್ಮಶಾಸ್ತ್ರ ಹೊಂದಿರುವದರಲ್ಲಿ ಪ್ರಯೋಜನವಿತ್ತೋ? ಹೌದು, ಪ್ರಯೋಜನವಿತ್ತು (ನೋಡಿರಿ 3:1, 3). ಯೆಹೂದ್ಯ ಗಂಡಸು ಸುನ್ನತಿ ಹೊಂದಬೇಕೋ? ಖಂಡಿತ. ಇವುಗಳಲ್ಲೊಂದು ಇಲ್ಲವಾಗಿದ್ದರೆ ಆತನು ಒಬ್ಬ ಯೆಹೂದ್ಯನಾಗಿರುವ ದಕ್ಕೆ ಸಾಧ್ಯವಿರಲಿಲ್ಲ. ಹೇಗೂ, ಧರ್ಮಶಾಸ್ತ್ರ ಹೊಂದಿರುವದು ಮತ್ತು ಸುನ್ನತಿ ಮಾಡಿಸಿಕೊಳ್ಳುವದು ದೇವರಿಗೆ

ವಿಧೇಯರಾಗು ವದಕ್ಕೆ ಪರ್ಯಾಯವೆಂದು ಎಣಿಸಲ್ಪಡಲು ಸಾಧ್ಯವೋ? ಎಂದಿಗೂ ಇಲ್ಲ!

ಹೊಸ ಒಡಂಬಡಿಕೆಯ ಕ್ರೈಸ್ತತ್ವವನ್ನು ಪುನಃ ಸ್ಥಾಪಿಸುವದಕ್ಕೆ ಸಮರ್ಪಿತರಾಗಿರುವ ನಾವು ಜವಾಬ್ದಾರಿಯುತ ವ್ಯಕ್ತಿಗಳಿಗೆ ಪಾಪ ಕ್ಷಮಾಪಣೆಗಾಗಿ ಮುಳುಗಿಸುವ ಮೂಲಕ ದೀಕ್ಷಾಸ್ನಾನ ಮಾಡಿಸುತ್ತೇವೆ. ನಾವು ಪ್ರತಿ ವಾರದ ಮೊದಲ ದಿನದಂದು ಕರ್ತನ ಭೋಜನದಲ್ಲಿ ಪಾಲ್ಗೊಳ್ಳುತ್ತೇವೆ. ನಾವು ದೇವರನ್ನು ಆರಾಧಿಸುವದರಲ್ಲಿ, ಯಾಂತ್ರಿಕವಾದ ಸಂಗೀತ ಸಾಧನಗಳಿಲ್ಲದೆ ಹಾಡುತ್ತೇವೆ. ಇವೆಲ್ಲಾ ಪ್ರಾಮುಖ್ಯವೋ? ಹೌದು, ಅವು ಪ್ರಾಮುಖ್ಯವಾಗಿವೆ. ನಾವು ಕರ್ತನ ಸಭೆಯೆಂದು ಹೇಳಿಕೊಂಡು ಕರ್ತನ ಸಭೆಯಂತೆ ನಡೆಯದಿರಲು ಹೇಗೆ ಸಾದ್ಯ? ಹೇಗೂ, ಈ ಎಲ್ಲಾ ಕಾರ್ಯಗಳಿದ್ದ ಮಾತ್ರಕ್ಕೆ ಅವುಗಳು ಆಜ್ಞೆಗಳಿಗೆ-ಈ ಕೆಳಗಿನ ರೀತಿಯ ಆಜ್ಞೆಗಳು- ವಿಧೇಯರಾಗುವದಕ್ಕೆ ಪರ್ಯಾಯವಾ ಗಬಲ್ಲವೋ?

> ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ (1 ಯೋಹಾನ 4:7).
>
> ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ (ಗಲಾತ್ಯ 6:10).
>
> ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವ ರಾಗಿಯೂ ಇರ್ರಿ (ಎಫೆಸ 4:32).
>
> ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ (ರೋಮಾ 12:18).
>
> "ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ" (ಮತ್ತಾಯ 28:19).

ಎಂದಿಗೂ ಪರ್ಯಾಯವಾಗಲು ಸಾದ್ಯವಿಲ್ಲ! "ಒಬ್ಬ ನಿಜ ಕ್ರೈಸ್ತನಾಗಿ" ಇರಬೇಕೆಂದರೆ, ಒಬ್ಬನು ಕರ್ತನಿಂದ ಆಜ್ಞಾಪಿಸಲ್ಪಟ್ಟಿರುವ *ಎಲ್ಲವನ್ನೂ* ಮಾಡುವದಕ್ಕೆ ಗಂಭೀರತೆ ಯುಳ್ಳವನಾಗಿರಬೇಕು.

### ಸುನ್ನತಿಯ ವಿಷಯವೇನು? (2:25-27)

25 ರಿಂದ 29 ವಚನಗಳನ್ನಾಧರಿಸಿ ಇರುವ ಕೆಲವು ತಪ್ಪು ತರ್ಕಗಳನ್ನು ನಾವು ಸರಿಪಡಿಸಬೇಕಾಗಿರುತ್ತದೆ. ಕೆಲವು ಲೇಖಕರು ವಾದಿಸುವದೇನೆಂದರೆ, ಪೌಲನು ಇಲ್ಲಿ ಸುನ್ನತಿಯು ಪರಿಣಾಮವಿಲ್ಲದ್ದು, ಒಬ್ಬನಿಗೆ ಸುನ್ನತಿಯಿದ್ದರೂ ಇರದಿದ್ದರೂ ಯಾವ ವ್ಯತ್ಯಾಸವಿಲ್ಲ ಎಂಬದನ್ನು ಕಲಿಸುತ್ತಿದ್ದಾನೆ ಎಂಬದಾಗಿ. ಇಂದು ಸುನ್ನತಿಗೆ ಯಾವದೇ ಆತ್ಮೀಕ ಮಹತ್ವವಿಲ್ಲವೆಂಬುದು ನಿಜವೇ (1 ಕೊರಿಂಥ 7:19; ಗಲಾತ್ಯ 5:6; 6:15), ಆದರೆ ಪೌಲನ ಹೇಳಿಕೆಗಿದ್ದ ಹಿನ್ನಲೆಯು ಕ್ರಿಸ್ತನ ಬರೋಣಕ್ಕೆ ಮುಂಚೆ ದೇವರು ಯೆಹೂದ್ಯರಿಗಾಗಿಯೂ ಅನ್ಯಜನರಿಗಾಗಿಯೂ ಮಾಡಿದ್ದ ವ್ಯವಸ್ಥೆಗಳಾಗಿದ್ದವು. ಆ

ವ್ಯವಸ್ಥೆಗಳ ಅಡಿಯಲ್ಲಿ, ಒಬ್ಬ ಅನ್ಯಜನಾಂಗದವನಿಗೆ ಸುನ್ನತಿ ಮಾಡಿಸಿಕೊಳ್ಳುವದು ಪ್ರಾಮುಖ್ಯವಾಗಿರಲಿಲ್ಲ, ಆದರೆ ಸುನ್ನತಿ ಮಾಡಿಸಿಕೊಳ್ಳುವದು ಒಬ್ಬ ಯೆಹೂದ್ಯನಿಗೆ ಪ್ರಾಮುಖ್ಯವಾಗಿತ್ತು. ಒಬ್ಬ ಯೆಹೂದ್ಯ ಗಂಡಸು ಸುನ್ನತಿ ಮಾಡಿಸಿಕೊಂಡಿಲ್ಲವಾಗಿದ್ದರೆ, ಆತನು ಪಸ್ಕವನ್ನು ಆಚರಿಸುವ ಹಾಗಿರಲಿಲ್ಲ (ನೋಡಿರಿ ವಿಮೋಚನಕಾಂಡ 12:48) ಅಥವಾ ದೇವಾಲಯದೊಳಗೆ ಹೋಗುವಂತಿರಲಿಲ್ಲ (ನೋಡಿರಿ ಯೆಹೇಜ್ಕೇಲ 44:9); ಆತನು "ಕುಲದಿಂದ ತೆಗೆದುಹಾಕಲ್ಪಡಬೇಕಾಗಿತ್ತು" (ಆದಿಕಾಂಡ 17:14). Lard ಹೀಗೆ ಬರೆದನು,

> . . . ನಾವು ಇಲ್ಲಿ ವ್ಯತ್ಯಾಸವನ್ನು ನಿರ್ಲಕ್ಷಿಸಬಾರದು. ಒಬ್ಬ ಅನ್ಯಜನಾಂಗದವನು ಸುನ್ನತಿ ಹೊಂದದಿರುವದಕ್ಕೂ ಒಬ್ಬ ಯೆಹೂದ್ಯನು ಸುನ್ನತಿ ಹೊಂದದೇ ಇರುವದಕ್ಕೂ ವ್ಯತ್ಯಾಸವಿತ್ತು. ಆ ರೀತಿ ಆಗಿದ್ದರೆ, ಯೆಹೂದ್ಯನು ದೇವರ ಒಡಂಬಡಿಕೆಯನ್ನು ಮುರಿದವನಾಗುತ್ತಿದ್ದನು, ಆದರೆ ಅನ್ಯಜನಾಂಗದವನಿಗೆ ಹಾಗಾಗುತ್ತಿ ರಲಿಲ್ಲ. ಆದರೆ ಯೆಹೂದ್ಯನು ಸುನ್ನತಿ ಹೊಂದಿದವನಾದ ಮೇಲೆ, ಆತನು ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವ ಹೊರತು, ಆತನು ಸುನ್ನತಿ ಮಾಡಿಸಿಕೊಂಡದ್ದು ನಿಷ್ಪ್ರಯೋಜನಕರ ವಾಗುತ್ತಿತ್ತು.[95]

ಪೌಲನು ಉಪದೇಶವನ್ನು ಈ ರೀತಿಯಲ್ಲಿ ವ್ಯಕ್ತಪಡಿಸಬಹುದು: ಒಡಂಬಡಿಕೆಯ "ಗುರುತು" ಇಲ್ಲದವನು ಒಡಂಬಡಿಕೆಯನ್ನು *ಕೈಕೊಂಡು ನಡೆದರೆ*, ಅಂತಹ ಒಡಂಬಡಿಕೆಯ "ಗುರುತು" ಹೊಂದಿಯೂ ಒಡಂಬಡಿಕೆಯನ್ನು ಕೈಕೊಂಡು *ನಡೆಯದವನಿಗಿಂತಲೂ* ಆತ್ಮೀಕ ಸ್ಥಿತಿಯಲ್ಲಿ ಉತ್ತಮನಾಗಿದ್ದಾನೆ. ಈ ಸತ್ಯದ ಕುರಿತು ಒಂದು ಬೈಬಲಿನ ದೃಷ್ಟಾಂತವನ್ನು ಕೊಟ್ಟರೆ ಸಹಾಯಕರವಾಗಿರುತ್ತದೋ? ಅನ್ಯಜನಾಂಗದ ಸೈನಿಕನಾದ ಕೊರ್ನೇಲ್ಯನ ಬಗ್ಗೆ ಯೋಚಿಸಿರಿ (ಅಪೊಸ್ತಲರ ಕೃತ್ಯಗಳು 10:1, 2), ಆತನು ಸುನ್ನತಿಯೆಂಬ "ಗುರುತು" ಹೊಂದಿರಲಿಲ್ಲ. ಈ ಮನುಷ್ಯನನ್ನು ಸುನ್ನತಿಯ "ಗುರುತು" ಹೊಂದಿದ್ದ ಯೆಹೂದ್ಯರ ಮಹಾಯಾಜಕನಾದ ಕಾಯಫನಿಗೆ ಹೋಲಿಸಿ ನೋಡಿರಿ (ಮತ್ತಾಯ 26:3, 4, 57, 62-68).

## ಅನ್ಯಜನರು ಹಾಗೂ ಯೆಹೂದ್ಯರು (2:25-27)

ಲಿಖಿತ ವಿಧಿಗಳನ್ನು ಹೊಂದಿಲ್ಲದ ಅನ್ಯಜನರು, ಧರ್ಮಶಾಸ್ತ್ರದ ಕೆಲವು ಆಜ್ಞೆಗಳನ್ನು ಪಾಲಿಸುವದಕ್ಕೆ ಶಕ್ತರಾಗಿದ್ದಲ್ಲಿ, ಖಂಡಿತವಾಗಿಯೂ ಲಿಖಿತ ಧರ್ಮಶಾಸ್ತ್ರವನ್ನು ಹೊಂದಿದ್ದ ಯೆಹೂದ್ಯರು ಸಹ ಹಾಗೆಯೇ ಮಾಡುವದಕ್ಕೆ ಶಕ್ತರಾಗಿರಬೇಕಿತ್ತು. ನನಗೊಬ್ಬ ಹದಿಹರೆಯದ ಹುಡುಗನ ನೆನಪು ಬರುತ್ತದೆ, ಅವನಿಗೆ ಏನಾದರೂ ಕೆಲಸ ಕೊಟ್ಟರೆ, "ಅದು ಬಹಳ ಕಠಿಣ" ಎಂದು ಗುಣುಗುಟ್ಟುತ್ತಿದ್ದನು, ಮತ್ತು ಅವನ ತಂದೆ ಅವನಿಗೆ, "ಏ, ಆ ಯುವಕನನ್ನು ನೋಡೋ, ಅವನು ನಿನ್ನ ಅರ್ಧದಷ್ಟು ಸಹ ಇಲ್ಲ, ಮತ್ತು ಅವನು ಹೇಗೆ ಮಾಡುತ್ತಿದ್ದಾನೆ!" ಎಂದು ಹೇಳುತ್ತಿದ್ದನು. ಅದು ನಿಜಕ್ಕೂ ಮುಜುಗರ ತರುವ ಸಂಗತಿಯೇ.

## ಅಂತಃರಂಗ ಮತ್ತು ಬಹಿರಂಗ (2:28, 29)

ಪೌಲನು ರೋಮಾ 2:28, 29 ವಚನಗಳ ಮಾತುಗಳನ್ನು ಬರೆಯುವಾಗ, ಶಾರೀರಿಕ

ಯೆಹೂದ್ಯರನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನು. ಆತನು ಆ ನಿಟ್ಟಿನಲ್ಲಿ ಹೇಳುತ್ತಿರುವದೇನೆಂದರೆ, "ನೀನು ನಿನ್ನನ್ನು ಯೆಹೂದ್ಯನೆಂದು ಹೇಳಿಕೊಳ್ಳುತ್ತಿ, ಆದರೆ ನೀನು *ಅಂತರಂಗದಲ್ಲಿಯೂ ಬಹಿರಂಗದಲ್ಲಿಯೂ* ಯೆಹೂದ್ಯನಾಗಿಲ್ಲವಾದಲ್ಲಿ ನೀನೊಬ್ಬ ನಿಜವಾದ ಯೆಹೂದ್ಯನೇ ಅಲ್ಲ." ಹೇಗೂ, ಆತನು ಇಲ್ಲಿ, ತಾನು ಮುಂದೆ ಈ ಪತ್ರಿಕೆಯಲ್ಲಿ ಕ್ರೈಸ್ತರು ಅಬ್ರಹಾಮನ *ಆತ್ಮೀಕವಾದ ಸಂತತಿ* ಎಂಬ ಉಪದೇಶ ಮಾಡುವ ನಿರೀಕ್ಷೆಯಲ್ಲಿದ್ದನೆಂದು ತೋರುತ್ತದೆ (ನೋಡಿರಿ 4:12, 16), ಉದಾಹರಣೆಗೆ, ವಚನ 29ರಲ್ಲಿ "ಆತ್ಮ" ಎಂಬುದು ಪವಿತ್ರಾತ್ಮನನ್ನು ಸೂಚಿಸುವದಾರೆ, ಇದು ಯೆಹೂದ್ಯರಿಗಿಂತಲೂ ಕ್ರೈಸ್ತರಿಗೆ ಹೆಚ್ಚು ಅರ್ಥಪೂರ್ಣವಾಗಿರುತ್ತದೆ. ಅಷ್ಟುಮಾತ್ರವಲ್ಲದೆ, ನಮಗೆ ಗೊತ್ತಿರುವದೇನೆಂದರೆ ಪೌಲನು ಅನಂತರದಲ್ಲಿ ಬರೆದ ತನ್ನ ಇನ್ನೊಂದು ಪತ್ರಿಕೆಯೊಂದರಲ್ಲಿ ಕ್ರೈಸ್ತರನ್ನುದ್ದೇಶಿಸಿ "ನಿಜವಾದ ಸುನ್ನತಿಯವರು" ಎಂದು ಹೇಳಿದನು (ಫಿಲಿಪ್ಪಿ 3:3; ನೋಡಿರಿ ಕೊಲೊಸ್ಸೆ 2:11).[96]

ಪೌಲನು ಮನಸ್ಸಿನಲ್ಲಿ ಆತ್ಮೀಕ ಇಸ್ರಾಯೇಲರನ್ನಿಟ್ಟುಕೊಂಡು ಹೇಳಿದನೋ ಅಥವಾ ಇಲ್ಲವೋ, ಆದರೆ ಕ್ರೈಸ್ತರಾಗಿರುವ ನಾವು ಶಾರೀರಕ ಇಸ್ರಾಯೇಲರ ಬಗ್ಗೆ ಆತನು ಕಲಿಸಿದ ಪಾಠವನ್ನು ಕಲಿತುಕೊಳ್ಳಬೇಕಿದೆ: ಬಹಿರಂಗದಲ್ಲಿ ನೇಮನಿಷ್ಠೆ ಆಚರಣೆ ಮಾಡುವದು ಎಂದಿಗೂ ಸಾಕಾಗದು; *ಹೃದಯದಲ್ಲಿ* ಏನೋ ಸಂಭವಿಸಬೇಕಾದ ಅಗತ್ಯವಿರುತ್ತದೆ. ಉದಾಹರಣೆಗೆ, ಒಬ್ಬ ವ್ಯಕ್ತಿಯು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದು; ಆದರೆ ಆತನು "ಹೃದಯದಿಂದ ವಿಧೇಯನಾಗಲಿಲ್ಲ" ಎಂದರೆ (6:17, 18; ನೋಡಿರಿ 6:3, 4), ಆತನು ಕೇವಲ ನೀರಿನಿಂದ ನೆನೆದು ಹೋಗುತ್ತಾನೆ ಹೊರತು ಮತ್ತೇನೂ ಇಲ್ಲ. ಒಬ್ಬನು ಕರ್ತನ ಭೋಜನದಲ್ಲಿ ಪಾಲ್ಗೊಳ್ಳಬಹುದು-ಹುಳಿಯಿಲ್ಲದ ರೊಟ್ಟಿ ತಿಂದು, ದ್ರಾಕ್ಷಾರಸ ಕುಡಿಯುವದು-ಆದರೆ ಮುಖ್ಯವಾಗಿ ಆತನು ಆ ಸಂಕೇತಗಳ ಅರ್ಥವನ್ನು ಗಮನಕ್ಕೆ ತೆಗೆದುಕೊಳ್ಳುವದಿಲ್ಲವೆಂದರೆ, ಆತನು "ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೆ ಗುರಿಯಾಗುವನು" (1 ಕೊರಿಂಥ 11:29; ನೋಡಿರಿ 11:23-30). ಒಬ್ಬ ವ್ಯಕ್ತಿಯು ಯಾಂತ್ರಿಕವಾದ ಸಂಗೀತ ವಾದ್ಯಗಳಿಲ್ಲದೆ ಹಾಡಬಹುದು; ಆದರೆ ಆತನು "ಆತ್ಮದಿಂದಲೂ ಮನಸ್ಸಿನಿಂದಲೂ ಹಾಡದಿದ್ದಲ್ಲಿ" (1 ಕೊರಿಂಥ 14:15), ಕೇವಲ ಸದ್ದು ಮಾಡುವವನಾಗಿರುತ್ತಾನೆ. ಒಬ್ಬನು ವಾಕ್ಚಾತುರ್ಯದಿಂದ ಮಾತಾಡಬಹುದು, ಶ್ರದ್ಧೆಯಿಂದ ಕೆಲಸ ಮಾಡಬಹುದು, ಮತ್ತು ತ್ಯಾಗದಿಂದ ಕೊಡಬಹುದು; ಆದರೆ ಆತನು ಇವುಗಳನ್ನೆಲ್ಲಾ ಹೃದಯದಲ್ಲಿ ಪ್ರೀತಿಯಿಲ್ಲದವನಾಗಿ ಮಾಡಿದರೆ, ಅವುಗಳಿಂದ ಆತನಿಗೆ ಯಾವ ಪ್ರಯೋಜನವಿರುವದಿಲ್ಲ (ನೋಡಿರಿ 1 ಕೊರಿಂಥ 13:1-3). "ನಿಜ ಕ್ರೈಸ್ತರು" ಆಗಿರಬೇಕೆಂದರೆ ನಾವು *ಸರಿಯಾದ ಸಂಗತಿಗಳನ್ನು* ಮಾಡುವ ಅಗತ್ಯತೆಯಿರುವದು ಮಾತ್ರವಲ್ಲದೆ, ನಾವು ಅವುಗಳನ್ನು *ಸರಿಯಾದ ರೀತಿಯಲ್ಲಿ*- ಅಂದರೆ, ನಾವು ಅವುಗಳನ್ನು ಹೃದಯದಿಂದ ಮಾಡುವ ಅಗತ್ಯತೆ ಸಹ ಇರುತ್ತದೆ.

ನಾನು "ಮಾತ್ರವಲ್ಲದೆ" ಹಾಗೂ "ಸಹ" ಎಂದು ಹೇಳಿದ್ದನ್ನು ಗಮನಿಸಿರಿ. ದೇವರನ್ನು ಮೆಚ್ಚಿಸಲು, ಒಳಗೂ ಹೊರಗೂ ಸರಿಯಾಗಿರುವದು ಅಗತ್ಯವಿರುತ್ತದೆ. ಕೆಲವರು ರೋಮಾ 2:28, 29 ವಚನಗಳನ್ನು ತಪ್ಪಾಗಿ ಅನ್ವಯಿಸಿಕೊಂಡು ಒಬ್ಬನು "ಬಹಿರಂಗದಲ್ಲಿ" ಹೇಗಿರುತ್ತಾನೆಂಬದು ಪ್ರಾಮುಖ್ಯವಲ್ಲ; "ಅಂತರಂಗ" ಮಾತ್ರವೇ ಮುಖ್ಯವಾದದ್ದು ಎಂದು ಕಲಿಸುತ್ತಾರೆ. ಉದಾಹರಣೆಗೆ, ರೋಮಾ 2:28, 29ರ ಮೂಲಭೂತ ಸಂದೇಶವೇನೆಂದರೆ

"ಲಿಪಿ vs ಆತ್ಮ." ಇವರು ಅಭಿಪ್ರಾಯಕ್ಕೆ ಬರುವದೇನೆಂದರೆ, "ಧರ್ಮಶಾಸ್ತ್ರದ ಲಿಪಿ (ತಿರುಳು)" (ಬೈಬಲ್ ಏನು ಹೇಳುತ್ತದೋ) ಪರಿಣಾಮವಿಲ್ಲದ್ದು, ಮತ್ತು "ಧರ್ಮಶಾಸ್ತ್ರದ ಆತ್ಮ" ವೇ ಎಲ್ಲಾ ಮುಖ್ಯವಾದದ್ದು (ಸರಿಯಾದ ಉದ್ದೇಶಗಳನ್ನು ಇಟ್ಟುಕೊಂಡಿರುವದು). ಒಬ್ಬ ಯೆಹೂದ್ಯನು, ಹಳೆ ಒಡಂಬಡಿಕೆಯ ವ್ಯವಸ್ಥೆಯಲ್ಲಿ ಸುನ್ನತಿ ಮಾಡಿಸಿಕೊಂಡರೂ ಬಿಟ್ಟರೂ "ಯಾವ ಪರಿಣಾಮವಿಲ್ಲದ್ದು" ಎಂದು ಪೌಲನು ಬೋಧಿಸಿದನೋ? ಇಲ್ಲ! ಒಬ್ಬ ಯೆಹೂದಿ ಗಂಡಸು ಸುನ್ನತಿ ಮಾಡಿಸಿಕೊಳ್ಳುವನೆಂಬುದು *ಸಹಜವೇ* ಆದದ್ದು. ಪೌಲನ ಉದ್ದೇಶವು ಕೇವಲ ಶಾರೀರಿಕ ಸುನ್ನತಿ *ಮಾತ್ರವೇ* ಸಾಕಾಗದು; ಒಬ್ಬ ಯೆಹೂದ್ಯನು ಹೃದಯದಲ್ಲಿ *ಸಹ* ಸುನ್ನತಿ ಹೊಂದಿರುವದು ಪ್ರಾಮುಖ್ಯವಾಗಿರುತ್ತದೆಂಬದನ್ನು ಒತ್ತಿ ಹೇಳುವದಾಗಿತ್ತು.

ಇನ್ನು ಕೆಲವರು ರೋಮಾ 2:28, 29ನ್ನು ಅವಕಾಶವಾಗಿ ಉಪಯೋಗಿಸಿ ದೇವರ ಸಂಕಲ್ಪದಲ್ಲಿ ದೀಕ್ಷಾಸ್ನಾನಕ್ಕಿರುವ ಸ್ಥಾನದ ಕುರಿತ ಉಪದೇಶದ ಮೇಲೆ ದಾಳಿ ಮಾಡುತ್ತಾರೆ. ಆ ವಾಕ್ಯಭಾಗಗಳಲ್ಲಿ ದೀಕ್ಷಾಸ್ನಾನದ ಉಲ್ಲೇಖವೇ ಇರುವದಿಲ್ಲವಾದ್ದ ರಿಂದ, ಆ ರೀತಿ ಅನ್ವಯಿಕೆ ಮಾಡುವದರಲ್ಲಿ ಸಹಜವಾಗಿಯೇ ಸಂಶಯವೆದ್ದೇಳುತ್ತದೆ. ಒಂದು ನಿರ್ದಿಷ್ಟ ವಿಷಯದ ಮೇಲೆ ಬೈಬಲ್ ಏನು ಹೇಳುತ್ತದೆಂದು ನಿಮಗೆ ತಿಳಿಯಲು ಇಚ್ಛೆಯಿದ್ದಲ್ಲಿ, ಆ ವಿಷಯವನ್ನು ಉಲ್ಲೇಖಿಸುವಂಥ ವಾಕ್ಯಭಾಗಗಳ ಕಡೆಗೆ ಹೋಗಿರಿ, ಹೊರತು ಅದರ ಬಗ್ಗೆ ಉಲ್ಲೇಖವನ್ನೇ ಮಾಡದ ಭಾಗಗಳ ಕಡೆಗೆ ಅಲ್ಲ. ಪೌಲನು ದೀಕ್ಷಾಸ್ನಾನದ ಕುರಿತು ಏನು ಉಪದೇಶಿಸಿದನೆಂದು ತಿಳಿಯಬೇಕೆಂದರೆ ಈ ವಾಕ್ಯಗಳಿಗೆ ಹೋಗಿರಿ: ರೋಮಾ 6:3-7 ಅಥವಾ ಗಲಾತ್ಯ 3:26, 27 ಹೊರತು ರೋಮಾ 2:28, 29 ಕಡೆಗೆ ಅಲ್ಲ. ಹೇಗಿದ್ದರೂ, ಕೆಲವರಿಂದ 28 ಮತ್ತು 29 ವಚನಗಳನ್ನು ಉಪಯೋಗಿಸಿ ದೀಕ್ಷಾಸ್ನಾನದ ಮಹತ್ವಕ್ಕೆ ಕಳಂಕತರುವ ಪ್ರಯತ್ನ ನಡೆಯುತ್ತಿದೆ.

ಕೆಲವರು "ಲಿಪಿ vs ಆತ್ಮ" ಕ್ಕೆ ಸಂಬಂಧಿಸಿದಂತೆ, ಈಗಾಗಲೇ ಉಲ್ಲೇಖಿಸಿದ ಅಭಿಪ್ರಾಯವನ್ನು ಉಪಯೋಗಿಸಿ ಸಾಮಾನ್ಯವಾಗಿ ವಾಗ್ವಾದ ಮಾಡುತ್ತಾರೆ. ದೀಕ್ಷಾಸ್ನಾನವು "ಧರ್ಮಶಾಸ್ತ್ರದ ಲಿಪಿ" ಯ ಭಾಗವಾಗಿದೆ, ಮತ್ತು ಈ ಕಾರಣದಿಂದ ಅದರ ಬಗ್ಗೆ ಅಷ್ಟೊಂದು ಕಳಕಳಿ ಇರುವದಿಲ್ಲ. "ಒಬ್ಬ ವ್ಯಕ್ತಿಯ ಆತ್ಮ [ಹೃದಯ] ಸರಿಯಿದ್ದರೆ, ಆತನು ದೀಕ್ಷಾಸ್ನಾನ ಹೊಂದಿದ್ದಾನೋ ಅಥವಾ ಹೊಂದಿಲ್ಲವೋ ಎಂಬುದು ಅಲ್ಲಿ ಮುಖ್ಯವೇ ಎಣಿಸುವದಿಲ್ಲ" ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಈ ವಾದದ ವಿಷಯದಲ್ಲಿರು ವ ಸಮಸ್ಯೆ ಏನೆಂದರೆ 28 ಮತ್ತು 29 ವಚನಗಳಲ್ಲಿ ಪೌಲನಿಗೆ ಅಂತಹ ಒಂದು ಅಭಿಪ್ರಾಯ ಮನಸ್ಸಿನಲ್ಲಿತ್ತೆಂಬುದಕ್ಕೆ ಒಂದು ಸಣ್ಣ ಸುಳಿವೂ ಇರುವದಿಲ್ಲ. ನಾವು ರೋಮಾ 6 ನೇ ಅಧ್ಯಾಯವನ್ನು ಅಭ್ಯಾಸಿಸುವ ವೇಳೆ ನೋಡಲಿರುವ ಹಾಗೆ, ಮಾನವರ ಕುರಿತ ದೇವರ ರಕ್ಷಣಾಸಂಕಲ್ಪದಲ್ಲಿ ದೀಕ್ಷಾಸ್ನಾನಕ್ಕೆ ಒಂದು ಮಹತ್ವದ ಪಾತ್ರವಿರುತ್ತ ದೆಂಬುದನ್ನು ಪೌಲನು ಉಪದೇಶಿಸುತ್ತಾನೆ.

ಬೇರೆ ಕೆಲವರು ಒಂದು ನಿರ್ದಿಷ್ಟವಾದ ವಾದವನ್ನು ಮಾಡುತ್ತಾರೆ, ಸುನ್ನತಿಯನ್ನು ದೀಕ್ಷಾಸ್ನಾನಕ್ಕೆ ಸರಿಗಟ್ಟಿಸುವದಕ್ಕೆ ಪ್ರಯತ್ನಿಸುತ್ತಾರೆ. ಅವರ ವಾದವು ಒಂದು ರೀತಿ ಹೀಗೆ ಸಾಗುತ್ತದೆ:

ಒಂದು ಯೆಹೂದ್ಯ ಕುಟುಂಬದಲ್ಲಿ ಜನಿಸುವದೇ ಒಬ್ಬ ಯೆಹೂದ್ಯ ಪುರುಷನನ್ನು ಯೆಹೂದ್ಯನನ್ನಾಗಿಸುತ್ತದೆ. ಎಂಟು ದಿನಗಳ ಬಳಿಕ ಸುನ್ನತಿ ಮಾಡಿಸುವದು, ಆತನೊಬ್ಬ ಯೆಹೂದ್ಯನಾಗಿ ದ್ದಾನೆಂಬದಕ್ಕೆ ಕೇವಲ ಒಂದು "ಗುರುತು" (ಅಥವಾ ಮುದ್ರೆ) ಆಗಿತ್ತಷ್ಟೇ (ನೋಡಿರಿ 4:11). ಆದ್ದರಿಂದ ಆತನು ದೇವರ ಪುತ್ರನಾಗಿರುವದಕ್ಕೂ ಸುನ್ನತಿಗೂ ಯಾವದೇ ಸಂಬಂಧವೇ ಇರಲಿಲ್ಲ.

ಅದೇ ರೀತಿಯಲ್ಲಿ, "ಹೊಸದಾಗಿ ಹುಟ್ಟುವದೇ" (ಯೋಹಾನ 3:3)- ಅವರ ಪ್ರಕಾರ, ಅದು "ನಂಬಿಕೆಯಿಂದ" ಸಾಧಿಸಲ್ಪಡುತ್ತದೆ-ಒಬ್ಬ ವ್ಯಕ್ತಿಯನ್ನು ದೇವರ ಪುತ್ರನನ್ನಾಗಿ ಮಾಡುತ್ತದೆ. ಅನಂತರದಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಆತನು ಈಗಾಗಲೇ ದೇವರ ಪುತ್ರನಾಗಿದ್ದಾನೆಂಬದಕ್ಕೆ ಕೇವಲ ಒಂದು ಗುರುತು ಅಥವಾ ಮುದ್ರೆಯಾಗಿರುತ್ತದಷ್ಟೇ. (ಕೆಲವರು ದೀಕ್ಷಾಸ್ನಾನವನ್ನು "ಅಂತರ್ಯದಲ್ಲಾದ ಶುದ್ಧೀಕರಣಕ್ಕೆ ಬಹಿರಂಗದ ಗುರುತು" ಎಂದು ಕರೆಯುತ್ತಾರೆ.) ಆದುದರಿಂದ, ಅವರು ಹೇಳುವದೇನೆಂದರೆ ಒಬ್ಬನು ದೇವರ ಮಗನಾಗುವದಕ್ಕೂ ದೀಕ್ಷಾಸ್ನಾನಕ್ಕೂ ಯಾವದೇ ಸಂಬಂಧವಿರುವದಿಲ್ಲ.

ಈ ರೀತಿ ಸಮಹೋಲಿಕೆಗೊಳಿಸುವದು ಬಹಳಷ್ಟು ತಪ್ಪುಗಳನ್ನೊಳಗೊಂಡಿದ್ದು ಅವುಗಳನ್ನು ಬಯಲುಗೊಳಿಸುವ ಕೆಲಸವನ್ನು ಎಲ್ಲಿಂದ ಪ್ರಾರಂಭಿಸಬೇಕೆಂಬುದೇ ಒಂದು ಕಷ್ಟಕರ ವಿಷಯವಾಗಿರುತ್ತದೆ. ಹೊಸ ಜನನವು "ನಂಬಿಕೆಯಿಂದ ಮಾತ್ರವೇ" ಆಗುವದೆಂದು ಬೈಬಲಿನಲ್ಲಿ ಎಲ್ಲಿಯೂ ಕಲಿಸುವದಿಲ್ಲ. ಯೇಸು ನಮಗೆ "ನಾವು ನೀರಿನಿಂದಲೂ ಆತ್ಮದಿಂದಲೂ ಹುಟ್ಟಬೇಕು" ಎಂದು ಹೇಳಿದನು (ಯೋಹಾನ 3:5). ಸಭೆಯ ಆದಿ ಶತಮಾನಗಳಿಂದಲೂ, ಒಂದು ಸಾಮಾನ್ಯವಾದ ಸಹಮತವಿತ್ತೇನೆಂದರೆ, ಯೋಹಾನ 3:5ರಲ್ಲಿ "ನೀರು" ಎಂಬುದು ನೀರಿನಿಂದ ದೀಕ್ಷಾಸ್ನಾನ ಎಂಬದನ್ನು ಸೂಚಿಸುತ್ತದೆ. ಪೇತ್ರನು ತನ್ನ ವಾಚಕರಿಗೆ ಹೇಳಿದ್ದೇನೆಂದರೆ ಅವರು ಸತ್ಯಕ್ಕೆ *ವಿಧೇಯರಾದಾಗ*, "ಪುನರ್ಜನ್ಮ (ಹೊಸದಾಗಿ) ಹೊಂದಿದರು" (1 ಪೇತ್ರ 1:22, 23). ಅಷ್ಟು ಮಾತ್ರವಲ್ಲದೆ, ಬೈಬಲ್ ಎಂದಿಗೂ ದೀಕ್ಷಾಸ್ನಾನವು ಕೇವಲ ಒಂದು ಗುರುತು ಅಥವಾ ಮುದ್ರೆ ಆಗಿದ್ದು ರಕ್ಷಣೆಗೂ ಅದಕ್ಕೂ ಯಾವ ಸಂಬಂಧವೇ ಇಲ್ಲವೆಂದು ಹೇಳುವದಿಲ್ಲ. ಬದಲಾಗಿ, ಯೇಸು ಹೇಳಿದನು, "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು" (ಮಾರ್ಕ 16:16; ಒತ್ತಿ ಹೇಳಿದ್ದು ನನ್ನದು). ಪೇತ್ರನು ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅಪೊಸ್ತಲರ ಕೃತ್ಯಗಳು 2:38; ಒತ್ತಿ ಹೇಳಿದ್ದು ನನ್ನದು).

ಹೇಗೂ, ದೀಕ್ಷಾಸ್ನಾನ ಹಾಗೂ ಸುನ್ನತಿಯನ್ನು ಸಮಗಟ್ಟಿಸುವ ಪ್ರಯತ್ನದ ವಿಷಯವಾಗಿ ಮುಖ್ಯ ಗಮನವನ್ನು ಹರಿಸೋಣ. ದೀಕ್ಷಾಸ್ನಾನ ಮತ್ತು ಸುನ್ನತಿ ನಡುವೆ ಸಮಾನತೆಯ ಗೆರೆಯನ್ನು ಎಳೆಯುವ ಯಾವದೇ ಪ್ರಯತ್ನದಿಂದ ಅನೇಕ ಅಸಂಬದ್ಧತೆಗಳನ್ನು ಉಂಟುಮಾಡುವವ ಸಾಧ್ಯತೆಯಿರುತ್ತದೆ. ಸುನ್ನತಿಯು ಯೆಹೂದ್ಯರಿಗೆ ಮಾತ್ರವೇ ಆಗಿತ್ತು; ಹಾಗಾದರೆ ನಾವು ಯೆಹೂದ್ಯರಿಗೆ ಮಾತ್ರ ದೀಕ್ಷಾಸ್ನಾನ ಮಾಡಿಸಬೇಕೋ? ಗಂಡಸರು ಮಾತ್ರವೇ ಸುನ್ನತಿ ಮಾಡಿಸಿಕೊಳ್ಳುತ್ತಿದ್ದರು; ನಾವು ಕೇವಲ ಗಂಡಸರಿಗೆ ದೀಕ್ಷಾಸ್ನಾನ ಮಾಡಿಸಬೇಕೋ? ಸಾಮಾನ್ಯವಾಗಿ, ಕೂಸುಗಳಿಗೆ ಸುನ್ನತಿ ಮಾಡಲಾಗುತ್ತಿತ್ತು; ಹಾಗಾದರೆ ನಾವು ಕೂಸುಗಳಿಗೆ ದೀಕ್ಷಾಸ್ನಾನ

ಮಾಡಿಸಬೇಕೋ? (ಕೆಲವರು ತಾವು ಕೂಸುಗಳಿಗೆ ದೀಕ್ಷಾಸ್ನಾನ ಮಾಡಿಸುವದನ್ನು ಸಮರ್ಥಿಸಿಕೊಳ್ಳು ವದಕ್ಕೆ "ಸುನ್ನತಿ = ದೀಕ್ಷಾಸ್ನಾನ" ಎಂಬ ವಾದವನ್ನು ಉಪಯೋಗಿಸುವ ಪ್ರಯತ್ನ ಮಾಡುತ್ತಾರೆ.)

ನನಗೆ ತಿಳಿದಿರುವ ಪ್ರಕಾರ, ಬೈಬಲಿನಲ್ಲಿ ದೀಕ್ಷಾಸ್ನಾನಕ್ಕೆ ಸಂಬಂಧಪಟ್ಟಂತೆ ಒಂದೇ ಒಂದು ಕಡೆಯಲ್ಲಿ ಮಾತ್ರವೇ ಸುನ್ನತಿಯ ಸಾದೃಶ್ಯವನ್ನು ಉಪಯೋಗಿಸಲಾಗಿದೆ. ಕೊಲೊಸ್ಸೆಯಲ್ಲಿನ ಸಭೆಗೆ ಪೌಲನು ಹೀಗೆ ಬರೆದನು:

> . . . ನೀವು ಆತನಲ್ಲಿ [ಕ್ರಿಸ್ತನಲ್ಲಿ] ಸುನ್ನತಿಯನ್ನೂ ಹೊಂದಿದಿರಿ; ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ. ಅಪರಾಧಗಳನ್ನು ಮಾಡುವದರಿಂದಲೂ ಸುನ್ನತಿಯಿಲ್ಲದ ಶರೀರಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ (ಕೊಲೊಸ್ಸೆ 2:11-13).

ಈ ವಾಕ್ಯಭಾಗದಲ್ಲಿ, ದೀಕ್ಷಾಸ್ನಾನ ಹಾಗೂ ಆತ್ಮೀಕ ಸುನ್ನತಿಗಳು ಸಂಬಂಧಿಸಲ್ಪಟ್ಟಿವೆ, ಆದರೆ ಅವುಗಳು ಒಂದೇ ಆಗಿರುವದಿಲ್ಲ. ದೀಕ್ಷಾಸ್ನಾನ (ನೀರಿನಲ್ಲಿ ಮುಳುಗುವದು) ಒಂದು ಮಾನವ ಚಟುವಟಿಕೆ, ಅದೇ ವೇಳೆಯಲ್ಲಿ ಆತ್ಮೀಕ ಸುನ್ನತಿಯು (ಅದು ಅಪರಾಧಗಳ ಕ್ಷಮಾಪಣೆಯನ್ನೊಳಗೊಂಡಿರುತ್ತದೆ) ಒಂದು ದೈವಿಕ ಚಟುವಟಿಕೆಯಾಗಿದೆ. ಒಬ್ಬನು ದೀಕ್ಷಾಸ್ನಾನ ಹೊಂದುವದರ *ಫಲವಾಗಿ* ಒಬ್ಬನು ದೀಕ್ಷಾಸ್ನಾನ ಮಾಡಿಸಿಕೊಂಡ *ಕ್ಷಣದಲ್ಲಿ* ಆತ್ಮೀಕ ಸುನ್ನತಿಯು ಸಂಭವಿಸುತ್ತದೆ- ಆದರೆ ಇವೆರಡೂ ಕ್ರಿಯೆಗಳು ಬೇರೆ ಬೇರೆ ಆಗಿರುತ್ತವೆ.

ದೀಕ್ಷಾಸ್ನಾನವು ನಮ್ಮ ರಕ್ಷಣೆಯ ಗುರುತು ಅಥವಾ ಮುದ್ರೆ ಎಂದು ಎಲ್ಲಿಯೂ ಸೂಚಿಸಲ್ಪಟ್ಟಿಲ್ಲ, ಆದರೆ ನಮ್ಮೊಳಗೆ ವಾಸಿಸುವ ಆತ್ಮನು ಅದಕ್ಕೆ ಮುದ್ರೆಯಾಗಿದ್ದಾನೆಂಬದು ನಿಜ. ಪೌಲನು ಕೊರಿಂಥದವರಿಗೆ ಹೇಳಿದ್ದೇನೆಂದರೆ, ದೇವರು "ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ" (2 ಕೊರಿಂಥ 1:22). ಆತನು ಎಫೆಸದವರಿಗೆ ಬರೆದನು, ". . . ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ" (ಎಫೆಸ 1:13, 14). ನಾವು ಕರ್ತನಿಗೆ ವಿಧೇಯರಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ ನಮಗೆ ಪವಿತ್ರಾತ್ಮನ "ಮುದ್ರೆ" ಕೊಡಲ್ಪಡುತ್ತದೆ (ಅಪೊಸ್ತಲರ ಕೃತ್ಯಗಳು 2:38; ನೋಡಿರಿ 5:32). ಒಂದು ವೇಳೆ ನಾನು ಒಬ್ಬ ವ್ಯಕ್ತಿಯನ್ನು ಯೆಹೂದ್ಯನನ್ನಾಗಿ ಮಾಡುವ ಹಾಗೂ ಒಬ್ಬ ವ್ಯಕ್ತಿಯನ್ನು ಕ್ರೈಸ್ತನನ್ನಾಗಿ ಮಾಡುವ ಸಂಗತಿಯ ನಡುವೆ ಪರಸ್ಪರ ಸಂಬಂಧ ಕಲ್ಪಿಸುವ ಪ್ರಯತ್ನವೊಂದನ್ನು ಮಾಡುವದಾದರೆ, ಅದು ಈ ವಿಧದಲ್ಲಿ ಇರಬಹುದಾಗಿದೆ:

ಒಂದು ಯೆಹೂದಿ ಕುಟುಂಬದಲ್ಲಿ ಹುಟ್ಟುವದು ಒಬ್ಬ ಯೆಹೂದಿ ಗಂಡಸನ್ನು

ಯೆಹೂದ್ಯನನ್ನಾಗಿ ಮಾಡುತ್ತದೆ. ಆತನು ಒಬ್ಬ ಯೆಹೂದ್ಯನೆಂಬದಕ್ಕೆ ಸುನ್ನತಿಯು ಒಂದು ಗುರುತು ಅಥವಾ ಮುದ್ರೆ ಆಗಿತ್ತು.

ಹೊಸ ಜನನವು (ಅದರಲ್ಲಿ ನೀರಿನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಸಹ ಸೇರಿರುತ್ತದೆ; ಯೋಹಾನ 3:5) ಒಬ್ಬನನ್ನು ಕ್ರೈಸ್ತನನ್ನಾಗಿಸುತ್ತದೆ. ಒಬ್ಬನು ಹೊಸದಾಗಿ ಹುಟ್ಟಿದಾಗ, ಆತನಿಗೆ ಅವನೊಬ್ಬ ಕ್ರೈಸ್ತನೆಂಬದಕ್ಕೆ ಒಂದು ಗುರುತು ಅಥವಾ ಮುದ್ರೆಯಾಗಿ (ನೋಡಿರಿ ರೋಮಾ 8:9) ಪವಿತ್ರಾತ್ಮನು ಅನುಗ್ರಹಿಸಲ್ಪಡುತ್ತಾನೆ (ಅಪೊಸ್ತಲರ ಕೃತ್ಯಗಳು 2:38).

ಖಂಡಿತವಾಗಿಯೂ, ಈ ಸಮಾಂತರ ಹೋಲಿಕೆಯು ಪರಿಪೂರ್ಣವಾಗಿರುವದಿಲ್ಲ. ಸುನ್ನತಿಯು ಯೆಹೂದ್ಯ ಗಂಡಸರಿಗಾಗಿ ಇತ್ತು ಎಂಬ ಸತ್ಯದ ಹೊರತಾಗಿ, ಇನ್ನೊಂದು ವ್ಯತ್ಯಾಸವೂ ಇರುತ್ತದೆ: ನಿಮಯದ ಪ್ರಕಾರ, ಶಾರೀರಿಕ ಜನನದ ಎಂಟು ದಿವಸಗಳ ಬಳಿಕ ಶಾರೀರಿಕ ಸುನ್ನತಿ ಸಂಭವಿಸುತ್ತಿತ್ತು, ಆದರೆ ದೇವರು ನಮಗೆ ಪವಿತ್ರಾತ್ಮನನ್ನು ನಾವು ನೀರಿನಿಂದಲೂ ಆತ್ಮದಿಂದಲೂ ಜನಿಸಿದ ಕೂಡಲೇ ಅನುಗ್ರಹಿಸುತ್ತಾನೆ ಹೊರತು ಎಂಟು ದಿವಸಗಳ ನಂತರವಲ್ಲ. ಹಾಗಿದ್ದರೂ, ಈ ಎರಡೂ ಪ್ರಕ್ರಿಯೆಗಳ ನಡುವೆ ಸಾಮ್ಯತೆಗಳಿರುತ್ತವೆ.

ಒಬ್ಬ ಯೆಹೂದ್ಯನು “ನಿಜ ಯೆಹೂದ್ಯ” ನಾಗಿರಬೇಕೆಂದರೆ, ಆತನು ಕೇವಲ ಶರೀರದಲ್ಲಿ ಸುನ್ನತಿ ಹೊಂದಿದ್ದರೆ ಸಾಕಾಗಿರಲಿಲ್ಲ; ಆತನು ಹೃದಯದಲ್ಲಿ ಸಹ ಸುನ್ನತಿ ಹೊಂದಿರುವ ಅಗತ್ಯವಿತ್ತು. ಆತನ ಹೃದಯವು ಕರ್ತನ ಮೇಲೆ ನೆಟ್ಟಿರುವದು ಅಗತ್ಯವಿತ್ತು; ಆತನು ಕರ್ತನಿಗೆ ಸಮರ್ಪಿತನಾಗಿರಬೇಕಿತ್ತು. ಅದೇ ರೀತಿಯಲ್ಲಿಯೇ, “ನಿಜ ಕ್ರೈಸ್ತರು” ಆಗಿರಬೇಕೆಂದರೆ, ಬಹಿರಂಗದಲ್ಲಿ (ಹೊರಗೆ) ಸರಿಯಾಗಿ ಇರುವದಷ್ಟೇ ಅಲ್ಲದೆ ಅಂತರ್ಯದಲ್ಲಿ ಸಹ ಸರಿಯಾಗಿ ಇರುವ ಅಗತ್ಯವಿರುತ್ತದೆ.

ನಾನು ಹೊಸ ಒಡಂಬಡಿಕೆಯ ಕ್ರೈಸ್ತತ್ವವನ್ನು ಪುನಃಸ್ಥಾಪಿಸುವ ಸವಾಲಿಗೆ ಸಮರ್ಪಿತನಾಗಿದ್ದೇನೆ. ಈ ಪುನಃಸ್ಥಾಪನೆಯ ಒಂದು ಅಂಶವು ಬಹಿರಂಗದ್ದಾಗಿದೆ: ನಾವು “ಬೈಬಲಿನ ಕಾರ್ಯಗಳನ್ನು ಬೈಬಲಿನ ದಾರಿಗಳಲ್ಲೇ ಮಾಡುವ” ಅಗತ್ಯವಿರುತ್ತದೆ. ಅದೇ ವೇಳೆಯಲ್ಲಿ, ಬರೀ ಬಹಿರಂಗದ ಬಗ್ಗೆಯೇ ಒತ್ತು ಕೊಡುತ್ತಾ ಅಂತರ್ಯವನ್ನು ನಿರ್ಲಕ್ಷಿಸಬಹುದಾದ ಅಪಾಯವು ಸದಾ ಇರುತ್ತದೆಂಬುದು ನನಗೆ ಗೊತ್ತಿದೆ. ಏನಿದ್ದರೂ, ಪ್ರಥಮ ಶತಮಾನದ ಕ್ರೈಸ್ತತ್ವದ ನಮೂನೆಗಳನ್ನು ಪುನಃಸ್ಥಾಪಸುವದು ಸುಲಭವಾಗಿ ರಬಹುದು ಆದರೆ ಆತ್ಮವನ್ನು ಪುನಃಸ್ಥಾಪಿಸುವದು ಕಷ್ಟಕರವಾಗಿರುತ್ತದಷ್ಟೆ. ಈ ಕಾರಣದಿಂದಾಗಿ, ನಾನು ಪುನಃ ಹೇಳುವದೇನೆಂದರೆ, “ನಿಜ ಕ್ರೈಸ್ತರಾಗಿರಬೇಕೆಂದರೆ” ಹೊರಗಡೆಯಲ್ಲಿ ಸರಿಯಾಗಿರತಕ್ಕದ್ದು ಮಾತ್ರವಲ್ಲದೆ ನಾವು ಒಳಗಡೆಯಲ್ಲಿಯೂ ಸಹ “ಸರಿಯಾಗಿ” ಇರಬೇಕಾದ ಅಗತ್ಯವಿರುತ್ತದೆ!

ನಿಮಗೊಂದು “ಬಹಿರಂಗದ ಅಗತ್ಯ” ಅಥವಾ “ಅಂತರ್ಯದ ಅಗತ್ಯ” ಇರುವದಾದರೆ, ಅದರ ಬಗ್ಗೆ ಈ ದಿನವೇ ಕಾಳಜಿ ವಹಿಸಿರಿ ಎಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ! ಕ್ರಿಸ್ತನ ಬಳಿಗೆ ಬನ್ನಿರಿ ಮತ್ತು ಆತನ ರಕ್ತವು ನಿಮ್ಮನ್ನು ಎಲ್ಲಾ ಪಾಪಗಳಿಂದ ಶುದ್ಧಮಾಡುವಂತೆ ಅನುಮತಿಸಿರಿ (6:3-7; ಗಲಾತ್ಯ 3:26, 27; ಕೊಲೊಸ್ಸೆ 1:14; 1 ಯೋಹಾನ 1:7, 9)!

## ಒಂದು ಸಾರಾಂಶ

ರೋಮಾ 1ರಲ್ಲಿ, ದೇವರು ಅನ್ಯಜನಾಂಗದ ಜಗತ್ತನ್ನು ಪ್ರಕಟಣೆ ಕೊಡದೆ ಬಿಟ್ಟಿರಲಿಲ್ಲ ಎಂಬದನ್ನು ಪೌಲನು ಒತ್ತಿ ಹೇಳಿದನು. ದೇವರು ಯೆಹೂದ್ಯೇತರರಿಗೆ ವಿವಿಧ ರೀತಿಗಳಲ್ಲಿ ತನ್ನನ್ನು ಪ್ರಕಟಿಸಿಕೊಂಡಿದ್ದನು. ಆ ಪ್ರಕಟಣೆ, ಅದನ್ನು "ಮೂಲಪಿತೃಗಳ ಸಂಪ್ರದಾಯಗಳು" ಎಂದು ಭಾವಿಸಬಹುದು, ಅದರಲ್ಲಿ ಯಜ್ಞಗಳನ್ನು ಅರ್ಪಿಸುವ ಅಗತ್ಯತೆಯು ಸೇರಿತ್ತು. ಹೇಗೂ, ಆ ಸಂಪ್ರದಾಯಗಳ ನೆನಪು ಮಂದವಾಗುತ್ತಾ ಬಂದಿದ್ದರೂ, ಅನ್ಯಜನರಿಗೆ ಸೃಷ್ಟಿಸಲ್ಪಟ್ಟ ಜಗತ್ತಿನಲ್ಲಿ ದೇವರ ಕುರಿತ ಪುರಾವೆಗಳಿದ್ದವು (1:18-20).

ಅಧ್ಯಾಯ 2ರಲ್ಲಿ, ಯೆಹೂದ್ಯೇತರರು ಸ್ವಾಭಾವಿಕವಾಗಿಯೇ ಮೋಶೆಯ ಧರ್ಮಶಾಸ್ತ್ರದ ಕೆಲವು ವಿಧಿಗಳನ್ನು ಕೈಕೊಂಡು ನಡೆದಿದ್ದರು ಯಾಕೆಂದರೆ ದೇವರು ಅವರಿಗೆ ಮನಸಾಕ್ಷಿಯನ್ನು ಕೊಟ್ಟಿದ್ದನೆಂದು ಪೌಲನು ತಿಳಿಸುತ್ತಾನೆ. Thomas ಪ್ರತಿಪಾದಿಸುವದೇನೆಂದರೆ, "ಯಾವನೊಬ್ಬನೂ ದೇವರ ಮುಂದೆ ಧರ್ಮಶಾಸ್ತ್ರವಿಲ್ಲದವನಾಗಿ ಇರುವದಿಲ್ಲ!"[97] ಯೆಹೂದ್ಯರು ತಮ್ಮ ಧರ್ಮಶಾಸ್ತ್ರವನ್ನು ದೋಷವಿಲ್ಲದೆ ಕೈಕೊಂಡು ನಡೆದಿದ್ದರೆ, ಅವರಿಗೆ ರಕ್ಷಣೆಯ ಅಗತ್ಯತೆಯಿದ್ದಿರುತ್ತಿರಲಿಲ್ಲ. ಅನ್ಯಜನರು ತಮ್ಮ ಧರ್ಮಶಾಸ್ತ್ರಕ್ಕೆ ಸತ್ಯವಾಗಿ ನಡೆದಿದ್ದರೆ, ಅವರಿಗೋಸ್ಕರ ಯೇಸು ಶಿಲುಬೆಯ ಮೇಲೆ ಮರಣಿಸುವಂಥ ಅಗತ್ಯತೆ ಇರುತ್ತಿರಲಿಲ್ಲ. ರೋಮಾಪುರ ಪತ್ರಿಕೆಯ ಮೊದಲ ಅಧ್ಯಾಯಗಳಲ್ಲಿ ಪೌಲನ ವಾದವೇನಾಗಿತ್ತೆಂದರೆ, *ಅವರಲೊಬ್ಬರೂ* ತಮಗೆ ದೇವರಿಂದ ಕೊಡಲ್ಪಟ್ಟ ಜ್ಞಾನಪ್ರಕಾಶಕ್ಕೆ ಅನುಸಾರವಾಗಿ ಜೀವಿಸಲಿಲ್ಲ. ಆದುದರಿಂದ, ಎಲ್ಲಾ ಜನರಿಗೂ- ಯೆಹೂದ್ಯರಿಗೆ ಮತ್ತು ಅನ್ಯಜನರಿಗೆ- ದೇವರ ನೀತಿಯ ಅಗತ್ಯತೆ ಯಾವಾಗಲೂ ಇದ್ದೇ ಇತ್ತು!

---

### ಅಡಿ ಟಿಪ್ಪಣಿಗಳು

[1]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 119. [2]D. Stuart Briscoe, *Romans*, The Communicator's Commentary (Waco, Tex.: Word Books, 1982), 58. [3]Vine, 388. [4]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 41 ರಿಂದ ಯುದ್ಧಕೊಳ್ಳಲ್ಪಟ್ಟದ್ದು. [5]Quoted in Barclay, 41. [6]Ibid. [7]Mishnah *Sanhedrin* 10.1. [8]*Akedath Jizehak*; quoted in Charles Hodge, *Romans*, The Crossway Classic Commentaries (Wheaton, Ill.: Crossway Books, 1993), 60. [9]John MacArthur, Jr., *Romans 1—8*, The MacArthur New Testament Commentary (Chicago: Moody Press, 1991), 120. [10]ವಚನ 7 ಮತ್ತು 8 ರಲ್ಲಿ "ಲೋಪಚಿಹ್ನೆಗಳು" ಇರುತ್ತವೆ. ಅಂದರೆ ಆಲೋಚನೆಯನ್ನು ಪೂರ್ತಿಗೊಳಿಸುವದಕ್ಕೆ ಪದಗಳನ್ನು ಸೇರ್ಪಡೆಗೊಳಿಸಬೇಕು. ಈ ವಚನಗಳ ವಿಷಯದಲ್ಲಿ, ವಚನ 6ರಿಂದ "ದೇವರು ಬರಮಾಡುವನು" ಎಂಬದನ್ನು 7 ಮತ್ತು 8 ವಚನಗಳಲ್ಲಿ ಸೇರ್ಪಡೆಗೊಳಿಸಬೇಕು.

[11]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press, 1994), 84. [12]Vine, 462. [13]Leon Morris, *The Epistle to the Romans* (Grand Rapids, Mich.: Wm. B. Eerdmans

Publishing Co., 1988), 116. [14]F. Büchsel, "*eritheía*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 256. [15]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 75. [16]Vine, 26. [17]Moo, 75. [18]Vine, 17. [19]Ibid., 27. [20]C. K. Barrett, *A Commentary on the Epistle to the Romans*, Harper's New Testament Commentaries (N.p.: Harper & Row, 1957; reprint, Peabody, Mass.: Hendrickson Publishers, 1987), 51.

[21]ಗ್ರೀಕ್ ಪ್ರತಿಯಲ್ಲಿ, "ಧರ್ಮಶಾಸ್ತ್ರ" ಎಂಬುದರ ಮುಂಚೆ ನಿಖರ ಲೇಖನ (ದಿ) ಎಂಬುದಿಲ್ಲ, ಆದರೆ ನಂತರದಲ್ಲಿ ಉಲ್ಲೇಖಿಸಲಾಗುವ "ಧರ್ಮಶಾಸ್ತ್ರ" ಎಂಬುದರ ಮುಂಚೆ ಇರುತ್ತದೆ, ಆದ್ದರಿಂದ ಇವೆರಡೂ ಮೋಶೆಯ ಧರ್ಮಶಾಸ್ತ್ರವನ್ನು ಸೂಚಿಸುತ್ತವೆಂಬದು ಈ ವಾಕ್ಯಭಾಗದಿಂದ ತಿಳಿಯುತ್ತದೆ. [22]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 660. [23]ಪದಗಳಲ್ಲಿನ ಹೋಲಿಕೆಯ ಕಾರಣದಿಂದ, ರೋಮಾ 2:14, 15 ವಚನಗಳು ಕರ್ತನು ಯೆರೆಮೀಯ 31:31-34 ರಲ್ಲಿ ಮಾಡಿದ ವಾಗ್ದಾನದ ನೆರವೇರಿಕೆಯಾಗಿರುತ್ತದೆಂದು ಕೆಲವರು ತೀರ್ಮಾನಕ್ಕೆ ಬರುತ್ತಾರೆ. ಇಲ್ಲಿ ಕೆಲವು ಪದಗಳು ಏಕರೀತಿಯಾಗಿರುತ್ತವೆ, ಆದರೆ ಪೌಲನು ಹಳೆ ಒಡಂಬಡಿಕೆ ಕಾಲದಲ್ಲಿ ಅನ್ಯಜನರಿಗಿದ್ದ "ಸ್ವಾಭಾವಿಕ" ಧರ್ಮಶಾಸ್ತ್ರವನ್ನು ಮನಸ್ಸಿನಲ್ಲಿ ಮಾತಾಡುತ್ತಿದ್ದಾನೆ, ಆದರೆ ಯೆರೆಮೀಯದಲ್ಲಿನ ವಾಕ್ಯಭಾಗವು ಕ್ರೈಸ್ತರ ಪ್ರಕಟಿಸಲ್ಪಟ್ಟ "ಹೊಸ ಒಡಂಬಡಿಕೆ" ಬಗ್ಗೆ-ಯೇಸು ಕ್ರಿಸ್ತನ ಹೊಸ ಒಡಂಬಡಿಕೆ ಬಗ್ಗೆ ಸೂಚಿಸುತ್ತದೆ (ನೋಡಿರಿ ಇಬ್ರಿಯ 8:7-13). [24]*The Analytical Greek Lexicon* (London: Samuel Bagster & Sons, 1971), 213. [25]Vine, 122. [26]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 967. [27]Morris, 128. [28]Alfred Tennyson, "Sea Dreams," *The Works of Tennyson*, ed. Hallam Tennyson (New York: Macmillan Co., 1923), 155. Tennyson (1809–1892) was the preeminent English poet of his time. [29]Quoted in Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), 51. [30]Briscoe, 63–64.

[31]Larry Deason, *"The Righteousness of God": An Indepth Study of Romans*, rev. ed. (Clifton Park, N.Y.: Life Communications, 1989), 81. [32]Vine, 71. [33]Morris, 131. [34]See Vine, 328. [35]Morris, 132; Vine, 35. The word is translated "see fit" in 1:28. [36]See Morris, 132; Vine, 214. [37]See Jay Lockhart and David L. Roper, *Ephesians and Philippians*, Truth for Today Commentary (Searcy, Ark.: Resource Publications, 2009), 394–95. [38]Ibid., 443. [39]C. E. B. Cranfield, *Romans: A Shorter Commentary* (Grand Rapids, Mich.: Wm. B. Eerdmans Publishing Co., 1985), 55. [40]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 314.

[41]Adapted from Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 94. [42]Morris, 137; see Talmud *Abodah Zarah* 53b; Mishnah *Abodah Zarah* 4.5. [43]Josephus *Antiquities* 18.3.5. [44]Richard A. Batey, *The Letter of Paul to the Romans*, The Living Word Commentary (Austin, Tex.: R. B. Sweet Co., 1969), 41. [45]Hodge, 59–60. [46]Morris, 131. [47]John D. White, Sr., Class Notes, *Romans*, Tri-State School of Preaching and Biblical Studies, Evansville, Indiana (1988). [48]ಈ ಹೇಳಿಕೆಯು ಯೆಹೆಜ್ಕೇಲ 36:20, 21 ರಲ್ಲಿರುವಂತದು ಎಂದು ಅನೇಕ ಲೇಖಕರು ಸಹ ಎತ್ತಿತೋರಿತ್ತಾರೆ. [49]F. F. Bruce, *The Letter*

*of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 88. [50]Adapted from Stott, 92.

[51]Lard, 95. [52]Rudyard Kipling, "The Disciple," *Rudyard Kipling's Verse*, def. ed. (Garden City, N.Y.: Doubleday and Co., 1940), 782. Kipling (1865–1936) ಒಬ್ಬ ಹೆಸರಾಂತ ಆಂಗ್ಲ ಕಾದಂಬರಿಕಾರ, ಸಣ್ಣಕಥೆಗಳ ಬರಹಗಾರ ಮತ್ತು ಕವಿಯಾನಾಗಿದ್ದನು. [53]Vine, 102. [54]ಯೆಹೂದ್ಯರಿಗೆ ಸುನ್ನತಿಯು ಎಷ್ಟೊಂದು ಪ್ರಾಮುಖ್ಯವಾಗಿತ್ತೆಂದರೆ ಅದು ಆದಿ ಸಭೆಯಲ್ಲಿ ಒಂದು ದೊಡ್ಡ ಸಮಸ್ಯೆಯಾಗಿ ತಲೆದೂರಿತ್ತು. ಅನ್ಯಜನಾಂಗದೊಳ ಗಿಂದ ಕ್ರೈಸ್ತರಾಗಿರುವವರು ಸಹ ಸುನ್ನತಿ ಮಾಡಿಸಿಕೊಳ್ಳಬೇಕೆಂದು ಕೆಲವು ಯೆಹೂದಿ ಕ್ರೈಸ್ತರು ಪಟ್ಟುಹಿಡಿದಿದ್ದರು (ನೋಡಿರಿ ಅಪೊಸ್ತಲರ ಕೃತ್ಯಗಳು 15:1). [55]Quoted in Briscoe, 71; see Mishnah *Sanhedrin* 10.1. [56]Quoted in Stott, 92. [57]Quoted in MacArthur, 160. [58]Morris, 140, n. 151. [59]Vine, 340. [60]Morris, 140.

[61]Vine, 133. *Logizomai* ಎಂಬುದು 4ನೇ ಅಧ್ಯಾಯದಲ್ಲಿ ಮುಖ್ಯ ಪದವಾಗಿದೆ. [62]Stott, 93. [63]Adapted from Morris, 141. [64]*The Analytical Greek Lexicon*, 82. [65]McGarvey and Pendleton, 316. [66]A plural of κρυπτός (*kruptos*) is translated "secrets" in 2:16. [67]ರೋಮಾಪುರದಲ್ಲಿ ನಂತರ ಭಾಗದಲ್ಲಿ, ವಿಶೇಷವಾಗಿ 8ನೇ ಅಧ್ಯಾಯದಲ್ಲಿ, ಪೌಲನು ಕ್ರೈಸ್ತರ ಜೀವಿತಗಳಲ್ಲಿ ಪವಿತ್ರಾತ್ಮನ ಕೆಲಸದ ಬಗ್ಗೆ ಮಾತಾಡಿದನು; ಆದರೆ 2ನೇ ಅಧ್ಯಾಯದಲ್ಲಿ ಆತನು ಯೆಹೂದ್ಯರ ಹೃದಯಗಳಲ್ಲಿ ದೇವರ ಕೆಲಸದ ಕುರಿತು ಮಾತಾಡುತ್ತಿದ್ದಾನೆ. [68]Morris, 142. [69]Will L. Thompson, "There's a Great Day Coming," *Songs of the Church*, comp. and ed. Alton H. Howard (West Monroe, La.: Howard Publishers, 1977). [70]Adapted from J. W. MacGorman, *Layman's Bible Book Commentary*, vol. 20, *Romans, 1 Corinthians* (Nashville: Broadman Press, 1980), 32.

[71]Charles R. Swindoll, *Coming to Terms with Sin: A Study of Romans 1—5* (Anaheim, Calif.: Insight for Living, 1999), 31. [72]Jimmy Allen, *Survey of Romans*, 7th ed. (Searcy, Ark.: By the author, 1994), 44. [73]Stott, 83–84. [74]Morris, 116. [75]J. D. Thomas, *Romans*, The Living Word (Austin, Tex.: R. B. Sweet Co., 1965), 19. [76]MacArthur, 128 (emphasis added). [77]Thomas, 19 (emphasis added). [78]Adapted from Briscoe, 56. [79]Prentice Meador, Jr., untitled sermon preached at Prestoncrest church of Christ, Dallas, Texas, n.d., cassette. [80]"ಮನಸಾಕ್ಷಿ" ಎಂಬ ಪದವು ರೋಮಾ 14 ಮತ್ತು 15 ರಲ್ಲಿ ಸಿಕ್ಕುವದಿಲ್ಲ, ಆದರೆ ಅಲ್ಲಿ ಪೌಲನು ಹೇಳಿದಂಥ ಬಹಳಷ್ಟು ಸಂಗತಿಗಳ ತಾತ್ಪರ್ಯದಲ್ಲಿ ಈ ಪರಿಕಲ್ಪನೆಯು ಅಡಕವಾಗಿದೆ (ನೋಡಿರಿ 14:14, 23).

[81]ಈ ಭಾಗದಲ್ಲಿನ ಅನೇಕ ಹೇಳಿಕೆಗಳನ್ನು "ಅಪೊಸ್ತಲರ ಕೃತ್ಯ, 11," ಟ್ರುಥ್ ಪಾರ್ ಟುಡೇ 17 ರಿಂದ ತೆಗೆದುಕೊಳ್ಳಲಾಗಿದೆ, ಸಂ.2 (ಜೂಲೈ 1996):29-43. [82]*The Interlinear Greek-English New Testament: The Nestle Greek Text with a New Literal English Translation by Alfred Marshall* (London: Samuel Bagster & Sons, 1958), 580 (emphasis added). [83]Moo, 126. [84]Stott, 86. [85]Batey, 38. [86]Chris Bullard, "A Universe in Reverse," sermon preached at Overland Park church of Christ, Overland Park, Kansas, 10 February 1991, cassette. [87]Thomas, 15. [88]"ನಾನು ಸಾರುವ ಸುವಾರ್ತೆಯ ಪ್ರಕಾರ" ಎಂದರೆ ಸುವಾರ್ತೆಯಲ್ಲಿರುವಂಥ ಸತ್ಯಗಳ ಅನುಸಾರವಾಗಿ ನಾವು ನ್ಯಾಯತೀರಿಸಲ್ಪ ಡುವೆವು ಎಂದರ್ಥವಾಗಿರಬಹುದು (ನೋಡಿರಿ ಯೋಹಾನ 12:48), ಆದರೆ ಇಲ್ಲಿ ಬಹುಶಃ ಅದರರ್ಥವು ಸುವಾರ್ತೆಯ ಕಥೆಯಲ್ಲಿ ನಾವು ನ್ಯಾಯತೀರಿಸಲ್ಪಡುವೆವು ಎಂಬ ಸಂಗತಿಯು ಸಹ ಸೇರಿರುತ್ತದೆಂದಾಗಿರಬಹುದು. [89]"Voltaire" (1694–1778) was the pen name of Franćois-Marie Arouet, a celebrated French writer. [90]Adapted from Moo, 80. This statement has also been attributed to the German philosopher Heinrich Heine (1797–1856).

[91]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 53. [92]Vine, 520. [93]Stott, 67. [94]John Fawcett, "The Precious Book Divine," *Songs of Faith and Praise,* comp. and ed. Alton

H. Howard (West Monroe, La.: Howard Publishing Co., 1994). [95]Lard, 97. [96]ಇಂದು ಸಭೆಯು “ಆತ್ಮೀಕ ಇಸ್ರಾಯೇಲ್” ಎಂಬದಾಗಿ ಅನೇಕ ವಾಕ್ಯಭಾಗಗಳು ತೋರಿಸಿಕೊಡುತ್ತವೆ. 1 ಕೊರಿಂಥ 10:1 ರಲ್ಲಿ, ಪೌಲನು ಒಂದು ಅನ್ಯಜನಾಂಗದ ಸಭೆಗೆ ಅರಣ್ಯದಲ್ಲಿದ್ದ ಯೆಹೂದ್ಯರ ಬಗ್ಗೆ ಹೇಳಿ ಅವರನ್ನು “ನಮ್ಮ ಪಿತೃಗಳು” ಎಂದು ಕರೆದದನು (ಒತ್ತಿ ಹೇಳಿದ್ದು ನನ್ನದು). [97]Thomas, 14.